ಕರ್ನಾಟಕ ಸರ್ಕಾರ

ಕನ್ನಡ ಕಟ್ಟಿದವರು ಮಾಲೆ



# ಸಿದ್ಧನಾಥ ಬಳ್ಳಾರಿ

ಡಾ. ಶಕುಂತಲಾ ಎಂ. ಹೆಗಡೆ

ಕನ್ನಡ ಪುಸ್ತಕ ಪ್ರಾಧಿಕಾರ

ಡಾ. ಸಿದ್ದನಾಥ ಬಳ್ಳಾರಿ

ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

## ಡಾ. ಸಿದ್ದಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

# ಡಾ. ಸಿದ್ದನಾಥ ಬಳ್ಳಾರಿ

## ಡಾ. ಶಕುಂತಲಾ ಎಮ್. ಹೆಗಡೆ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು-೫೬೦ ೦೦೨

**DR. SIDDANATH BALLARI A Monograph on Dr. Siddanath Ballari in Kannada Written by Dr. Shakuntala M. Hegade Published By *B.H Mallikarjun*, Administrative Officer, Kannada Pustaka Pradhikara, Kannada Bhavana, J.C.Road, Bengaluru - 560 002.**

© ಈ ಆವೃತ್ತಿಯ ಗ್ರಂಥಸ್ವಾಮ್ಯ - **ಕನ್ನಡ ಪುಸ್ತಕ ಪ್ರಾಧಿಕಾರ**, ಬೆಂಗಳೂರು

| | | |
|---|---|---|
| First Print | : | 2012 |
| Pages | : | xlxvi + 92 |
| Copies | : | 1000 |
| Price | : | ₹ 60.00 |

| | | |
|---|---|---|
| ಮೊದಲ ಮುದ್ರಣ | : | ೨೦೧೨ |
| ಪುಟಗಳು | : | xlxvi + ೯೨ |
| ಪ್ರತಿಗಳು | : | ೧೦೦೦ |
| ಬೆಲೆ | : | ರೂ. ೬೦.೦೦ |

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು:

**ಬಿ.ಎಚ್.ಮಲ್ಲಿಕಾರ್ಜುನ ಕೆ.ಸಿ.ಎ.ಎಸ್.**

ಆಡಳಿತಾಧಿಕಾರಿಗಳು

**ಕನ್ನಡ ಪುಸ್ತಕ ಪ್ರಾಧಿಕಾರ**

ಕನ್ನಡ ಭವನ, ಜೆ.ಸಿ.ರಸ್ತೆ

ಬೆಂಗಳೂರು-೫೬೦ ೦೦೨

ಮುದ್ರಕರು:

**ಮೆ|| ಪ್ರಿಂಟ್ ಪಾರ್ಕ್**

೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,

ಶ್ರೀರಾಂಪುರಂ ಅಂಚೆ, ಬೆಂಗಳೂರು-೫೬೦ ೦೨೧

ದೂ : ೦೮೦-೨೩೪೨೨೮೩೮

# ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

**ಡಾ. ಸಿದ್ದಲಿಂಗಯ್ಯ**

ಸಂಪಾದಕರು

**ಡಾ. ಕರೀಗೌಡ ಬೀಚನಹಳ್ಳಿ**


ಸಂಪಾದಕ ಮಂಡಳಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**

**ಶ್ರೀ ಹೊರೆಯಾಲ ದೊರೆಸ್ವಾಮಿ**

**ಪ್ರೊ ಸುಕನ್ಯಾ ಮಾರುತಿ**

**ಡಾ. ಎಚ್. ಟಿ. ಪೋತೆ**

**ಶ್ರೀ ಪ್ರಕಾಶ್ ಕಂಬತ್ತಳ್ಳಿ**

**ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ**

ಆಡಳಿತಾಧಿಕಾರಿಗಳು

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ 'ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ, ಸುಕನ್ಯಾ ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ, ಶ್ರೀ ಜೆ.ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

**(ಡಾ. ಸಿದ್ದಲಿಂಗಯ್ಯ)**

**ಅಧ್ಯಕ್ಷರು**

# ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಹೋರಾಟದ ಕಥನವನ್ನು ಕುರಿತು ನುರಿತ ಲೇಖಕರಿಂದ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸಬೇಕೆಂದು ತೀರ್ಮಾನಿಸಿತು. ಈ ನಿಟ್ಟಿನಲ್ಲಿ 'ಸಂಪಾದಕ ಸಮಿತಿ'ಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯ ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ ಕೌಟುಂಬಿಕ ಹಿನ್ನೆಲೆ-ವಿವರಗಳು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ-ಪ್ರಭಾವಗಳು, ಭಾಗವಹಿಸಿದ ಚಳುವಳಿ-ಹೋರಾಟಗಳು, ಸಂಘಟನೆಗಳು, ನಾಡು-ನುಡಿ-ಸಾಹಿತ್ಯ-ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು, ಮಾನವೀಯ ಗುಣ-ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩ ಎಲ್ಲಾ ಬಗೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ, ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯದಲ್ಲಿ ಪ್ರೀತ್ಯಾದರಗಳು

ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರು ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯ ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ ಅವುಗಳನ್ನೆಲ್ಲಾ ಸಂಪಾದಕ ಮಂಡಲಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು,

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ದಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ ಅವರು, ಹಿಂದಿನ ಶ್ರೀ ಅಶೋಕ ಎನ್.ಚಲವಾದಿ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ.ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು-ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಶ್ರೀಮತಿ ಸುಕನ್ಯಾ ಮಾರುತಿ, ಡಾ. ಹೆಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ-ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗು ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

**ಡಾ. ಕರೀಗೌಡ ಬೀಚನಹಳ್ಳಿ**

**ಸಂಪಾದಕ**

# ನನ್ನ ನುಡಿ

"ಬಾರಿಸು ಕನ್ನಡ ಡಿಂಡಿಮವ ಓ ಕರ್ನಾಟಕ ಹೃದಯ ಶಿವ" ಎಂದು ಕುವೆಂಪು ಅವರು ಹೇಳಿದಂತೆ, ಕನ್ನಡ ಡಿಂಡಿಮವನ್ನು ಗಡಿನಾಡು ಸೊಲ್ಲಾಪುರದ ತುಂಬೆಲ್ಲ ಬಾರಿಸಿದವರು ಡಾ||ಸಿದ್ಧನಾಥ ಬಳ್ಳಾರಿ ಅವರು. ಗಡಿಭಾಗದಲ್ಲಿ ಕನ್ನಡದ ಕ್ರಾಂತಿ ಎಬ್ಬಿಸಿ ಆ ಕೂಗು ದಿಲ್ಲಿಯವರೆಗೆ ಮುಟ್ಟುವಂತೆ ಹೋರಾಟ ಮಾಡಿದರು. ಅವರು ಬಳ್ಳಾರಿ ಜಿಲ್ಲೆಯಲ್ಲಿದ್ದಾಗಿನ ಹೋರಾಟ ಸ್ವಾತಂತ್ರ್ಯ ಚಳುವಳಿಗಾಗಿ ಸೊಲ್ಲಾಪುರದಲ್ಲಿಯ ಹೋರಾಟ ಕರ್ನಾಟಕ ಏಕೀಕರಣ ಚಳುವಳಿಗಾಗಿ, ಈ ಎರಡರಲ್ಲಿಯೂ ಅವರು ಸಂಪೂರ್ಣ ಸಮರ್ಪಣ ಭಾವದಿಂದ ತೊಡಗಿಸಿಕೊಂಡಿದ್ದಾರೆ. ಇದರಿಂದ ದೇಶ, ನಾಡ ಮೇಲಿಟ್ಟಿರುವ ಅವರ ಅನನ್ಯ ಪ್ರೀತಿ ವ್ಯಕ್ತವಾಗುವುದು. ಗಡಿಭಾಗಗಳು ಕರ್ನಾಟಕದಲ್ಲಿ ಸೇರಿ ಸಂಯುಕ್ತ ಕರ್ನಾಟಕವಾಗಬೇಕೆಂದು ಬಯಸಿದರು. ಅವರು ಬದುಕಿರುವಾಗಲೇ ಸೋಲ್ಲಾಪುರ, ಜತ್ತ, ಅಕ್ಕಲಕೋಟಗಳು ತಮ್ಮ ಕೈ ಬಿಟ್ಟಿದ್ದು ಮಹಾಜನ ವರದಿಯೂ ಜಾರಿಗೆ ಬರಲಾರದ್ದು ಕಂಡು ಅವರಿಗೆ ಬಹಳ ನೋವಾಯಿತು. ಅಲ್ಲದೆ ಆ ಕೊರಗು ಕೊನೆ ತನಕ ಉಳಿಯಿತು.

ಡಾ|| ಸಿದ್ಧನಾಥ ಬಳ್ಳಾರಿಯವರ ನಂತರ ಸೋಲ್ಲಾಪುರವು ಕರ್ನಾಟಕಕ್ಕೆ ಸೇರಬೇಕೆಂಬ ಆ ಸೋಲು ಅಡಗುತ್ತಿದೆ. ಅಂದು ಸೊಲ್ಲಾಪುರ ಕನ್ನಡಿಗರ ಸ್ಫೂರ್ತಿಯ ಕೇಂದ್ರವಾದ ಡಾ||ಸಿದ್ಧನಾಥ ಬಳ್ಳಾರಿಯವರ ನೆನಪು ಮಾಸುತ್ತಿದೆ. ಗಡಿನಾಡಿನಲ್ಲಿ ಕನ್ನಡ ಕಟ್ಟಿದ ಕೆಚ್ಚೆದೆಯ ಹೋರಾಟಗಾರನ ನೆನಪು ಅಳಿಯದೆ ಶಾಶ್ವತವಾಗಿ ಉಳಿಯುವಂತೆ ಸೊಲ್ಲಾಪುರದಲ್ಲಿ ಕರ್ನಾಟಕ ಸರಕಾರ ಯಾವುದಾದರೂ ಕಾರ್ಯ ಕೈಗೆತ್ತಿಕೊಳ್ಳಬೇಕು.

ಅಂದಿನ ಆ ಗಡಿಕನ್ನಡ ಚಳುವಳಿಯಲ್ಲಿ ಸೋಲ್ಲಾಪುರವು ಮುಂದೊಂದು ದಿನ ಕರ್ನಾಟಕಕ್ಕೆ ಸೇರುತ್ತದೆಯೆಂಬ ಆಶೆ ಕನ್ನಡಿಗರಿಗಿತ್ತು. ಅದಕ್ಕಾಗಿ ಅವರು ತಮ್ಮ ಮಕ್ಕಳನ್ನು ಕನ್ನಡ ಶಾಲೆಗೆ ಸೇರಿಸಿದರು. ಈಗ ಪ್ರಾಥಮಿಕ ಶಾಲೆಗಳು ಮೊದಲಿನಷ್ಟು ಉಳಿಯದೆ ದಿನದಿನಕ್ಕೆ ಕಡಿಮೆಯಾಗುತ್ತಿವೆ. ಯಾವಯಾವುದೋ ಕಾರಣಗಳಿಂದ ಇದ್ದ ಶಾಲೆಗಳು ಮುಚ್ಚುತ್ತಿವೆ. ಹೀಗಾಗಿ ಅವರಲ್ಲಿ ಇಂದು ಹತಾಶೆ, ನೋವು ಮನೆ ಮಾಡುತ್ತಿದೆ. ಗಡಿನಾಡಿನಲ್ಲಿ ಮಕ್ಕಳಿಗೆ ಪಠ್ಯ ಪುಸ್ತಕ ಬಿಟ್ಟರೆ, ಉಳಿದ ಪುಸ್ತಕಗಳು ದೊರಕುವುದು ಕಡಿಮೆ (ನನ್ನ ಅನುಭವದಿಂದ ಹೇಳುತ್ತಿದ್ದೇನೆ) ಇಂತಹ ಸ್ಥಿತಿಯಲ್ಲಿ ವಿದ್ಯಾರ್ಥಿಗಳಲ್ಲಿ ಕನ್ನಡ ಪ್ರೀತಿ ಹೆಚ್ಚಿಸಬೇಕಾದರೆ ಅವರಿಗೆ ಹೆಚ್ಚು ಹೆಚ್ಚು ಪುಸ್ತಕಗಳನ್ನು ಒದಗಿಸುವ ಕೆಲಸ ಕರ್ನಾಟಕ ಸರಕಾರ ಮಾಡಬೇಕಾಗಿದೆ. ಇತ್ತೀಚೆಗೆ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ.ಸಿದ್ದಲಿಂಗಯ್ಯನವರು ಗಡಿನಾಡ ಶಾಲೆ ಕಾಲೇಜುಗಳಿಗೆ "ಉಚಿತ ಪುಸ್ತಕ ವಿತರಣೆ ಮಾಡುತ್ತಿರುವುದು ನಿಜಕ್ಕೂ ಸ್ತುತ್ಯವಾದ ಕಾರ್ಯ ಪ್ರತಿವರ್ಷವೂ ಇದು ನಡೆಯುತ್ತ ಬಂದರೆ ವಿದ್ಯಾರ್ಥಿಗಳಲ್ಲಿ ಕನ್ನಡದ ಬಗೆಗೆ ಆಸಕ್ತಿ ಮೂಡಬಲ್ಲದು.

ನನಗೆ ಡಾ.ಸಿದ್ಧನಾಥ ಬಳ್ಳಾರಿಯವರು ಪುಸ್ತಕ ಬರೆಯುವ ಅವಕಾಶ ನೀಡಿದ್ದಕ್ಕಾಗಿ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ.ಸಿದ್ದಲಿಂಗಯ್ಯನವರಿಗೆ, ಆಡಳಿತಾಧಿಕಾರಿಯಾದ ಶ್ರೀ. ಬಿ.ಎಚ್.ಮಲ್ಲಿಕಾರ್ಜುನ ಅವರಿಗೆ,

ಕಾರ್ಯದರ್ಶಿಗಳಾದ ಶ್ರೀ ಮುಕುಂದ ಅವರಿಗೆ ಹಾಗೂ ಪುಸ್ತಕ ಪ್ರಾಧಿಕಾರದ ಎಲ್ಲ ಸದಸ್ಯರಿಗೂ ನನ್ನ ಗೌರವಪೂರ್ವಕ ನಮನಗಳು.

ಡಾ.ಸಿದ್ಧನಾಥ ಬಳ್ಳಾರಿಯವರ ಜೀವನ ಕುರಿತು ಹೆಚ್ಚಿಗೇನೂ ತಿಳಿಯದ ನನಗೆ ಅವರ ಕಿರಿಯ ಮಗ ರಾಜೇಂದ್ರ ಬಳ್ಳಾರಿ ಹಾಗೂ ಅವರ ಪತ್ನಿ ರತ್ನಾ ಬಳ್ಳಾರಿ ಅವರು ಭಾವಚಿತ್ರ, ಸನ್ಮಾನ್ಯ ಪತ್ರಗಳಲ್ಲದೆ ಡಾ.ಸಿದ್ಧನಾಥ ಬಳ್ಳಾರಿ ಅವರ ಲೇಖನಗಳನ್ನು ನನಗಿತ್ತು. ಹಲವು ಮಾಹಿತಿಗಳನ್ನು ಹೇಳಿ ಅವರ ತಂದೆಯವರ ಕಾಲದ ಪ್ರಲ್ಹಾದ ಜೋಶಿ ಮುಂತಾದವರನ್ನು ಪರಿಚಯಿಸಿ ತುಂಬಾ ಉಪಕಾರ ಮಾಡಿದ್ದಾರೆ. ಒಂದು ವೇಳೆ ಅವರು ಮಾಡಿರದಿದರೆ ನನಗೆ ಇದನ್ನು ಬರೆಯಲು ಸಾಧ್ಯವಾಗುತ್ತಿತ್ತೋ ಇಲ್ಲವೋ, ಅವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಪುಸ್ತಕ ಪ್ರಾಧಿಕಾರದಿಂದ ಎರಡು ಮೂರು ಪತ್ರಗಳು ಬಂದು ಅವರು ನೀಡಿದ ಕಾಲಾವಧಿ ಮುಗಿದರೂ ಬರೆಯಲು ನನಗೆ ಸಾಧ್ಯವಾಗದಾಗ "ನೀವೇನೂ ಕಾಳಜೀ ಮಾಡಬೇಡಿರಿ, ಮೊದಲು ಬರೆದು ಮುಗಿಸಿರಿ" ಎಂದು ಅಭಯವನ್ನಿತ್ತು ಹೆಜ್ಜೆ ಹೆಜ್ಜೆಗೂ ಸ್ಫೂರ್ತಿ, ಬೆಂಬಲವನ್ನು ನೀಡಿ ಆತ್ಮೀಯತೆಯಿಂದ ಪ್ರೋತ್ಸಾಹಿಸಿದ ಪ್ರಸಿದ್ಧ ಸಾಹಿತಿಗಳಾದ ಶ್ರೀ ಎ.ಕೆ.ರಾಮೇಶ್ವರ ಅವರನು. ಎಂದಿಗೂ ಮರೆಯಲಾರೆ ಅವರಿಗೆ ನನ್ನ ಕೃತಜ್ಞತಾಪೂರ್ವಕ ನಮನಗಳು.

ಡಾ. ಎಚ್. ಗೋಪಾಲರಾವ, ಪ್ರೊ.ಜಿ.ವೆಂಕಟಸುಬ್ಬಯ್ಯ, ನಾಡೋಜ ಪಾಟೀಲ ಪುಟ್ಟಪ, ಡಾ. ಸರೋಜಿನಿ ಚವಲಾರ, 'ಜಾಗೃತವಾಣಿ' ಪತ್ರಿಕೆಯ ಸಂಪಾದಕ ಶ್ರೀ ಆರ್.ಟಿ.ಮಜ್ಜಿಗೆ, ಸೌ.ಸಿಂಧುತಾಯಿ ಕಾಡಾದಿ, ಶ್ರೀಮತಿ ಶಶಿಕಲಾ ತಾಯಿ ಮಡಕಿ, ಶ್ರೀ ಕೆ.ಬಿ.ಪೂರ್ವಾಚಾರಿ, ಶ್ರೀ ಪ್ರಲ್ಹಾದ ಜೋಶಿ, ಶ್ರೀ ವೇದಮೂರ್ತಿ ಬಸವರಾಜ ಶಾಸ್ತ್ರೀ ಮುಂತಾದವರೆಲ್ಲ ಗ್ರಂಥಗಳ ಮೂಲಕವೋ, ದೂರಧ್ವನಿ ಸಂದರ್ಶನಗಳ ಮೂಲಕವೋ ಈ ಗ್ರಂಥ ಬರೆಯಲು ಸಹಾಯ-ಸಹಕಾರ ನೀಡಿದ್ದಾಕ್ಕಾಗಿ ನನ್ನ ಹೃತೂರ್ವಕ ನಮನಗಳು ಕಾಲಕಾಲಕ್ಕೆ ಬೆಳಕಿನ ಮಾರ್ಗ ತೋರಿದ ಮ.ನಿ.ಪ್ರ. ಶ್ರೀ.ದಿಂಗಾಲೇಶ್ವರ ಮಹಾಸ್ವಾಮಿಗಳು, ವಿರಕ್ತಮಠ ಬಾಳೆಹೊಸರೂರು. ಮುನಿ. ಪ್ರ.ಶ್ರೀ ಬಸವಲಿಂಗೇಶ್ವರ ಮಹಾಸ್ವಾಮಿಗಳು ವಿರಕ್ತಮಠ ಅಕ್ಕಲಕೋಟ, ಪರಮಪೂಜ್ಯ ಶ್ರೀ.ಬಸವಲಿಂಗ ಪಟ್ಟದ್ದೇವರು ಹಿರೇಮಠ ಸಂಸ್ಥಾನ ಭಾಲ್ಕಿ, ಮು.ನಿ.ಪ್ರ.ಶ್ರೀ ಸ್ವಾಮಿನಾಥ ಮಹಾ ಸ್ವಾಮಿಗಳು, ಕಿರೀಟಮಠ, ಸೊಲ್ಲಾಪುರ. ಇವರಿಗೆಲ್ಲ ಅನಂತ ನಮನಗಳು. ಅಕ್ಕಲಕೋಟ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಶಿವಶರಣಜಿ ಖೇಡಗಿ ಗಡಿನಾಡಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥಳಾಗಿ ಕಾವ್ಯ ನಿರ್ವಹಿಸುವ ಅವಕಾಶ ನೀಡಿದ್ದಕ್ಕಾಗಿ ಅವರಿಗೂ ವಿನಯ ಪೂರ್ವಕ ನಮನಗಳು. ಅಕ್ಕಲಕೋಟ ಮಹಾವಿದ್ಯಾಲಯದ ಕನ್ನಡ ಪ್ರಾ.ಡಾ.ಗುರುಲಿಂಗಪ್ಪ ದಭಾಲೆ, ಪ್ರಾ.ವ್ಹಿ.ಎ.ಮೋದಿ, ಪ್ರಾ.ಎಸ್.ಎಸ್.ಪಾಟೀಲ, ಡಾ.ಗೀತಾ ಡಿಗ್ಗೆ, ರಜಿಸ್ಟ್ರಾರ ಎಸ್.ಬಿ.ಕರ್ಕಿ ಸುಪರಿಟೆಂಡೆಂಟ ಶ್ರೀ ರೇವಣಸಿದ್ದ ಮಂಗರೂಳೆ, ಮಂಗಳರೂಳೆ ಹಾಯಸ್ಕೂಲಿನ ನಿವೃತ್ತ ಕನ್ನಡ ಅಧ್ಯಾಪಕಿ ಶಕುಂತಲಾ ಕಾಶಿನಾಥ ತಾನವಡೆ, ಸಂಗಮೇಶ್ವರ ಮಹಾವಿದ್ಯಾಲಯದ ಕನ್ನಡ ಪ್ರಾ.ಡಾ.ಬಿ.ಬಿ.ಪೂಜಾರಿ ಮುಂತಾದವರು ಈ ಕೃತಿ ಬರೆಯಲು ಪ್ರೇರಣೆ-ಪ್ರೋತ್ಸಾಹ ನೀಡಿದ್ದಕ್ಕಾಗಿ ವಂದನೆಗಳು.

ಇದನ್ನು ಬರೆಯುವಾಗ ಅರಿಯದಂತೆ ನನ್ನ ಕಣ್ಣು ನೀರಿನಿಂದ ತುಂಬಿಕೊಳ್ಳುತ್ತಿವೆ. ರಾತ್ರಿ ಮಲಗಿ ಬೆಳಗ್ಗೆ ಏಳುವುದರಲ್ಲಿಯೇ ಕಣ್ಮರೆಯಾದ ಜೀವನ ಸಂಗಾತಿ ಮಲ್ಲಿಕಾರ್ಜುನ ಹೆಗಡೆ ಹಾಗೂ ಒಡಹುಟ್ಟಿದ ಒಬ್ಬನೇ ತಮ್ಮ ರಾಮನಗೌಡ ಪಾಟೀಲನ ಸಾವು-ನನ್ನನ್ನು ತುಂಬ ಅಧೀರಗೊಳಿಸಿದವು. ಮತ್ತೆ ಮೇಲೇಳದಂತೆ ಕುಸಿದು ಕುಳಿತ ನನ್ನನ್ನು ಮೇಲೇಳುವಂತೆ ಮಾಡಿದವರೆಂದರೆ ನನ್ನ ಮಕ್ಕಳಾದ ಡಾ.ಅಶ್ವಿನಿ ಸಂತೋಷ ಕಾಪ್ಸೆ ಹಾಗೂ ರಶ್ಮಿ ಪ್ರಶಾಂತ ಕಬಾಡೆ. ತಂಗಿಯರಾದ ಜಯಶ್ರೀ ಪಾಟೀಲ, ಸುಮಂಗಲಾ ಶಿವಕುಮಾರ ಬಳಿಗಾರ, ಅಕ್ಕ ಮಹಾದೇವಿ ಹೆದ್ದುರಶೆಟ್ಟಿ ಅವರಿಗೂ ನನ್ನ ಹಾರ್ದಿಕ ನೆನಹುಗಳು. ಸದಾ ನನ್ನ ಹಿತಚಿಂತಕರಾದ ಮಹಾದೇವಕ್ಕ ಸಿದ್ರಾಮಪ್ಪ ಉನ್ನದ ಅವರಿಗೂ ನಮನಗಳು. ದಿ.ತಂದೆ ಶರಣಗೌಡ, ತಾಯಿ ಬಸಮ್ಮ ಅವರಿಗೂ ನನ್ನ ಭಕ್ತಿಪೂರ್ವಕ ನಮನಗಳು. ಬರೆಯುವಾಗ ನಡುನಡುವೆ ಬಂದು ಆನಂದವನ್ನೀಯುವ ಮೊಮ್ಮಕ್ಕಳಾದ ಚಿ.ಹರ್ಷ, ಚಿ.ಶೌರ್‍ಯರಿಗೆ ಸವಿಮುತ್ತುಗಳು.

ಈ ಗ್ರಂಥ ಹೊರಬರಲು ಪ್ರತ್ಯಕ್ಷ, ಅಪ್ರತ್ಯಕ್ಷವಾಗಿ ಕಾರಣರಾದ ಎಲ್ಲರಿಗೂ ನನ್ನ ಹೃತೂರ್ವಕ ವಂದನೆಗಳು.

**ಡಾ.ಶಕುಂತಲಾ ಮಲ್ಲಿಕಾರ್ಜುನ.ಹೆಗಡೆ (ಪಾಟೀಲ)**
ಮುಖ್ಯಸ್ಥರು, ಕನ್ನಡ ವಿಭಾಗ
ಅಕ್ಕಲಕೋಟ ಮಹಾವಿದ್ಯಾಲಯ
ಅಕ್ಕಲಕೋಟ

# ಪರಿವಿಡಿ


| | | |
|---|---|---|
| ಡಾ|| ಸಿದ್ಧನಾಥ ಬಳ್ಳಾರಿಯವರ ಸನ್ಮಾನಪತ್ರ, ಪ್ರಶಸ್ತಿ ಪತ್ರಗಳು | | ix-xi |
| ಡಾ|| ಸಿದ್ಧನಾಥ ಬಳ್ಳಾರಿಯವರ ಕೈಬರಹ | | xii |
| ಭಾವಚಿತ್ರಗಳು | | xiii |
| | | xxxiii |
| ಅನು. ಸಂ. ಅಧ್ಯಾಯಗಳು | | ಪುಟ ಸಂಖ್ಯೆ |
| ೧. | ಪೀಠಿಕೆ | ೨-೪ |
| ೨. | ಸಿದ್ಧನಾಥ ಬಳ್ಳಾರಿಯವರ ಪ್ರಾರಂಭದ ಜೀವನ ಘಟ್ಟ (೧೯೧೦ ರಿಂದ ೧೯೪೬) | ೫ |
| | ೧.ಬಾಲ್ಯ | ೬-೭ |
| | ೨. ಶಿಕ್ಷಣ | ೮-೧೧ |
| | ೩. ಸ್ವಾತಂತ್ರ ಸಂಗ್ರಾಮದಲ್ಲಿ ಹೋರಾಟಗಾರರಾಗಿ | ೧೨-೧೪ |
| | ೪. ಸ್ವಯಂ ಸೇವಕರಾಗಿ ಸಿದ್ಧನಾಥ ಬಳ್ಳಾರಿ | ೧೫ |
| | ೫. ಬಳ್ಳಾರಿ ಜಿಲ್ಲೆಯ ಮೂರನೆಯ ಸರ್ವಾಧಿಕಾರಿ | ೧೬-೧೮ |
| | ೬. ದೀನಸೇವಾಶ್ರಮ | ೧೯-೨೦ |
| | ೭. ಹರಿಜನಕೇರಿಯಲ್ಲಿ ಬಳ್ಳಾರಿ ಸಿದ್ಧನಾಥನ ವಿವಾಹ ಪ್ರಸಂಗ | ೨೧-೨೨ |
| | ೮. ಹರಿಜನಕೇರಿಯಲ್ಲಿ ವಿಧವಾ ವಿವಾಹ | ೨೩-೨೪ |
| | ೯. ಅಪೂರ್ವ ಪುಣ್ಯ ಕ್ಷಣ | ೨೫-೨೭ |
| | ೧೦. ಕೊಟ್ಟೂರಿನಲ್ಲಿ ನಡೆದ ಬಳ್ಳಾರಿ ಜಿಲ್ಲಾ ರೈತ ಪರಿಷತ್ತು | ೨೮ |
| | ೧೧. ಪೈಜಪುರ ಅಧಿವೇಶನದಲ್ಲಿ ಭಾಗಿಯಾಗಿದ್ದು | ೨೯ |

೧೨. ಹರಿದ್ವಾರದಲ್ಲಿ ಕರ್ನಾಟಕ ಧರ್ಮಶಾಲೆ ೩೦-೩೨

೧೩. ೧೯೪೨ ರ ಕ್ವಿಟ್ ಇಂಡಿಯಾ ಚಳುವಳಿ ೩೩

೧೪. ಬಳ್ಳಾರಿ ಜಿಲ್ಲೆಯ ಜನರು ಜಾಗೃತಿಗೊಂಡ ಪ್ರಸಂಗ ೩೪

೧೫. ಸ್ವಾತಂತ್ರ ಸಂಗ್ರಾಮದಲ್ಲಿ ಭಾಗವಹಿಸಿದ ಬಳ್ಳಾರಿ
ಜಿಲ್ಲೆಯ ಹೋರಾಟಗಾರರು. ೩೫-೩೬

**೩. ಡಾ|| ಸಿದ್ದನಾಥ ಬಳ್ಳಾರಿಯವರ ನಂತರದ ಜೀವನ ಘಟ್ಟ - (೧೯೪೬ ರಿಂದ ೧೯೯೧)** ೩೭

೧. ೧೯೪೬ರ ವರೆಗಿನ ಸೊಲ್ಲಾಪುರ ಕನ್ನಡಿಗರ ಸ್ಥಿತಿಗತಿ ೩೮-೪೦

೨. ಡಾ|| ಸಿದ್ದನಾಥ ಬಳ್ಳಾರಿಯವರು ಸೊಲ್ಲಾಪುರಕ್ಕೆ ಆಗಮಿಸಿದ್ದು ೪೧-೪೨

೩. ವೈದ್ಯಾಧಿಕಾರಿಯಾಗಿ ಡಾ|| ಸಿದ್ದನಾಥ ಬಳ್ಳಾರಿ ಅವರು ೪೩-೪೪

೪. ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಧುಮುಕಿದುದು ೪೫-೪೬

೫. ಕನ್ನಡ ಶಾಲೆಗಳು ೪೭-೫೦

೬. ಕನ್ನಡ ಶಾಲೆಗಳ ಪಠ್ಯಪುಸ್ತಕಗಳು ೫೧-೫೨

೭. ಕಾನಡಿ - ಕನ್ನಡವಾದುದು ೫೩-೫೪

೮. ಜ್ವಲಂತ ಸಮಸ್ಯೆಯಾಗಿ ಬೆಳಗಾಂವಿ ೫೫-೫೭

೯. ಕನ್ನಡ ಪತ್ರಿಕೆಗಳ ಸೇವೆ ೫೮-೫೯

೧೦. ಸೊಲ್ಲಾಪುರ ಮಹಾನಗರ ಪಾಲಿಕೆಯಲ್ಲಿ ಬಸವೇಶ್ವರರ ಭಾವಚಿತ್ರ ೬೦-೬೧

೧೧. ಬಸವ ಜಯಂತಿ ೬೨-೬೩

೧೨. ನಾಡಹಬ್ಬ ಉತ್ಸವ ೬೪-೬೬

೧೩. ಆಯೋಗಗಳು: ಡಾ|| ಸಿದ್ದನಾಥ ಬಳ್ಳಾರಿ ಅವರ ಪಾತ್ರ ೬೭-೭೨

೧೪. ಡಾ|| ಸಿದ್ದನಾಥ ಬಳ್ಳಾರಿ ಅವರ ಕೌಟುಂಬಿಕ ಜೀವನ ೭೩-೭೯

೧೫. ಡಾ|| ಸಿದ್ದನಾಥ ಬಳ್ಳಾರಿ ಅವರು ಹಾಗು ಇತರ ಚಳುವಳಿಗಾರರು ೮೦-೮೮

* ಡಾ|| ಸಿದ್ದನಾಥ ಬಳ್ಳಾರಿಯವರ ವಂಶಾವಳಿ ೮೯

* ಗ್ರಂಥಋಣ ೯೦

- ಲೇಖನಗಳು ೯೧

- ಸಂದರ್ಶನ ೯೨

सत्यमेव जयते

# महाराष्ट्र शासन

## सन्मान पत्र

**श्री.** सिद्धनाथ रुप्पा बनारी **यांना त्यांनी भारतीय स्वातंत्र्य संग्रामांत केलेल्या कामगिरीच्या गौरवार्थ हे सन्मानपत्र देण्यांत येत आहे.**

सचिवालय
मुंबई
दिनांक [illegible]

*वसंत नाईक*
मुख्य मंत्री
महाराष्ट्र राज्य


स्वतन्त्रता के पच्चीसवें वर्ष
प्रधान मंत्री श्रीमती इंदिरा गांधी ने

# कांग्रेस शताब्दी १९८५ समारोह समिति

[illegible]

[illegible]

[illegible]

[illegible]

[illegible]

[illegible]



ಡಾ॥ ಸಿದ್ಧನಾಥ ರೇವಪ್ಪ, ಬಳ್ಳಾರಿ



ಮಾನನೀಯ ಪ್ರಧಾನಮಂತ್ರಿ ಇಂದಿರಾ ಗಾಂಧೀ ಅವರನ್ನು ಅವರ ದಿಲ್ಲಿಯ
ನಿವಾಸ ಸ್ಥಾನದಲ್ಲಿ ಭೇಟಿಯಾಗಿ ಬೆಳಗಾಂವಿ ಸಮಸ್ಯೆಯನ್ನು ಕುರಿತು
ಮನವಿಯನ್ನು ಸಿದ್ಧನಾಥ ಬಳ್ಳಾರಿ ಅವರು ಕೊಟ್ಟಾಗಿನ ಸಂದರ್ಭ

ಮಧ್ಯದಲ್ಲಿರುವವರು – ಅನ್ನಪೂರ್ಣ ಭತಗುಣಕಿ



ದಿಲ್ಲಿಯ ಪ್ರಧಾನ ಮಂತ್ರಿಯ ಕಾರ್ಯಾಲಯದಲ್ಲಿ, ದಿ. ಲಾಲಬಹದ್ದೂರ
ಶಾಸ್ತ್ರೀಯವರೊಂದಿಗೆ ಸಿದ್ಧನಾಥ ಬಳ್ಳಾರಿ ಅವರು ಗಡಿನಾಡ ಭಾಗದಲ್ಲಿಯ
ಕನ್ನಡ, ಕನ್ನಡಿಗರ ಸಮಸ್ಯೆ ಕುರಿತು ಚರ್ಚೆ ಮಾಡುತ್ತಿರುವ ಸಂದರ್ಭ



ಮಾನ್ಯ ಉಪರಾಷ್ಟ್ರಪತಿ: ಶ್ರೀ ಬಿ.ಡಿ. ಜತ್ತಿಯವರು ಆಗಮಿಸಿದಾಗ ಡಾ॥ ಸಿದ್ಧನಾಥ
ಬಳ್ಳಾರಿಯವರು ಸತ್ಕರಿಸುವ ಸಂದರ್ಭ
– ಸೊಲ್ಲಾಪುರ –



ಹುಬ್ಬಳ್ಳಿಯಲ್ಲಿ ಮಾನನೀಯ ಪ್ರಧಾನ ಮಂತ್ರಿ ಅವರೊಂದಿಗೆ ಡಾ॥ ಸಿದ್ಧನಾಥ
ಬಳ್ಳಾರಿ ಅವರು



ಡಾ॥ ಸಿದ್ಧನಾಥ ಬಳ್ಳಾರಿ ಅವರು ಮಾನ್ಯ ಮುಖ್ಯಮಂತ್ರಿ ನಿಜಲಿಂಗಪ್ಪ
ಅವರೊಂದಿಗೆ ಕೂಡಿಕೊಂಡು ಮಾನನೀಯ ಪ್ರಧಾನಮಂತ್ರಿ
ಇಂದಿರಾಗಾಂಧಿಯವರಿಗೆ ಗಡಿನಾಡ ಸಮಸ್ಯೆಯನ್ನು ಕುರಿತ
ಮನವಿಯನ್ನೀಯುವ ಸಂದರ್ಭ




1974 ನವಂಬರ 3 ರಂದು ಹುಬ್ಬಳ್ಳಿಯ ಕರ್ನಾಟಕ ರಾಜ್ಯೋತ್ಸವ ಸಂದರ್ಭದಲ್ಲಿ ಮುಖ್ಯಮಂತ್ರಿ ದೇವರಾಜ ಅರಸು ಅವರಿಗೆ ಡಾ॥ ಸಿದ್ದನಾಥ ಬಳ್ಳಾರಿ ಅವರು ಸೊಲ್ಲಾಪುರವು ಕರ್ನಾಟಕಕ್ಕೆ ಸೇರಬೇಕಾದ ಭಾಗ. ಅದನ್ನು ಮಹಾರಾಷ್ಟ್ರಕ್ಕೆ ಬಿಟ್ಟು ಕೊಡಬೇಡಿರೆಂದು ಹೇಳುತ್ತಿರುವ ಸಂದರ್ಭ

ಪಕ್ಕದಲ್ಲಿ ಕುಳಿತಿರುವವರು ಪೇಜಾವರ ಶ್ರೀಗಳು




1974 ನವಂಬರ 3ರಂದು ಹುಬ್ಬಳ್ಳಿಯ ಕರ್ನಾಟಕ ರಾಜ್ಯೋತ್ಸವ ಸಂದರ್ಭದಲ್ಲಿ ಬಿ.ಡಿ. ಜತ್ತಿ ಹಾಗು ಮುಖ್ಯಮಂತ್ರಿ ದೇವರಾಜ ಅರಸು ಅವರಿಗೆ ಡಾ॥ ಸಿದ್ಧನಾಥ ಬಳ್ಳಾರಿಯವರು ಸೊಲ್ಲಾಪುರ ಕರ್ನಾಟಕಕ್ಕೆ ಸೇರ್ಪಡಲಿ ಎಂಬ ಮನವಿ ಅರ್ಪಿಸಿದರು. ಅಂದಿನ ಕೇಂದ್ರ ಸಚಿವೆ ಡಾ॥ ಸರೋಜಿನಿ ಮಹಿಷಿ, ಸಿರಿಗೆರೆಯ ಹಿರಿಯ ಗುರುಗಳು, ಪೇಜಾವರ ಶ್ರೀಗಳು ಹಾಗು ಸಂಘಟಕ ಆರ್.ಟಿ.ಮಜ್ಜಿಗೆ ಅವರಿದ್ದಾರೆ.



ಡಾ॥ ಸಿದ್ಧನಾಥ ಬಳ್ಳಾರಿ ಅವರು ಮಾನ್ಯ ಮುಖ್ಯಮಂತ್ರಿ ನಿಜಲಿಂಗಪ್ಪ ಅವರನ್ನು
ಬೆಟ್ಟಿಯಾದಾಗಿನ ಹಸನ್ಮುಖತೆಯ ಸುಂದರ ಕ್ಷಣ.



ಗಡಿನಾಡ ಹೋರಾಟಗಾರ ಡಾ॥ ಸಿದ್ಧನಾಥ ಬಳ್ಳಾರಿ ಅವರು ಮಾನ್ಯ
ಮುಖ್ಯಮಂತ್ರಿ ಕರ್ನಾಟಕ ಏಕೀಕರಣ ಶಿಲ್ಪಿ ನಿಜಲಿಂಗಪ್ಪ ಅವರಿಗೆ ಮನವಿಯನ್ನು
ಸಲ್ಲಿಸುತ್ತಿರುವ ಸಂದರ್ಭ



ಮಾನ್ಯ ಮುಖ್ಯಮಂತ್ರಿ ದೇವರಾಜ ಅರಸರೊಂದಿಗೆ ಗಡಿನಾಡ ಸ್ಥಿತಿಗತಿ ಕುರಿತು
ಚರ್ಚೆ ಮಾಡುವ ಸಂದರ್ಭ.

ಮಧ್ಯದಲ್ಲಿರುವವರು: ಮಾನ್ಯ ಮುಖ್ಯಮಂತ್ರಿ ದೇವರಾಜ ಅರಸು

ಎಡದಿಂದ ಬಲಕ್ಕೆ : ಚನ್ನವೀರ ಕಲ್ಯಾಣಶೆಟ್ಟಿ

ಕೊನೆಯಲ್ಲಿರುವವರು : ಡಾ॥ ಸಿದ್ಧನಾಥ ಬಳ್ಳಾರಿ



ಮಾನ್ಯ ಮುಖ್ಯಮಂತ್ರಿ ಶ್ರೀ ಗುಂಡುರಾವ ಅವರಿಗೆ ಗಡಿನಾಡ ಸಮಸ್ಯೆ ಕುರಿತು
ಮನವಿ ಸಲ್ಲಿಸುವ ಸಂದರ್ಭ

ಎಡದಿಂದ ಬಲಕ್ಕೆ: ಶ್ರೀ ವಾಟಾಳ ನಾಗರಾಜ, ಡಾ॥ ಸಿದ್ಧನಾಥ ಬಳ್ಳಾರಿ ಹಾಗು
ಚನ್ನವೀರ ಕಲ್ಯಾಣಶೆಟ್ಟಿ ಹಾಗು ಇತರರು.



ಉಪರಾಷ್ಟ್ರಪತಿ ಬಿ.ಡಿ. ಜತ್ತಿಯವರನ್ನು ಸ್ವಾಗತಿಸುವ ಸಂದರ್ಭ

ಎಡದಿಂದ: ಬಲಕ್ಕೆ: ಮೂರನೆಯವರು ಡಾ॥ ನೀಲಗುಲಮಠ, ಡಾ॥ ಸಿದ್ಧನಾಥ ಬಳ್ಳಾರಿ, ಕೊನೆಯ ಮಗಳು ಸುರೇಖ ಬಳ್ಳಾರಿ, ಅನ್ನಪೂರ್ಣ ಭತಗುಣಕಿ ಹಾಗೂ ಜಯದೇವಿತಾಯಿ ಲಿಗಾಡೆ ಹಾಗು ಅವರ ಕುಟುಂಬದವರು.




ದಕ್ಷಿಣ ಸೊಲ್ಲಾಪುರ ತಾಲ್ಲೂಕ ಕರ್ನಾಟಕ ಹಾಗು ಸಂಯುಕ್ತ ಕರ್ನಾಟಕ
ಸಮಿತಿಯು ಕರ್ನಾಟಕ ಏಕೀಕರಣ ಚಳುವಳಿಗಾರರೊಂದಿಗೆ ನಡೆಸಿದ
ಚರ್ಚೆಯಲ್ಲಿ ಡಾ॥ ಸಿದ್ಧನಾಥ ಬಳ್ಳಾರಿ, ಚೆನ್ನವೀರ ಕಲ್ಯಾಣಶೆಟ್ಟಿ.



ಮಾನ್ಯ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರು ಸೊಲ್ಲಾಪುರಕ್ಕೆ ಬೆಟ್ಟಿ ನೀಡಿದ ಸಂದರ್ಭ

ಎಡದಿಂದ ಬಲಕ್ಕೆ: ಮೂರನೆಯವರು ನಾಗಪ್ಪಣ್ಣ ಕಾಡಾದಿ, ಅವರ ಪಕ್ಕದಲ್ಲಿದ್ದವರು ಅಪ್ಪಾಸಾಹೇಬ ಕಾಡಾದಿ

ಮಧ್ಯದಲ್ಲಿದ್ದವರು: ಮಾನ್ಯ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರು

ಕೊನೆಯಲ್ಲಿ ಎರಡನೆಯವರು: ಡಾ॥ ಸಿದ್ಧನಾಥ ಬಳ್ಳಾರಿ, ಘುಲಾರಿ ಅವರು



ಹೊಸ ಶಾಲೆಯ ಉದ್ಘಾಟನೆಯ ಸಂದರ್ಭದಲ್ಲಿ ಮುಖ್ಯ ವೇದಿಕೆಯಲ್ಲಿ
ಕುಳಿತವರು ಡಾ॥ ಸಿದ್ಧನಾಥ ಬಳ್ಳಾರಿ ಹಾಗು ಎದುರಿಗೆ ಸನ್ಮಾನಿಸುತ್ತಿರುವವರು
ಶ್ರೀ ಪ್ರಹ್ಲಾದ ಜೋಶಿ (ನಿಂತವರು)



ಸುಯೋಧ ಕನ್ನಡ ಸಂಘದವರು ಸೊಲ್ಲಾಪುರಕ್ಕೆ ನಾಟಕ ಕಂಪನಿಯನ್ನು
ಕರೆಯಿಸಿ 'ಚಿನ್ನದ ಗೊಂಬೆ' ನಾಟಕವನ್ನಾಡಿಸಿದಾಗ (ನಾಡಹಬ್ಬ) ಸಂದರ್ಭ)
ಅದರಲ್ಲಿಯ ಪಾತ್ರಧಾರಿಗಳ ಸತ್ಕಾರ ಸಮಾರಂಭ

ಎಡದಿಂದ ಬಲಕ್ಕೆ: ಮುಖ್ಯ ಅತಿಥಿಗಳು: ಗುಂಡಪ್ಪಣ್ಣ ಧುಲಂಗೆ ಅಧ್ಯಕ್ಷರಾದ
ಡಾ॥ ಸಿದ್ಧನಾಥ ಬಳ್ಳಾರಿ ಅವರಿಂದ ಪಾತ್ರಧಾರಿ ಫಕೀರಪ್ಪ ವರವಿಯ ಸತ್ಕಾರ

ಪಕ್ಕದಲ್ಲಿ ಕುಳಿತಿರುವವರು: ರಘುನಾಥ (ನಾಟಕ ಕಂಪನಿ ಮಾಲಿಕರು)




ನಾಡಹಬ್ಬ ನಿಮಿತ್ತ ಸುಯೋಧ ಕನ್ನಡ ಸಂಘದವರು ಸೊಲ್ಲಾಪುರಕ್ಕೆ ನಾಟಕ ಕಂಪನಿಯನ್ನು ಕರೆಯಿಸಿದ ಸಂದರ್ಭ

ಆಗ 'ರಕ್ತದೀಪ' ನಾಟಕದ ಉದ್ಘಾಟನಾ ಸಮಾರಂಭ

ಮಧ್ಯದಲ್ಲಿ ಕುಳಿತಿರುವವರು ಡಾ॥ ಸಿದ್ಧನಾಥ ಬಳ್ಳಾರಿ



ಸೊಲ್ಲಾಪುರದಲ್ಲಿ ನಡೆದ ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ
ಕನ್ನಡಸಾಹಿತ್ಯ ಪರಿಷತ್ತು ಡಾ॥ ಸಿದ್ಧನಾಥ ಬಳ್ಳಾರಿ ಅವರಿಗೆ ಸನ್ಮಾನಿಸಿ ನೀಡಿದ
ಗೌರವ ಕಾಣಿಕೆ 1987



ಡಾ॥ ಸಿದ್ಧನಾಥ ಬಳ್ಳಾರಿ ಅವರ ಕುಟುಂಬ

ಮಧ್ಯದಲ್ಲಿ ಕುಳಿತವರು: ಡಾ॥ ಸಿದ್ಧನಾಥ ಬಳ್ಳಾರಿ

ಎಡಕ್ಕೆ: ಪತ್ನಿ ಲಕ್ಷ್ಮೀ, ಅವಳ ತೊಡೆಯ ಮೇಲೆ 4ನೆಯ ಮಗ ರಾಜೇಂದ್ರ

ಬಲಕ್ಕೆ: ಲಕ್ಷ್ಮಿ ಅವರ ತಂಗಿ ಅನ್ನಪೂರ್ಣ ಭತಗುಣಕಿ, ನಿಂತವರಲ್ಲಿ, ಸಿದ್ಧನಾಥರ ಎಡಕ್ಕೆ: 3ನೆಯ ಮಗ ಮೋಹನ, ಬಲಕ್ಕೆ: 1ನೆಯ ಮಗಳು ಸುಮನ, 5ನೆಯ ಮಗಳು ಸುರೇಖಾ



ಸಿದ್ಧನಾಥ ಬಳ್ಳಾರಿ ಅವರ ಹಿರಿಯಮಗ ದಿ.ಮೋಹನ ಅವರ ಕುಟುಂಬ

ಕುಳಿತವರು: ಶ್ರೀ ಮೋಹನ ಬಳ್ಳಾರಿ, ಪತ್ನಿ ಲಲಿತಾ ಹಾಗು ಮೊಮ್ಮಗಳು

ನಿಂತವರು: ಎಡದಿಂದ 1ನೆಯ ಮಗ ಸುಮೇಶ, ಪತ್ನಿ ನೀತಾ, 2ನೆಯ ಮಗ ಸಂತೋಷ, ಪತ್ನಿ ಗೌರಮ್ಮ, 3ನೆಯ ಮಗ ಶೈಲೇಶ, ಪತ್ನಿ ಶಿವಲೀಲಾ.



ಡಾ॥ ಸಿದ್ಧನಾಥ ಬಳ್ಳಾರಿ ಅವರ ಕಿರಿಯ ಮಗ ಶ್ರೀ ರಾಜೇಂದ್ರ ಅವರ ಕುಟುಂಬ
ಕುಳಿತವರು: ಶ್ರೀ ರಾಜೇಂದ್ರ ಬಳ್ಳಾರಿ ಹಾಗು ಪತ್ನಿ ರತ್ನಾ ಬಳ್ಳಾರಿ
ನಿಂತವರು: ಎಡದಿಂದ ಬಲಕ್ಕೆ: 2ನೆಯ ಮಗಳು ದೀಪಲಕ್ಷ್ಮಿ, 1ನೆಯ ಮಗಳು
ರೂಪಲಕ್ಷ್ಮಿ, ಹಾಗೂ ಅಳಿಯ ಅನಿಲಕುಮಾರ, 3ನೆಯ ಮಗ ವಿಶ್ವೇಶ್ವರ.



ಅನ್ನಪೂರ್ಣಾ ಭತಗುಣಕಿ
ಗಡಿಕನ್ನಡ ಚಳುವಳಿಯ ಹೋರಾಟಗಾರ್ತಿ

# ಅಧ್ಯಾಯ – ೧

# ಪೀಠಿಕೆ

# ಪೀಠಿಕೆ

**"ಕನ್ನಡದ ತಾಯಿನುಡಿ | ಮನ್ನಿಸಿ ಮಾತನಾಡು |**
**ಅನ್ಯಕೆ ಮರುಳಾಗದಿರು | ಮರುಳೇ ನೀ |**
**ಕನ್ನಡಿಗನೆಂಬುದು ಮರೀಬೇಡ |**

ಎಂದು ಹೇಳಿದ ಕನ್ನಡದ ಹೋರಾಟಗಾರ್ತಿ ಜಯದೇವಿತಾಯಿ ಲಿಗಾಡೆ ಅವರ ಬಲಗೈಯಂತಿದ್ದು, "ಕನ್ನಡ ಕೋಟೆ" ಕಟ್ಟುವ ಸಂಘಟನೆಯಲ್ಲಿ ಭಾಗಿಯಾಗಿ ಕನ್ನಡ ಪರ ಅದ್ಭುತ ಚಟುವಟಿಕೆಗಳ ಯಶಸ್ಸಿಗೆ ಕಾರಣರಾಗಿದ್ದಾರೆ ಡಾ|| ಸಿದ್ದನಾಥ ಬಳ್ಳಾರಿ ಅವರು.

ಸಮಗ್ರ ಕರ್ನಾಟಕಕ್ಕಾಗಿ ಹೋರಾಟಗೈದ ಡಾ|| ಸಿದ್ಧನಾಥ ಬಳ್ಳಾರಿಯವರ ಸಮಗ್ರ ಜೀವನ ಚರಿತ್ರೆಯನ್ನು ಅವಲೋಕಿಸಿದಾಗ, ನಮಗೆ ಎರಡು ಘಟ್ಟಗಳನ್ನಾಗಿ ಮಾಡಿಕೊಳ್ಳುವ ಅವಶ್ಯಕತೆ ಕಂಡು ಬರುತ್ತದೆ.

**1. ಡಾ|| ಸಿದ್ಧನಾಥ ಬಳ್ಳಾರಿಯವರ ಪ್ರಾರಂಭದ ಜೀವನ ಘಟ್ಟ (1910 - 1946)**

**2. ಡಾ|| ಸಿದ್ಧನಾಥ ಬಳ್ಳಾರಿಯವರ ನಂತರದ ಜೀವನ ಘಟ್ಟ (1946 - 1991)**

ಈ ಎರಡರಲ್ಲಿಯೂ ವ್ಯತ್ಯಾಸ ಬಹಳ ಕಂಡು ಬರುತ್ತದೆ. ಬಳ್ಳಾರಿಯಲ್ಲಿಯ ಕೊಟ್ಟೂರನ್ನು ಕೇಂದ್ರ ಮಾಡಿಕೊಂಡು, ಗಾಂಧೀಯವರ ಪ್ರಭಾವದಿಂದ ಅವರು ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿ ಜೈಲುವಾಸ ಅನುಭವಿಸಿದರು. ಇಲ್ಲಿಯ ಅವರ ಸಾಧನೆಯೇ ಬೇರೆಯಾದರೆ ನಂತರದ ಅವರ ಸೊಲ್ಲಾಪುರದ ಜೀವನ ಸಾಧನೆಯೇ ಬೇರೆ. ಮಹಾನಗರಪಾಲಿಕೆಯಲ್ಲಿ ವೈದ್ಯಾಧಿಕಾರಿಯಾಗಿ, ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಭಾಗವಹಿಸಿ ಹೋರಾಟಗೈದರು.

ಡಾ|| ಸಿದ್ದನಾಥ ಅವರು ಬಳ್ಳಾರಿ ಜಿಲ್ಲೆಯಲ್ಲಿಯೇ ಉಳಿದಿದ್ದರೆ ಬಹುಶಃ ಸ್ವಾತಂತ್ರ್ಯ ಸಂಗ್ರಾಮದ ನಂತರ ಅವರು ಮಂತ್ರಿಯಾಗಿಯೋ, ಮತ್ತೇನಾದರೂ ಆಗಿ ಉನ್ನತ ಪದವಿಗೇರುವ ಸಾಧ್ಯತೆಯಿತ್ತು. ಅಷ್ಟೊಂದು ಅವರು ಬಳ್ಳಾರಿ ಜಿಲ್ಲೆಯಲ್ಲಿ ಕಾವ್ಯ ಮಾಡಿ ನಿರ್ಲಿಪ್ತರಾಗಿ ಅದನ್ನು ಬಿಟ್ಟು ಸೊಲ್ಲಾಪುರಕ್ಕೆ ಹೋದದ್ದು ನೋಡಿದರೆ, ಅದು ಒಂದು ಅಂಗಿಯನ್ನು ಕಳಚಿ ಮತ್ತೊಂದನ್ನು ಹಾಕಿಕೊಂಡಂತಾಗಿದೆ.

ಸೊಲ್ಲಾಪುರದಲ್ಲಿಯ ಮಹಾನಗರಪಾಲಿಕೆಯಲ್ಲಿ ವೈದ್ಯಾಧಿಕಾರಿಯಾಗಿ ಸಿದ್ಧನಾಥ ಬಳ್ಳಾರಿಯವರು ಕನ್ನಡದ ಕಾರ್ಯಗಳನ್ನು ಮಾಡುವುದು ನೋಡಿ ಮಹಾರಾಷ್ಟ್ರೀಯರ ಕಣ್ಣು ಕೆಂಪೇರುತ್ತಿತ್ತು. ಇದರಿಂದ ಅವರು ಅನೇಕ ಸಂಕಷ್ಟಗಳನ್ನು ನೌಕರಿಯಲ್ಲಿ ಎದುರಿಸಬೇಕಾಯಿತು. ಬೆಂಗಳೂರಿನ ಕಾಂಗ್ರೆಸ್ ಅಧಿವೇಶನಗಳಲ್ಲಿ ದಿ. ಲಾಲಬಹದ್ದೂರ್ ಶಾಸ್ತ್ರೀಗಳು, ದಿ. ಇಂದಿರಾಗಾಂಧೀ ಪ್ರಧಾನಮಂತ್ರಿಗಳಾಗಿದ್ದಾಗ ಸೊಲ್ಲಾಪುರ ಮುಂತಾದ ಭಾಗಗಳು ಕರ್ನಾಟಕಕ್ಕೆ ಸೇರಬೇಕೆಂದು ಬೇಡಿಕೆ ಸಲ್ಲಿಸಿದುದರ ವಿರುದ್ದವಾಗಿ ಡಾ|| ಸಿದ್ದನಾಥರ ಮೇಲೆ

ಆಡಳಿತಾಧಿಕಾರಿಗಳು ಕಾರ್ಯವಾಹಿ ನಡೆಸಿದ್ದರಿಂದ ಆರ್ಥಿಕ ದೃಷ್ಟಿಯಿಂದ ಬಹಳ ಹಾನಿಯಾಯಿತು. ಅಷ್ಟೇ ಅಲ್ಲ, ಬರುವಂತಹ ಬಡ್ತಿ ನಿಂತಿತು. ಆದರೆ ಮಹಾನಗರಪಾಲಿಕೆಯ ಮಹಾಪೌರರು ಹೆಚ್ಚಾಗಿ ಕನ್ನಡಿಗರೇ ಆಗಿದ್ದರಿಂದ ಅವರಿಗೆ ನೌಕರಿಯಿಂದ ತೆಗೆಯಲು ಮಾತ್ರ ಸಾಧ್ಯವಾಗಲಿಲ್ಲ. ಒಂದು ವೇಳೆ ಸಾಧ್ಯವಾಗಿದ್ದರೆ ಅವರ ಸಂಸಾರದ ಗತಿ ಏನಾಗುತ್ತಿತ್ತೋ?

ಅಪ್ಪಟ ಕನ್ನಡ ಪ್ರದೇಶವಾದ ಸೋಲ್ಲಾಪುರವು ಕರ್ನಾಟಕಕ್ಕೆ ಸೇರಬೇಕೆಂಬ ಸಂಕಲ್ಪ ಹೊತ್ತು ಆಜೀವ ಹೋರಾಟಗ್ಯೆದರು, ವ್ಯೆ.ಬಿ. ಚವ್ಹಾಣ, ವಿ.ಪಿ. ನಾಯಕ, ವಸಂತದಾದ ಪಾಟೀಲ, ಎಸ್.ಬಿ. ಚವ್ಹಾಣ - ಹೀಗೆ ಅನೇಕ ಮುಖ್ಯಮಂತ್ರಿಗಳೆದುರು ಸೋಲ್ಲಾಪುರ ಕರ್ನಾಟಕದ ಅವಿಭಾಜ್ಯ ಅಂಗವೆಂದು ದಿಟ್ಟತನದಿಂದ ಪ್ರತಿಪಾದಿಸಿ ಹಲವು ಹತ್ತು ಸಲ ಮನವಿ ಸಲ್ಲಿಸಿದರು. “ಸ್ವಾತಂತ್ರ್ಯ ಹೋರಾಟಗಾರರಾಗಿದ್ದರೂ ಕನ್ನಡ ಹೋರಾಟಗಾರ ಎಂಬ ಕಾರಣದಿಂದ ಸ್ವಾತಂತ್ರ್ಯ ಸೇನಾನಿ ಗೌರವ ಮತ್ತು ಮಾಸಿಕ ಧನ ಸಿಗದೇ ಹೋಯಿತು” ಎಂದು ಆರ್.ಟಿ. ಮಜ್ಜಿಗೆ ಅವರು (ಕನ್ನಡ ಕೆಚ್ಚೆದೆಯ ಹೋರಾಟಗಾರ ಡಾ॥ ಸಿದ್ದನಾಥ ಬಳ್ಳಾರಿ - ಲೇಖನ) ಹೇಳಿದ್ದಾರೆ. ಉಪರಾಷ್ಟ್ರಪತಿ ಬಿ.ಡಿ. ಜತ್ತಿ, ಮುಖ್ಯಮಂತ್ರಿಗಳು ವೀರೇಂದ್ರ ಪಾಟೀಲ, ದೇವರಾಜ ಅರಸು, ಎಸ್. ನಿಜಲಿಂಗಪ್ಪ, ಗುಂಡುರಾವ್, ರಾಮಕೃಷ್ಣಹೆಗಡೆ ಮುಂತಾದವರಲ್ಲದೆ ಎಸ್. ಚನ್ನಯ್ಯ, ಗುದ್ದೆಪ್ಪ ಹಳ್ಳಿಕೇರಿ, ಎಸ್.ಎಸ್.ಮಳೀಮಠ ಮುಂತಾದ ಪ್ರಮುಖರೊಂದಿಗೆ ಅವರ ಸಂಬಂಧ ಚೆನ್ನಾಗಿತ್ತು. “ಸೋಲ್ಲಾಪುರವು ಕರ್ನಾಟಕದ ಹೃದಯನಗರಿ, ಅದು ಕನ್ನಡಿಗರ ಸೊತ್ತು” ಎಂದು ಅವರೊಂದಿಗೆ ಚರ್ಚಿಸಿ, ಸೋಲ್ಲಾಪುರವನ್ನು ಒಳಗೊಂಡು ಅಖಂಡ ಕರ್ನಾಟಕವಾಗಲೀ ಎಂದು ಅವರೊಂದಿಗೆ ಚರ್ಚಿಸಿ ಮನವಿಯನ್ನು ಸಲ್ಲಿಸುತ್ತಿದ್ದರು. ಬೆಟ್ಟಿ ಕೊಡುವುದನ್ನೆ ಮಹದುಪಕಾರವೆಂದು ಬಗೆಯುವ ಜನರು ಬೇರೆ ಏನನ್ನು ಮಾಡಬಲ್ಲರು? ಹಿಂದೆ ಶ್ರೀ ಗುಂಡುರಾಯರು ಮುಖ್ಯ ಮಂತ್ರಿಯಾಗಿದ್ದಾಗ, ಅವರನ್ನು ಕಾಣಲು ಬೆಂಗಳೂರಿಗೆ ಬಂದಿದ್ದ ಗಡಿನಾಡಿನ ಕನ್ನಡ ದುರೀಣ ಡಾ॥ ಸಿದ್ದನಾಥ ಬಳ್ಳಾರಿ ಹದಿನೆಂಟು ದಿನಗಳವರೆಗೆ ಕಾಯಬೇಕಾಯಿತು” ಎಂದು ನಾಡೋಜ ಪಾಟೀಲ ಪುಟ್ಟಪ್ಪನವರು ಹೇಳುವಲ್ಲಿ ಡಾ॥ ಸಿದ್ಧನಾಥ ಅವರದು ಕನ್ನಡ ಕಾರ್ಯಕ್ಕಾಗಿ ಕಾಯುವ ಸಹನಶಕ್ತಿ ಎಷ್ಟಿತ್ತೆಂದು ಗುರುತಿಸಬಹುದು.

ಬಸವಜಯಂತಿ, ಅಕ್ಕನ ಜಯಂತಿ, ನಾಡಹಬ್ಬ ಮುಂತಾದವುಗಳನ್ನು ಸೋಲ್ಲಾಪುರದಲ್ಲಿ ಆಚರಣೆಯಲ್ಲಿ ತಂದು ಪ್ರಸಿದ್ಧ ಕಲಾಕಾರರನ್ನು ಕರೆಯಿಸಿ ಕಾರಕ್ರಮಗಳನ್ನು ಏರ್ಪಡಿಸಿ, ಕನ್ನಡತನವನ್ನು ಜಾಗೃತಗೊಳಿಸುತ್ತಿದ್ದರು. ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಸ್ವತಃ ಭಾಗವವಹಿಸುವದಲ್ಲದೆ, ಸೊಲ್ಲಾಪುರದ ಸುತ್ತುಮುತ್ತಲಿನ ಹಳ್ಳಿಗಳಿಗೆ ಹೋಗಿ ಚಳುವಳಿಗಾರರನ್ನು ತಯಾರು ಮಾಡುವುದು, ಕನ್ನಡ ಶಾಲೆಗಳನ್ನು ತೆರೆಯುವುದು, ದುಸ್ಥಿತಿಯಲ್ಲಿರುವ ಕನ್ನಡ ಶಾಲೆಗಳನ್ನು ಸುಸ್ಥಿತಿಯಲ್ಲಿ ತರುವದು ಅಲ್ಲದೆ ಶಾಲೆಗಳಿಗೆ ಪಠ್ಯಪುಸ್ತಕಗಳನ್ನು ಒದಗಿಸುವುದು ಕನ್ನಡ ಪತ್ರಿಕೆಗಳನ್ನು ಮನೆಮನೆಗೆ ಹಂಚುವುದು ಈ ಎಲ್ಲ ಕನ್ನಡ ಕಾರ್ಯಗಳನ್ನು ಮಾಡುತ್ತ 'ಕನ್ನಡವೇ ಸತ್ಯ ಕನ್ನಡವೇ

ನಿತ್ಯ' ಎಂದು ಕನ್ನಡ ವೃತನಿಷ್ಠರಾಗಿ ಸೊಲ್ಲಾಪುರವು ಕನ್ನಡದ್ದೆಂದು ಕೊನೆಯ ಉಸಿರಿರುವ ವರೆಗೆ ಸಿದ್ಧನಾಥ ಬಳ್ಳಾರಿ ಅವರು ಹೇಳುತ್ತಿದ್ದರು.

"ಬಳ್ಳಾರಿಯ ಹಗರಿಬೊಮ್ಮನಹಳ್ಳಿಯ ಸಿದ್ದಪ್ಪ ಡಾ॥ ಸಿದ್ಧನಾಥನಾಗಿ ಸೊಲ್ಲಾಪುರದಲ್ಲಿ 1946ರಲ್ಲಿ ಕಾಲಿರಿಸಿದೆ" ಎಂದು ಹೇಳುತ್ತ, ಒಂದೆಡೆ ಇದಕ್ಕೆ ಕಾರಣವನ್ನು ಆಪ್ತರೆದುರು ವಿನೋದದಿಂದ ಅವರು ಹೀಗೂ ಹೇಳುವರು. ಕೊಟ್ಟೂರು ಬಸವೇಶ್ವರರೇ ಸೊನ್ನಲಿಗೆ ಸಿದ್ಧರಾಮನಲ್ಲಿಗೆ ಕನ್ನಡಸೇವೆ ಮಾಡಲು ಕಳುಹಿಸಿಕೊಟ್ಟಿದ್ದಾರೆ"

ಹೀಗೆ, ಅವರ ಜೀವನವು ಇಮ್ಮುಖವಾಗಿ ಹರಿದಿದ್ದರಿಂದ ಎರಡು ಘಟ್ಟಗಳನ್ನಾಗಿ ಮಾಡಿಕೊಂಡು, ಇಲ್ಲಿ ಡಾ॥ ಸಿದ್ಧನಾಥ ಬಳ್ಳಾರಿಯವರ ಬಾಲ್ಯದಿಂದ ಹಿಡಿದು ಕೊನೆಯವರೆಗಿನ ಅವರ ಜೀವನ ಚರಿತ್ರೆಯನ್ನು ಬರೆಯಲು ಪ್ರಯತ್ನಿಸಿದ್ದೇನೆ. ಅಷ್ಟೇ ಅಲ್ಲ, ಅವರ ಜೀವನವು ಎರಡು ಕವಲಾಗಿ ಹರಿದರೂ, ಅವರಲ್ಲಿ ಅಡಗಿರುವುದು ಒಬ್ಬ ಕೆಚ್ಚೆದೆಯ ಕನ್ನಡ ಹೋರಾಟಗಾರನ ಚಿತ್ರವೆಂಬುದನ್ನು ಕೂಡ ಇಲ್ಲಿ ಬಿಂಬಿಸಲು ಯತ್ನಿಸಿದ್ದೇನೆ.

# ಅಧ್ಯಾಯ - ೨

## ಸಿದ್ದನಾಥ ಬಳ್ಳಾರಿಯವರ ಪ್ರಾರಂಭದ ಜೀವನ ಘಟ್ಟ (೧೯೧೦ ರಿಂದ ೧೯೪೭)

# ೧. ಬಾಲ್ಯ

ಡಾ|| ಬಳ್ಳಾರಿ ಸಿದ್ದನಾಥ ಅವರ ಹುಟ್ಟೂರು ಹಗರಿಬೊಮ್ಮನಹಳ್ಳಿ, ಅವರ ಮನೆತನದ ಮೂಲಪುರುಷರು ಬಳ್ಳಾರಿಯವರಾಗಿದ್ದು, ಅಲ್ಲಿಂದ ಹಗರಿಬೊಮ್ಮನಹಳ್ಳಿಗೆ ಬಂದಿರಬೇಕು. ಅಂತೆಯೇ ಅವರ ಮನೆತನಕ್ಕೆ 'ಬಳ್ಳಾರಿ' ಯೆಂಬ ಹೆಸರು ಬಂದಿರಬೇಕು. ಅವರ ತಂದೆ ರೇವಪ್ಪ ಹಿರಿಯರಿಂದ ಬಂದ ಕಾಯಕವಾದ ಒಕ್ಕಲುತನವನ್ನೇ ಮುಂದುವರೆಸಿಕೊಂಡು ಬಂದ ಶರಣಜೀವಿಯಾಗಿದ್ದನು. ಅವನಿಗೆ ಸತಿಯಾಗಿ ಬಂದ ರೇವಮ್ಮ ಕೂಡ ಸಾತ್ವಿಕ ಮನೋಧರ್ಮದವಳು. ಸತಿಪತಿಯರಿಬ್ಬರು ಶರಣ ಸಂಸ್ಕೃತಿಯನ್ನು ಅಳವಡಿಸಿಕೊಂಡು ಗುರುಲಿಂಗಜಂಗಮ ಸೇವೆಯನ್ನು ಮನಮುಟ್ಟಿ ಮಾಡುತ್ತಿದ್ದರು.

ಅವರಿಗೆ ಮೊದಲ ಗಂಡುಮಗು ಹುಟ್ಟಿದಾಗ ಉಂಟಾದ ಸಂಭ್ರಮ ಉತ್ಸಾಹ ಹೇಳತೀರದು ಮೊಮ್ಮಗ ಹುಟ್ಟಿದನೆಂದು ಅಜ್ಜ- ಅಜ್ಜಿಯರಿಗೆ ಸಂತೋಷ, ರೇವಪ್ಪನು ಸೊಲ್ಲಾಪುರಕ್ಕೆ ಬಂದು ಭಕ್ತಿಯಿಂದ ಸಿದ್ದರಾಮೇಶ್ವರನ ದರ್ಶನ ಪಡೆದುಕೊಂಡು ಬಂದ ಮೇಲೆ ಹುಟ್ಟಿದ ಈ ಮಗು ಆತನ ಕರುಣೆಯ ಪ್ರಸಾದ ಎಂಬ ನಂಬುಗೆ ಆತನದು. ಗುರುಗಳಾದ ತೆಗ್ಗಿನಮಠದ ಪರಮಪೂಜ್ಯ ಶ್ರೀ ಚಂದ್ರಶೇಖರ ಸ್ವಾಮಿಗಳು ಬಂದು ಮಗುವನ್ನು ನೋಡಿ “ಮುಂದೆ ಸೊನ್ನಲಿಗೆಯ ಸಿದ್ದರಾಮೇಶ್ವರನ ಸನ್ನಿಧಿಯಲ್ಲಿ ಬಾಳಿ ಬದುಕುವ ಈ ಮಗುವಿಗೆ 'ಸಿದ್ಧನಾಥ' ನೆಂದೇ ಕರೆಯಿರಿ” ಎಂದು ಹಣೆಗೆ ವಿಭೂತಿಯಿಟ್ಟು ಆಶೀರ್ವದಿಸಿದರು ಎಲ್ಲರೂ ಆತನನ್ನು ಪ್ರೀತಿಯಿಂದ 'ಸಿದ್ದಪ್ಪ' ನೆಂದೇ ಕರೆಯುವರು ಆತನು ಎಲ್ಲರ ಮುದ್ದಿನ ಮಗನಾಗಿ ಬೆಳೆಯತೊಡಗಿದನು.

- ರೇವಮ ಚುಮುಚುಮು ನಸುಕಿನಲ್ಲೆದ್ದು ಕಸಗೂಡಿಸಿ, ಸಾರಿಸಿ ರಂಗೋಲಿ ಹಾಕುತ್ತ ಹಾಡುವ ಶರಣರ ವಚನಗಳು, ಬೀಸುವಾಗ, ಕುಟ್ಟುವಾಗ ಹಾಡುವ ಜನಪದ ಹಾಡುಗಳು ಸಹಜವಾಗಿ ಎಳೆಯ ಸಿದ್ಧಪ್ಪನ ಮೇಲೆ ವಿಶೇಷ ಪರಿಣಾಮ ಬೀರಿದವು.

ಹಗರಿಬೊಮ್ಮನಹಳ್ಳಿಯಲ್ಲಿ ಎಲ್ಲರೊಂದಿಗೆ ಬೆರೆತು ಬಾಳುವ ಸ್ವಭಾವ ರೇವಪ್ಪನದು. ಹೊಲದಲ್ಲಿ ನೇಗಿಲು ಹೊಡೆಯುವಾಗ, ರಾಶಿ ಮಾಡುವಾಗ, ಲಾವಣಿ, ಹಂತಿ ಪದಗಳನ್ನು ಹಾಡುತ್ತಿದ್ದರೆ ಎತ್ತುಗಳು ಕೂಡ ಗಂಟೆಯ ನಿನಾದದೊಂದಿಗೆ ತಲೆದೂಗುತ್ತಿದ್ದವು. ಊರಲ್ಲಿ ದೊಡ್ಡಾಟ, ಸಣ್ಣಾಟ, ಶ್ರೀಕೃಷ್ಣ ಪಾರಿಜಾತದಂತಹ ಆಟಗಳು, ನಾಟಕಗಳು ಬಂದರೆ ರೇವಪ್ಪ ಸಿದ್ಧಪ್ಪನನ್ನು ಕೈಹಿಡಿದು ಕರೆದುಕೊಂಡು ಹೋಗುತ್ತಿದ್ದನು. ಅದರಲ್ಲಿ ಯಾವುದಾದರೂ ತನಗೆ ಹಿಡಿಸಿದ ಪಾತ್ರ ಅಭಿನಯಿಸಿ ಎಲ್ಲರನ್ನು ನಗಿಸುತ್ತಿದ್ದನು. ತಂದೆಯೊಂದಿಗೆ ಆಧ್ಯಾತ್ಮಿಕ ಪ್ರವಚನ, ಪುರಾಣಗಳಿಗೆ ಹೋದಾಗ, ಅವರು ನಿಜಗುಣ ಶಿವಯೋಗಿ, ಕಡಕೋಳ ಮಡಿವಾಳಪ್ಪ, ಶಿಶುನಾಳ ಷರೀಫ ಮುಂತಾದ ತತ್ವಪದಗಳನ್ನು ಹಾಡುವಾಗ ಸಿದ್ಧಪ್ಪನು ಲಕ್ಷ್ಯಗೊಟ್ಟು ಕೇಳುತ್ತಿದ್ದನು. ಹೀಗೆ ತಂದೆ ತಾಯಿಗಳ ಸಂಸ್ಕಾರವು ಅವನಲ್ಲಿ ಬೆಳೆದು ಬಂದಿತು. ಕನ್ನಡದ ಸಾರಸರ್ವಸ್ವವೆನಿಸಿದ ವಚನಗಳು, ಜನಪದ ಹಾಡುಗಳು,

ತತ್ವ ಪದಕಾರರ ಹಾಡುಗಳು ಅವನ ಮೇಲೆ ಪರಿಣಾಮ ಬೀರಿದವು. ಅಷ್ಟೇ ಅಲ್ಲ ಕನ್ನಡ ನಾಡು ನುಡಿಯಲ್ಲಿ ಆತನ ಪ್ರೇಮ ಅರಿವಿಲ್ಲದೆಯೇ ಬೆಳೆದು ಬಂದಿತು.

# ೧. ಶಿಕ್ಷಣ

ಬ್ರಿಟಿಷರ ಕಾಲಕ್ಕೆ ಮದ್ರಾಸಕ್ಕೊಳಪಟ್ಟ ಇಡೀ ಬಳ್ಳಾರಿಯನ್ನು ಹೇಗಾದರೂ ಕನ್ನಡಿಗರಿಂದ ಕಸಿದುಕೊಳ್ಳಬೇಕೆಂದು ಒಳಗೊಳಗೆ ತೆಲುಗರು ಸಂಚು ನಡೆಸಿದರು. ಹೊಸ ಕನ್ನಡ ಶಾಲೆಗಳನ್ನು ತೆರೆಯಗೊಡುತ್ತಿರಲಿಲ್ಲ. ಹಳೆಯ ಶಾಲೆಗಳನ್ನು ಮುಚ್ಚಿಡಲು ಪ್ರಯತ್ನಿಸುತ್ತಿತ್ತು. ಇಂತಹ ಪರಿಸ್ಥಿತಿಯಲ್ಲಿ ಹಗರಿಬೊಮ್ಮನಹಳ್ಳಿಯಲ್ಲಿರುವ ಕನ್ನಡ ಶಾಲೆಗೆ ಸಿದ್ಧನಾಥನು ಹೋಗಲಾರಂಭಿಸಿದನು.

ಆಟ - ಪಾಠಗಳಲ್ಲಿಯೂ ಸಿದ್ಧನಾಥನು ಶಾಲೆಗೆ ಹೆಸರು ತರುವ ಮಗನಾದ್ದರಿಂದ ತಂದೆ ರೇವಪ್ಪನಿಗೆ ಬಹಳ ಸಂತೋಷವಾಗುತ್ತಿತ್ತು. ತಂದೆ - ತಾಯಿಗಳ ಸಂಸ್ಕಾರವು ಆತನ ಮೇಲೆ ಒಳ್ಳೆಯ ಪರಿಣಾಮ ಬೀರಿತು. ಕನ್ನಡ ನಾಡು - ನುಡಿಯಲ್ಲಂತೂ ಅರಿವಿಲ್ಲದೆಯೇ ಆತನ ಪ್ರೇಮ ಬೆಳೆದು ಬಂದಿತು.

ಹೀಗಿರುವಾಗ ಗುರುಗಳಾದ ಶ್ರೀ ಚಂದ್ರಶೇಖರ ಸ್ವಾಮಿಗಳು ಮನೆಗೆ ದಯಮಾಡಿಸಿದರು. ಆಗ ಅವರು ಐದನೆಯ ಇಯತ್ತೆಯಿಂದ ಮುಂದಿನ ಶಿಕ್ಷಣವನ್ನು ತಮ್ಮ ಮಠದ ವತಿಯಿಂದ ಹರಪನಹಳ್ಳಿಯಲ್ಲಿ ನಡೆಸುವ ವಸತಿಗೃಹದಲ್ಲಿ ಸೇರಿಕೊಂಡು ನಡೆಸಲು ತಿಳಿಸಿದರು. “ಮಗನು ನಮ್ಮಂತಾಗದೆ ಓದುಬರಹ ಚೆನ್ನಾಗಿ ಕಲಿಯಲಿ, ಸಮಾಜದಲ್ಲಿ ಕೀರ್ತಿವಂತನಾಗಲಿ” ಎಂದು ರೇವಪ್ಪ ಒಪ್ಪಿಗೆ ಕೊಟ್ಟರು. ತಾಯಿ ರೇವಮ್ಮನಿಗೆ ಮಗನನ್ನು ಬಿಟ್ಟಿರುವುದೆಂದರೆ ದುಃಖ ಉಕ್ಕಿ ಬಂದಿತು. ಆದರೂ ಮಗನ ಏಳಿಗೆಗಾಗಿ, ಆತನ ಅಗಲುವಿಕೆಯ ಸಂಕಟವನ್ನು ನುಂಗಿಕೊಂಡು ಕಳುಹಿಸಿಕೊಡಲು ತಯಾರಾದಳು.

ತೆಗ್ಗಿನಕೇರಿಯ ಮಠಕ್ಕೆ ಬಂದಾಗ, ಅಲ್ಲಿಯ ಆಧ್ಯಾತ್ಮಿಕ ವಾತಾವರಣ ಅವನಿಗೆ ಹಿಡಿಸಿತು. ಅಲ್ಲಿಯ ನಿಯಮಗಳ ಪ್ರಕಾರ ನಸುಕಿನಲ್ಲಿ ಎದು ಪ್ರಾರ್ಥನೆ ಮಾಡಬೇಕು, ಕೊರಳಲ್ಲಿ ಲಿಂಗ ವಿಭೂತಿ ಧರಿಸಬೇಕು. ಅವನು ಮುಂದೆ ಕೂಡ ಎಂದೂ ಇದನ್ನು ಮರೆತಿಲ್ಲ. ಮಠದ ಪ್ರಸಾದ ಕೋಣೆಯಲ್ಲಿ ನೀರು ತಂದು ಹಾಕುವದು, ಕಟ್ಟಿಗೆ ಒಡೆಯುವುದು ಮುಂತಾದ ಕೆಲಸಗಳನ್ನು ಅಂದಿನ ದಿನಗಳಲ್ಲಿ ವಿದ್ಯಾರ್ಥಿನಿಲಯದಲ್ಲಿ ಮಾಡಬೇಕಾಗುತ್ತಿತ್ತು. ಅವನ್ನೆಲ್ಲ ಶ್ರದ್ಧೆಯಿಂದ ಸಿದ್ಧನಾಥನು ಮಾಡುತ್ತಿದ್ದನು. ಯಾವುದೇ ಕೆಲಸ ಹೇಳಿದರೂ ಶಿಸ್ತು, ಪ್ರಾಮಾಣಿಕತೆಯಿಂದ ಮಾಡುವ ಆತನ ಮೇಲೆ ಗುರುಗಳಿಗೆ ಪ್ರೀತಿ, ವಿಶ್ವಾಸ ಹೆಚ್ಚು. ಶಾಲೆಯಲ್ಲಿಯೂ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದು, ಓದಿನಲ್ಲಿಯೂ ಹಿಂದುಳಿಯದೆ ಕಷ್ಟಪಟ್ಟು ಅಭ್ಯಾಸ ಮಾಡುತ್ತಿದ್ದನು. ಅಷ್ಟೇ ಅಲ್ಲ, ಶಾಲೆಯ ಇತರ ಚಟುವಟಿಕೆಗಳಲ್ಲಿಯೂ ಆಸಕ್ತಿ ತೋರುತ್ತಿದ್ದುದರಿಂದ ಕಲಿಸುವ ಗುರುಗಳಿಗೂ ಆತನು ಅಚ್ಚುಮೆಚ್ಚಿನ ವಿದ್ಯಾರ್ಥಿಯಾಗಿದ್ದನು.

## ಗಾಂಧೀಜಿಯ ಪ್ರಭಾವ

ಶಾಲೆಯಲ್ಲಿದ್ದಾಗಿನಿಂದ ಸಿದ್ದನಾಥನಿಗೆ ಗಾಂಧೀಜಿಯ ಬಗೆಗೆ ಅದೇನೋ ಅವ್ಯಕ್ತ ಪ್ರೀತಿ, ಆತನ ಪಾಠಗಳೆಂದರೆ ಎಷ್ಟು ಸಲ ಓದಿದರೂ ತೃಪ್ತಿಯಿಲ್ಲ. ಶಾಲೆಯಲ್ಲಿ ಒಮ್ಮೆ ಇನ್ಸ್‌ಪೆಕ್ಟರರು ಬಂದಾಗ ತಪ್ಪು ಬರೆದ ಆತನಿಗೆ ಗುರುಗಳು ಸಹಪಾಠಿಯನ್ನು ನೋಡಿ ತಿದ್ದಲು ಸನ್ನೆ ಮಾಡಿದರೂ ತಿದ್ದದೇ ಇದ್ದದ್ದು, 'ಸತ್ಯ ಹರಿಶ್ಚಂದ್ರ' ನಾಟಕ ನೋಡಿ ಸತ್ಯವನ್ನು ನುಡಿಯುವ ಸಂಕಲ್ಪ ತೊಟ್ಟಿದ್ದು, ತಪ್ಪುಗಳನ್ನೆಲ್ಲ ಬರೆದು ತಂದೆಯ ಹತ್ತಿರ ಕ್ಷಮೆ ಕೇಳಿದ್ದು - ಒಂದೇ ಎರಡೇ ಆತನ ಮೇಲೆ ಹೇಳತೀರದ ಪರಿಣಾಮ ಬೀರಿದವು.

ಮಹಾತ್ಮಾ ಗಾಂಧೀಜಿಯವರ ಆರೋಗ್ಯವು ಸರಿಯಿರಲಿಲ್ಲ. ಅದಕ್ಕಾಗಿ ಅವರು ವಿಶ್ರಾಂತಿಗೆಂದು ನಿಸರ್ಗಸೌಂದರ್ಯದಿಂದ ಕೂಡಿದ ಶಾಂತಪರಿಸರವಾದ ನಂದಿಬೆಟ್ಟಕ್ಕೆ ಬಂದಿದ್ದರು. ಅವರ ಆರೋಗ್ಯ ಸುಧಾರಿಸಿದ ತರುವಾಯ ದಾವಣಗೆರೆಯ ಕಾರ್ಯಕರ್ತರು ಅವರಿಗೆ ಒಂದು ದಿನದ ಮಟ್ಟಿಗಾದರೂ ತಮ್ಮಲ್ಲಿಗೆ ಬಂದು ಹೋಗಬೇಕೆಂದು ವಿನಂತಿಸಿದಾಗ ಅವರು ಒಪ್ಪಿಕೊಂಡಿದ್ದರು. ಈ ಸುದ್ದಿ ಎಲ್ಲೆಡೆ ಹಬ್ಬಿತ್ತು. ಅದನ್ನು ಕೇಳಿದ ಕೂಡಲೆ ಸಿದ್ಧನಾಥನಿಗೆ ಗಾಂಧೀಜಿಯನ್ನು ನೋಡಬೇಕೆಂಬ ಅದಮ್ಯ ಆಶೆ ಹತ್ತಿಡಲಾಗಲಿಲ್ಲ. ಯಾರಿಗೂ ಹೇಳದೆ ತನ್ನಂತೆ ನೋಡುವ ಹಂಬಲವಿದ್ದ ಬಸಪ್ಪ, ನಿಂಗಪ್ಪರನ್ನು ಹೊರಡಿಸಿದನು. ತನ್ನಲ್ಲಿ ಅಕ್ಕರೆ ತೋರುವ ಅಡುಗೆಯ ಅಜ್ಜಿಗೆ ರಮಿಸಿ, ಮೂರು ದಿನದ ಬುತ್ತಿಯನ್ನು ಕಟ್ಟಿಸಿಕೊಂಡನು.

ಬಸ್ ಸಾರಿಗೆ ಇಲ್ಲದ ಅಂದಿನ ದಿನಗಳಲ್ಲಿ ಬಿಸಿಲು ಗಾಳಿ ಮಳೆಯನ್ನು ಲೆಕ್ಕಿಸದೆ ಕಾಲ್ನಡಿಗೆಯಿಂದ ನಡೆದು ನಡೆದು ಜೊತೆಗಾರರೊಂದಿಗೆ ದಾವಣಗೆರೆಯನ್ನು ಮುಟ್ಟಿದನು. ಇಂದು ಬರಿಗಾಲಿನಿಂದ ಬೇಡಿಕೊಂಡು ಗುಡಿಗುಂಡಾರಗಳಿಗೆ ಹೋಗಿ ದೇವರ ದರ್ಶನ ಪಡೆಯುವ ಎಷ್ಟೋ ಭಕ್ತರನ್ನು ಕಾಣುತ್ತೇವೆ. ಆದರೆ 12 - 13 ವರ್ಷದ ಹುಡುಗ ಹಗಲು ರಾತ್ರಿಯೆನ್ನದೆ ನಡೆಯುತ್ತ ಗಾಂಧೀಜಿಯವರ ದರ್ಶನಕ್ಕೆ ಹೋಗುತ್ತಾನೆಂದರೆ ಅವರ ಮೇಲೆ ಆತನ ಭಕ್ತಿಭಾವ ಎಷ್ಟಿರಬೇಡ? ಇದನ್ನು ನೋಡಿದರೆ, ಆಗ ಬಾಲಕರಿಂದ

ಮುದುಕರ ವರೆಗೆ ಪಾರತಂತ್ರದಲ್ಲಿ ಸಿಲುಕಿರುವ ಭಾರತಮಾತೆಗೆ ಗಾಂಧೀಜಿ ಸ್ವಾತಂತ್ರ್ಯವನ್ನು ತಂದು ಕೊಡುವರೆಂಬ ನಂಬುಗೆಯೆಷ್ಟಿತ್ತೆಂದು ತಿಳಿದು ಬರುತ್ತದೆ. ಗಾಂಧೀಜಿಯವರನ್ನು ನೋಡಲೆಂದು ಬಂದ ಜನರ ಗದ್ದಲಿನಲ್ಲಿ ಹೇಗೋ ದಾರಿ ಮಾಡಿಕೊಂಡು ಹೋಗಿ ನೋಡಿದಾಗ ಉಂಟಾದ ಭಾವನೆಯನ್ನು ಸಿದ್ಧನಾಥ ಅವರ ಮಾತುಗಳಲ್ಲಿಯೇ ಕೇಳಬಹುದು. "ದಾವಣಗೆರೆಯಲ್ಲಿ ರೈಲ್ವೆನಿಲ್ದಾಣದ ಎದುರಿನ ಒಂದು ಬಂಗಲೆಯಲ್ಲಿ ಮಹಾತ್ಮಾಜಿ ಹಾಗು ಅವರ ಪರಿವಾರದವರ ಠಾಣ್ಯ ಒಂದು ಕಡೆ ನಿಲ್ಲದೆ ಬಂದವರೊಡನೆ ಮಾತನಾಡುತ್ತ ಪುಳುಪುಳು ಅತ್ತಿತ್ತ ತಿರುಗುವ ಅರೆಬರಿಮೈಯ ಮಹಾತ್ಮರನ್ನು ದೂರದಿಂದಲೇ ಎಷ್ಟು ನೋಡಿದರೂ ಕಣ್ಮನ ದಣಿಯವು. ಮಹಾತ್ಮಾಜೀಯವರ ದರ್ಶನದಲ್ಲಿ ಅದಾವ ಜಾದುಗಾರಿಕೆಯೋ ತಿಳಿಯದು". ಹೀಗೆ ಸಿದ್ಧನಾಥನಿಗೆ ಗಾಂಧೀಜಿಯವರನ್ನು ನೋಡಿ ಜನ್ಮ ಸಾರ್ಥಕವಾದಂತೆನಿಸಿತು.

ಅಲ್ಲಿಂದ ಬಂದ ಮೇಲೆ ಅವನಿಗೆ ಗಂಧೀಜಿಯ ಹುಚ್ಚು ಇನು ತಲೆಗೇರಿತು. ಅಗ್ಗದ ದರದಲ್ಲಿಯ ಕನ್ನಡಾನುವಾದದ ಗಾಂಧೀಜಿಯನ್ನು ಕುರಿತು ಬರೆದ ಪುಸ್ತಕಗಳನ್ನೆಲ್ಲ ಕೊಂಡುಕೊಂಡು ಓದಿ ಮುಗಿಸಿದನು. ಹೈಸ್ಕೂಲಿಗೆ. ಬಂದರೂ ಅವನ ಆ ಗಾಂಧೀ ಗೀಳು ಬಿಡಲಿಲ್ಲ. ಅವರ ಬಗ್ಗೆ ಎಲ್ಲಿಯಾದರೂ ಮತ್ತೆ ಹೊಸ ಪುಸ್ತಕ ದೊರೆತರೆ ಅದನ್ನು ಓದಿಯೇ ಬರುತ್ತಿದ್ದನು. ಈ ಓದಿನ ನಡುವೆ ಪಠ್ಯಪುಸ್ತಕಗಳತ್ತ ಕಣ್ಣು ಹಾಯಿಸಲು ಅವನಿಗೆ ಮನಸ್ಸಿರಲಿಲ್ಲ.

ಒಂದು ದಿನ ನಸುಕಿನಲ್ಲಿ ಎದ್ದವನೇ ಮಠದ ಹಿತ್ತಲಲ್ಲಿ ಹೋಗಿ, ಅಲ್ಲಿರುವ ಕಲ್ಲು, ಗಿಡಗಂಟಿಗಳನ್ನೆಲ್ಲ ಪ್ರೇಕ್ಷಕರೆಂದು ತಿಳಿದು ಭಾಷಣ ಪ್ರಾರಂಭಿಸಿದನು. "ಓ, ಭಾರತೀಯ ಬಂಧು ಭಗಿನಿಯರೆ, ಸತ್ಯ ಅಹಿಂಸೆಯಿಂದ ಸ್ವಾತಂತ್ರ ಆಂದೋಲನಕ್ಕಾಗಿ ಹೋರಾಡುವ ಗಾಂಧೀಜಿಯೊಂದಿಗೆ ನಾವು ಜೀವವನ್ನೇ ಪಣಕ್ಕಿಟ್ಟು ಹೋರಾಡೋಣ ........." ಎಂದೆಲ್ಲ ಕೈಮಾಡಿ ಮೈಮರೆತು ಎಷ್ಟೊತ್ತು ಭಾಷಣ ಮಾಡುತ್ತಿದ್ದನೋ ಏನೋ. ಅಷ್ಟರಲ್ಲಿ – "ಸಿದ್ದ, ಗಾಂಧಿ ಹುಚ್ಚು ಹಿಡಿತೋ ನಿನಗೆ" ಎಂದು ಗೊಳ್ಳೆಂದು ನಕ್ಕಾಗ ಅವನಿಗೆ ಎಚ್ಚರವಾಯಿತು. ಹಿಂದೆ ತಿರುಗಿ ನೋಡಿದಾಗ ಶ್ರೀ ಚಂದ್ರಶೇಖರ ಸ್ವಾಮಿಗಳು ಪ್ರತ್ಯಕ್ಷವಾಗಿದ್ದರು. ಅವನಿಗೆ ನಾಚಿಕೆಯಾಗಿ ಕ್ಷಣಮಾತ್ರವೂ ಅಲ್ಲಿ ನಿಲ್ಲದೆ ಓಡಿ ಹೋದರು. ಅಂದಿನಿಂದ 'ಗಾಂಧಿ ಹುಚ್ಚು ಹಿಡಿದ ಸಿದ್ದ' ಎಂದು ಊರ ತುಂಬೆಲ ಪ್ರಚಾರವಾಯಿತು. ಇದು ಹೊರಗೆ ಹರಡಿದಂತೆ ಅವನೊಳಗೂ ಬೇರಿಳಿದು ಎಷ್ಟೊಂದು ಗಟ್ಟಿಯಾಯಿತೆಂದರೆ ರಾಷ್ಟ್ರಪಿತ ಗಾಂಧೀಯವರೇ ತನ್ನ ಪಿತ ಎಂದು ಹೇಳುವವರೆಗೆ, 1930ರಲ್ಲಿ ಮಾಡಿದ ಸತ್ಯಾಗ್ರಹಕ್ಕಾಗಿ ನಡೆದ ವಿಚಾರಣೆಯಲ್ಲಿ ತಂದೆಯ ಹೆಸರು ರೇವಪ್ಪ ಎಂದೆನ್ನದೆ 'ಗಾಂಧೀ' ಎಂದು ಅವನು ಹೇಳಿದ್ದು ಇಂದಿಗೂ ಜೈಲು ರಿಕಾರ್ಡಿನಲ್ಲಿ ದೊರೆಯುತ್ತದೆ. ಅಂದು ಗಾಂಧೀಜಿಯ ನೇತೃತ್ವದಲ್ಲಿ ಅಸಂಖ್ಯಾತ ಜನರೆಲ್ಲ ಮಂತ್ರ ಮುಗ್ಧರಾಗಿ ಹಿಂಬಾಲಿಸಿದರು. ಬ್ರಿಟಿಷರು ಭಾರತ ಬಿಟ್ಟು ತೊಲಗಬೇಕೆಂದು ಸತ್ಯ ಅಹಿಂಸೆಯ ಮಂತ್ರವನ್ನು ಊದಿದ ಗಾಂಧೀಜಿ ಪವಾಡ ಪುರುಷನೆಂದೇ ಆತನ ಭಾವನೆ. "ಇಡೀ ಪ್ರಪಂಚದಲ್ಲಿಯೇ ಈ ರೀತಿಯ ಅಹಿಂಸಾ ಸತ್ಯಾಗ್ರಹ ಸಮರ ಹಿಂದೆಯೂ ಆಗಿರಲಿಲ್ಲ ಮುಂದೆಯೂ ಇದುವರೆಗೆ ನಡೆದಿಲ್ಲ" ಎಂದು ಕಯ್ಯಾರ ಕಿಞ್ಞಣ್ಣ ರೈ ಹೇಳಿದ್ದು ಇಲ್ಲಿ ನೆನಪಾಗುತ್ತದೆ ಹುಟ್ಟು ಹೋರಾಟಗಾರನಾಗಿದ್ದ ಸಿದ್ದನಾಥನಿಗೆ ಬರಬರುತ್ತ ಆಟಪಾಠಗಳೆಲ್ಲ ಬೇಡವಾದವು. ಬರಿಯ ಗಾಂಧೀಜಿಯ ಸುತ್ತಲೇ ಆತನ ವಿಚಾರಗಳು ಸುಳಿದಾಡುತ್ತಿದ್ದವು. ಓದಿನ ಕಡೆಗೆ ಲಕ್ಷ್ಯವಿರದೆ, ಹೇಗೋ ಎಸ್.ಎಸ್.ಎಲ್.ಸಿ. ವರೆಗೆ ಬಂದು ಮುಟ್ಟಿದರೂ ಅದನ್ನು ಆತನು ಪೂರ್ಣ ಮಾಡಲೇ ಇಲ್ಲ.

ತೆಗ್ಗಿನಮಠದ ಶ್ರೀ ಚಂದ್ರಶೇಖರ ಸ್ವಾಮಿಗಳು ಎಸ್.ಎಸ್.ಎಲ್.ಸಿ. ಪೂರ್ಣ ಮಾಡಿ, ಸ್ವಾತಂತ್ರ್ಯ ಕರೆಗೆ ಓಗೊಡಬೇಕೆಂದು ಎಷ್ಟು ತಿಳಿ ಹೇಳಿದರೂ ಆತನಿಗೆ ಸಾಧ್ಯವಾಗಲಿಲ್ಲ. "ದೇಶಕ್ಕೆ ದೇಶವೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದಾಗ ತಾನು ಕೈಕಟ್ಟಿ ಕೂಡುವುದೆಂತು ಸಾಧ್ಯ ಹೇಳಿ ಗುರುಗಳೇ" ಎಂದಾಗ ಅವರಿಗೂ ಅದು ಸರಿಯೆನ್ನಿಸಿ ಒಪ್ಪಿಗೆ ಕೊಟ್ಟರು. ಮತ್ತೆ ಸಿದ್ಧನಾಥನು "ಗುರುಗಳೇ, ನೀವೇ ಹಗರಿಬೊಮ್ಮನಹಳ್ಳಿಗೆ ಬಂದು ತಂದೆತಾಯಿಗಳಿಗೂ ತಿಳಿಸಿ ಹೇಳಬೇಕು" ಎಂದು ಅವರ ಮೇಲೆ ಭಾರ ಹಾಕಿದಾಗ, ಅವರಿಗೆ ಇಲ್ಲವೆನ್ನಲಾಗಲಿಲ್ಲ.

ಸಿದ್ಧನಾಥನು ತಂದೆ ರೇವಪ್ಪನು ಚಳುವಳಿಯಲ್ಲಿ ಭಾಗವಹಿಸಲು ಒಪ್ಪಿಗೆ ಕೊಡಲಿಕ್ಕಿಲ್ಲವೆಂದೇ ಗುರುಗಳಿಗೆ ಹೇಳಿದ್ದನು. ಗುರುಗಳ ಮಾತನ್ನು ಅವರು ಮೀರುವುದಿಲ್ಲವೆಂದು ತಿಳಿದಿತ್ತು. ಅವರಿಗೆ ಸ್ವಾತಂತ್ರ್ಯ ಹೋರಾಟ ಚಳುವಳಿ ಎಂದರೆ ಏನೋ ಭಯ, ಆತಂಕ, ಸಿದ್ಧನಾಥನ ಮಾತಿಗೆ ಮೊದಲು ಬೇಡವೆನ್ನುತ್ತಿದ್ದರೂ ಗುರುಗಳು ಮನೆಗೆ ಬಂದು "ದೇಶಸೇವೆ ಮಾಡಲು ಹೊರಟ ಮಗನನ್ನು ತಡೆಯಬೇಡ, ಕಳುಹಿಸಿಕೊಡು ರೇವಪ್ಪ" ಎಂದೊಡನೆ ಮರುಮಾತನಾಡದೆ ಒಪ್ಪಿಗೆಯನ್ನು ಇತ್ತನು. ತಾಯಿ ರೇವಮ್ಮ "ಆಗಾಗ ಮನೆಗೆ ಬಂದು ಹೋಗಿ ಮಾಡಪ್ಪ" ಎಂದು ಕಣ್ಣು ತುಂಬ ನೀರು ತುಂಬಿಕೊಂಡು ಹೇಳಿದಾಗ ತಾಯಕರುಳ ನುಡಿಗೆ ತಲೆಬಾಗಿದನು.

**"ಎಲ್ಲೇ ಇರಲಿ ಹುಲ್ಲಾಗಿ ಬೆಳೆಯಲಿ |**
**ನೆಲ್ಲಿಬಡ್ಡ್ಯಾಗಿ ಚಿಗುರಲಿ | ನನ ಕಂದ |**
**ಜಯವಂತನಾಗಿ ಬೆಳೆಯಲಿ ||"**

ಎಂದು ಸಿದ್ಧನಿಗೆ ಆ ರೇವಮ್ಮತಾಯಿ ಹೃದಯದುಂಬಿ ಆಶೀರ್ವದಿಸಿದಳು.

## ೩. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಟಗಾರರಾಗಿ

"1929 ರ ಕೊನೆಯವರೆಗೆ ನಮ್ಮ ಜಿಲ್ಲೆಯ ಬಹುಸಂಖ್ಯಾತ ಜನರಿಗೆ ಕಾಂಗ್ರೆಸ್ - ಮಹಾತ್ಮಾ ಗಾಂಧಿ - ಸ್ವಾತಂತ್ರ್ಯ ಹೋರಾಟ ಎಂದರೆ ಏನು ಎಂಬುದು ತಿಳಿಯದಿದ್ದ ಪರಿಸ್ಥಿತಿ. ಹರಪನಹಳ್ಳಿಯ ವಯೋವೃದ್ಧರೂ ಅಪ್ಪಟ ಗಾಂಧೀವಾದಿಗಳೂ ಆಗಿದ್ದ ದಿ॥ ಇಜಾರಿ ವಸುಪಾಲಪ್ಪನವರು ಆಗ ಕಾಂಗ್ರೆಸ್ ಅಧಿವೇಶನಗಳಲ್ಲಿ ತಪ್ಪದೆ ಭಾಗವಹಿಸುತ್ತಿದ್ದರೆಂಬುದು ನನಗೆ ಈಗಲೂ ನೆನಪಿದೆ. ಅವರು ಜಿಲ್ಲೆಯ ಪ್ರಮುಖ ಭಾಗಗಳಾದ ಹರಪನಹಳ್ಳಿ, ಹೊಸಪೇಟೆ, ಬಳ್ಳಾರಿ ನಗರಗಳನ್ನು ಸುತ್ತಿ ಕಾಂಗ್ರೆಸ್ ಸಂದೇಶದಲ್ಲಾದ ಗೊತ್ತುವಳಿ ಮುಂತಾದ ವಿಷಯ ಕುರಿತು ಕುಂತುನಿಂತಲ್ಲಿ ಚರ್ಚಿಸುತ್ತಿದ್ದರು. ಆದ್ದರಿಂದ ವಸುಪಾಲಪ್ಪನವರು ನಮ್ಮ ಜಿಲ್ಲೆಯಲ್ಲಿ ಕಾಂಗ್ರೆಸ್ಸಿನ ಧ್ಯೇಯಧೋರಣೆ - ಸ್ವಾತಂತ್ರ್ಯ ಆಂದೋಲನದ ಗೊತ್ತುಗುರಿಗಳ - ಮಹಾತ್ಮಾ ಗಾಂಧಿಯವರ ತತ್ವದ ಬೀಜ ಬಿತ್ತಿದ ಮೊದಲಿಗರೆಂದರೆ ತಪ್ಪಾಗದು" ಮುಂದೆ 1930ರಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯ ಆಂದೋಲನ ಇಡೀ ಜಿಲ್ಲೆಯನ್ನೇ ವ್ಯಾಪಿಸಿತೆನ್ನಬಹುದು.

1927 ರಲ್ಲಿಯೇ ಸಿದ್ಧನಾಥನು ಶಾಲೆಗೆ ಶರಣುಹೊಡೆದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದನು ತನ್ನಂತಿರುವ 25 ಜನ ಯುವಕರ ಗುಂಪನ್ನು ತಯಾರು ಮಾಡಿದನು. ವಸುಪಾಲನಂತಹ ಹಿರಿಯರಿಂದ ಪರಿಸ್ಥಿತಿಯ ಬಗೆಗೆ ಚರ್ಚಿಸಿದರು. ಅವರಿಂದ ಅನೇಕ ಸ್ವಾತಂತ್ರ್ಯ ಹೋರಾಟಗಾರರ ಹಾಗೂ ಅವರ ಕಾರ್ಯಗಳನ್ನು ತಿಳಿದುಕೊಂಡನು ಅಲ್ಲದೆ ಅವರು ಡಾ॥ ನಾ.ಸು. ಹರ್ಡೀಕರ್ ಅವರ 'ಹಿಂದೂಸ್ತಾನಿ ಸೇವಾದಳ'ದಲ್ಲಿ ತರಬೇತಿ ಹೊಂದಲು ಸಿದ್ಧನಾಥನಿಗೆ ಸೂಚಿಸಿದರು, ಅಲ್ಲದೆ ಗಾಂಧೀವಾದಿಗಳಾದ ಹರ್ಡೀಕರ ಮಂಜಪ್ಪ ಹುಬ್ಬಳ್ಳಿಯಲ್ಲಿ, ಹರಿಹರದಲ್ಲಿ ಸತ್ಯಾಗ್ರಹ ಆಶ್ರಮಗಳನ್ನು ಕಟ್ಟಿಕೊಂಡು ಬ್ರಹ್ಮಚಾರಿಗಳಾಗಿ ಸಾಹಿತಿಗಳಾಗಿ, ದೇಶಕ್ಕಾಗಿ, ಜನತೆಗಾಗಿ ಅನೇಕ ರೀತಿಯಿಂದ ದುಡಿಯುವ, "ಕರ್ನಾಟಕ ಗಾಂಧಿ" ಎಂದೇ ಹೆಸರಾದ ಮಹಾನ್ ವ್ಯಕ್ತಿಯ ಮೇಲೆಯೂ ಸಿದ್ದನಾಥನಿಗೆ ಅತ್ಯಂತ ಪೂಜ್ಯಭಾವ ಉಂಟಾಯಿತು. ಅವರನ್ನು ಹುಬ್ಬಳ್ಳಿಯಲ್ಲಿದ್ದಾಗ ಸಿದ್ದನಾಥನು ಬೆಟ್ಟಿಯಾಗಿ, ಅವರೊಂದಿಗೆ ಅನೇಕ ವಿಷಯಗಳ ಬಗೆಗೆ ಚರ್ಚೆ ಮಾಡಿದನು. ಸಂಚಾಲಕರಾದ ಡಾ॥ ನಾ.ಸು. ಹರ್ಡೀಕರ ಅವರ ಹತ್ತಿರವೇ ಸ್ವಲ್ಪ ದಿವಸ ಇದ್ದು **'ಹಿಂದೂಸ್ತಾನ ಸೇವಾದಳ'ದಲ್ಲಿ** ತರಬೇತಿ ಪಡೆದನು. ಇದರಿಂದ ಹುಬ್ಬಳ್ಳಿಯಲ್ಲಿ ಶರಣ ತತ್ವಗಳನ್ನು ಅಳವಡಿಸಿಕೊಳ್ಳುವುದರೊಂದಿಗೆ ರಾಷ್ಟ್ರಪ್ರೇಮ, ನಾಡಪ್ರೇಮವನ್ನು ಬೆಳೆಸಿಕೊಳ್ಳಲು ಅವರಿಗೆ ಸಾಧ್ಯವಾಯಿತು. "ಮಂಜಪ್ಪ ಹರ್ಡೀಕರ ಅವರು ಗಾಂಧೀಜಿಯ ಹೆಸರಿನಲ್ಲಿ ವೀರಶೈವ ಶರಣರ ಸಿದ್ಧಾಂತದ ಪ್ರಚಾರಕರಂತೆ ಮತ್ತು ಶರಣರ ಹೆಸರಿನಲ್ಲಿ ಗಾಂಧಿ ಸಿದ್ಧಾಂತದ ಪ್ರಸಾರಕರಂತೆ ಕಂಡು ಬಂದರೆ ಅದಕ್ಕೆ ಕಾರಣ ಅವೆರಡು ಸಿದ್ಧಾಂತಗಳಲ್ಲಿ ಕಂಡುಕೊಂಡ ಸಮನ್ವಯವೇ ಆಗಿದೆ. ಇದರ ಫಲವೆಂಬಂತೆ ಬಸವಣ್ಣನವರನ್ನು ಭಾರತೀಯರಿಗೆ, ಗಾಂಧೀಜಿಯವರನ್ನು ಕನ್ನಡಿಗರಿಗೆ ಪರಿಚಯಿಸಿದ ಹೆಗ್ಗಳಿಕೆಗೆ ಪಾತ್ರರಾದರು" ಎಂದು ಅವರನ್ನು ಕುರಿತು ಮಲ್ಲಿಕಾರ್ಜುನ ಮೆತ್ರಿ ಅವರು ಹೇಳಿದ್ದಾರೆ. ಆಗ ಹುಬ್ಬಳ್ಳಿಯಲ್ಲಿ ಗಾಂಧೀಜಿಯವರಂತೆ ನಾ.ಸು.ಹರ್ಡೀಕರ ಹಾಗೂ ಮಂಜಪ್ಪ ಹರ್ಡೀಕರ ಅವರ ಪ್ರಭಾವವು ಅವರಿಗೆ ಅರಿವಿಲ್ಲದಂತೆಯೇ ಉಂಟಾಯಿತು.

ನಂತರ ಸಿದ್ದನಾಥನಿಗೆ ಡಾ.ನಾ.ಸು. ಹರ್ಡೀಕರ ಅವರು ಬಳ್ಳಾರಿಗೆ ಹೋಗುವಂತೆ ಸೂಚಿಸಿ ಅಲ್ಲಿ ಕಾರ್ಯಗಳನ್ನು ಮುಂದುವರಿಸುವ ಆದೇಶವನ್ನು ನೀಡುತ್ತಾರೆ. ಅಂತಹ ಪುಣ್ಯಜೀವಿಗಳ ಸಾನಿಧ್ಯವನ್ನು ಬಿಟ್ಟು ಬರುವ ಮನಸ್ಸಾಗದಿದ್ದರೂ ಮುಂದಿನ ಕರ್ತವ್ಯವನ್ನು ಸ್ಮರಿಸಿಕೊಂಡು ಬಳ್ಳಾರಿಗೆ ಮರಳಿದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮೀಟಿಯವರ ಆದೇಶದ ಪ್ರಕಾರ ಬಳ್ಳಾರಿಯಲ್ಲಿ ಹಿಂದೂಸ್ತಾನೀ ಸೇವಾದಳದ ಕ್ಯಾಂಪವೊಂದನ್ನು ಪ್ರಾರಂಭಿಸಿದರು. ಹುಬ್ಬಳ್ಳಿಯಿಂದ ಡಾ|| ನಾ.ಸು. ಹರ್ಡೀಕರ ಅವರು ಪ್ರಾರಂಭಕ್ಕೆ ದಯಾನಂದ, ದೇವೀ ಹೊಸೂರು, ತಡಸದ, ಮಜಲಿ, ಆನವಟ್ಟಿ ಮುಂತಾದ ಸ್ವಯಂ ಸೇವಕರನ್ನು ಬಳ್ಳಾರಿಗೆ ಕಳುಹಿಸಿಕೊಟ್ಟರು. ಅದರಲ್ಲಿಯೇ ಅವರೊಂದಿಗೆ ಸಿದ್ಧನಾಥನು ಅನೇಕ ಕಾರ್ಯಗಳನ್ನು ಮಾಡಿ ಅನುಭವವನ್ನು ಪಡೆದುಕೊಂಡರು.

## ಪಿಕೆಟಿಂಗ ಚಳುವಳಿ

ಬಳ್ಳಾರಿ ಜಿಲ್ಲೆಯಲ್ಲಿ ನಡೆದ 1930 ರ ಸತ್ಯಾಗ್ರಹದಲ್ಲಿ ಮದ್ಯದ ಅಂಗಡಿಗಳ ಮುಂದೆ 'ಪಿಕೆಟಿಂಗ್' ನಡೆಯಿತು. ಆಗ ಅದಕ್ಕೆ ಅತಿ ಹೆಚ್ಚಿನ ಮಹತ್ವ ಬಂದದ್ದಕ್ಕೆ ಮೂರು ಕಾರಣಗಳಿವೆ. ಮೊದಲನೆಯದಾಗಿ, ಇದನ್ನು ಬಳ್ಳಾರಿ ನಗರದಲ್ಲಿ ಏರ್ಪಡಿಸಿರುವುದು, ಎರಡನೆಯದಾಗಿ ಈಚಲಗಿಡ ಕಡಿಯುವದು ಈ ಕಾರಕ್ರಮವನ್ನು ಹರಪನಹಳ್ಳಿ, ಕೊಟ್ಟೂರು, ಹೊಸಪೇಟೆ, ಆದವಾನಿ ತಾಲ್ಲೂಕುಗಳಲ್ಲಿ ಏರ್ಪಡಿಸಿದ್ದು, ಮೂರನೆಯದಾಗಿ, ಪರದೇಶಿ ಬಟ್ಟೆ ಸುಡುವುದು, ಸ್ವದೇಶಿ ಪ್ರಚಾರ ಮಾಡುವುದು ಮುಂತಾದ ಕಾರ್ಯಗಳ ಜೊತೆಗೆ ಪ್ರಭಾತ ಫೇರಿ ಸಭೆ ಸಮ್ಮೇಳನ ಏರ್ಪಡಿಸಿದ್ದು.

ಈ ಪಿಕೆಟಿಂಗ ಜನತೆಯನ್ನು ಕೆರಳಿಸಿ ಉಗ್ರರೂಪ ತಳೆಯುವಂತೆ ಮಾಡಿತು. ಸಿದ್ಧನಾಥನು ತನ್ನ 25 ಜನರ ಗುಂಪಿನೊಂದಿಗೆ, ಸ್ವಯಂಸೇವಕರೊಂದಿಗೆ ಹೆಂಡ, ಸಾರಾಯಿ ಅಂಗಡಿಗಳಿಗೆ ಪಿಕೇಟ್ ಮಾಡುವುದಕ್ಕೆ ತೊಡಗಿದರು. ಈ ಚಳುವಳಿಯಲ್ಲಿ ಬಳ್ಳಾರಿ ಜಿಲ್ಲೆಯ ಒಳ ಹೊರಗಿನ ಜನರು ಭಾಗವಹಿಸಿದ್ದರು. ಆಗ ಅಂಗಡಿಕಾರರು, ನೌಕರರು ಕೂಡಿಕೊಂಡು ವಿರೋಧ ವ್ಯಕ್ತಪಡಿಸಿದ್ದಲ್ಲದೆ ವಿಚಿತ್ರ ರೀತಿಯಿಂದ ಪೀಡಿಸಿದರು. ಅವರೆಲ್ಲರ ಮೈಮೇಲೆ ಹೆಂಡ, ಸಾರಾಯಿ ಸುರಿದಿದ್ದಲ್ಲದೆ, ಬಾಯಿಯಲ್ಲಿಯೂ ಬೇಡಬೇಡವೆಂದರೂ ಒತ್ತಾಯದಿಂದ ಮದ್ದು ಹಾಕಿದರು. ಇಂತಹ ಪೀಡನೆಯಲ್ಲಿ ಬಲಿಯಾದವರಲ್ಲಿ ಸಿದ್ದನಾಥ ಒಬ್ಬರಾಗಿದ್ದಾರೆ. ಇದರಲ್ಲಿ ಭಾಗವಹಿಸಿದವರಿಗೆ 3 ತಿಂಗಳುಗಳಿಂದ ಎಂಬತ್ತು ತಿಂಗಳುಗಳ ಶಿಕ್ಷೆ ವಿಧಿಸಿದರು. ಈ ರೀತಿಯ ದಬ್ಬಾಳಿಕೆಯನ್ನು ಜನರು ಅದರಲ್ಲಿ ವಿಶೇಷವಾಗಿ ವ್ಯಾಪಾರಸ್ಥರು ತಮ್ಮ ವ್ಯವಹಾರವನ್ನು ಬದಿಗೊತ್ತಿ ಹರತಾಳ ಮಾಡಿದರು. ಚಳುವಳಿಗಾರರಿಗೆ ವಿವಿಧ ರೀತಿಯ ಸಹಕಾರವನ್ನು ನೀಡಿದರು. ಮುಂದೆ ಗಾಂಧಿ - ಇರ್ವಿನ್ ಒಪ್ಪಂದದ ಪ್ರಕಾರ ಎಲ್ಲರನ್ನು ಬಿಡುಗಡೆ ಮಾಡಿದರು.

ಅಂದು ಜನರ ಮನಸ್ಸಿನ ಮೇಲೆ ಈ ಆಂದೋಲನವು ಅದ್ಭುತ ಪರಿಣಾಮವನ್ನುಂಟು ಮಾಡಿದೆ. "ಪಿಕೆಟಿಂಗ್ ಮಾಡುವ ಮತ್ತು ಲಕ್ಷಾಂತರ ಜನರು ತಮಗೆ ಬೇಕಾಗುವ ಉಪ್ಪನ್ನು ತಾವೇ ಮಾಡಿಕೊಳ್ಳುವ ಅಧಿಕಾರವು ಜನರಿಗೆ

ಇರಲೇಬೇಕು", ಎಂದು ಗಾಂಧೀಜಿಯವರು ಮುಂಬೈಯ ಸಭೆಯಲ್ಲಿ ಹೇಳಿದ್ದು ಡಾ|| ನಾ.ಸು. ಹರ್ಡೀಕರ ಅವರು ಹೊರಡಿಸುವ ಪತ್ರಿಕೆಯಲ್ಲಿ ಬಂದಿತು.

ಮಹಾತ್ಮಾ ಗಾಂಧೀಜಿಯವರ ದಾಂಡೀಯಾತ್ರೆಯ ಕಾಲಕ್ಕೆ ಟೇಕೂರು ಸುಬ್ರಮಣ್ಯಂ ಅವರು ತಮ್ಮ ವಕೀಲಿವೃತ್ತಿಗೆ ತಿಲಾಂಜಲಿಯನ್ನಿತ್ತರು. ಟಿ.ಬಿ. ಕೇಶವರಾಯರು ತಮ್ಮ ಹರಪನಹಳ್ಳಿಯನ್ನು ಬಿಟ್ಟು ಬಳ್ಳಾರಿ ಜಿಲ್ಲೆಯನ್ನು ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಅವರೊಂದಿಗೆ, ಇನ್ನಿತರ ಹೋರಾಟಗಾರರೊಂದಿಗೆ ಸಿದ್ಧನಾಥನು ಬಳ್ಳಾರಿ ಹೊಸಪೇಟೆ, ಕೂಡ್ಲಿಗಿ, ಹಡಲಗಿ, ಹರಪನಹಳ್ಳಿ, ಆಲೂರು ಆದವಾನಿ ಮುಂತಾದ ತಾಲ್ಲೂಕುಗಳಲ್ಲಿ ಕಾಲುನಡಿಗೆಯಿಂದ ಪ್ರವಾಸ ಮಾಡುತ್ತ ಹಳ್ಳಿಯ ಜನರು ಹೆಚ್ಚು ಹೆಚ್ಚಾಗಿ ಚಳುವಳಿಯಲ್ಲಿ ಭಾಗವಹಿಸುವಂತೆ ಪ್ರಚಾರ ಕೈಗೊಂಡರು. ಅಲ್ಲದೆ ಸ್ವದೇಶಿ ಬಟ್ಟೆ ಧರಿಸಿ ವಿದೇಶಿ ಬಟ್ಟೆಗಳನ್ನು ತೊರೆಯಬೇಕೆಂದು ಸಾರಿದರು.

# ೪. ಸ್ವಯಂಸೇವಕರಲ್ಲಿ ಸಿದ್ದನಾಥ ಬಳ್ಳಾರಿ

ಮಹಾತ್ಮಾ ಗಾಂಧೀಜಿಯವರು ಹೇಳಿದ ಪ್ರಕಾರ - ಬ್ರಿಟಿಷರ ವಿರುದ್ಧ ಸತ್ಯ ಅಹಿಂಸೆಯ ಮಾರ್ಗದಲ್ಲಿ ಜಯವನ್ನು ಪಡೆಯಲು ಯಾವ ಯಾವ ಕಾರ್ಯಚಟುವಟಿಕೆಗಳನ್ನು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅನುಕರಿಸಬೇಕೆಂಬ ಮಾರ್ಗ ಚಳುವಳಿಗಾರರಿಗೆ ಅಖಿಲ ಭಾರತ ತರಬೇತಿ ಕೇಂದ್ರದಿಂದ ಗೋಚಾರವಾಗುತ್ತಿತ್ತು. ಅಲ್ಲದೆ ಎಲ್ಲರೊಟ್ಟಿಗೆ ತರಬೇತಿ ಪಡೆಯುವದರಿಂದ ಕ್ರಾಂತಿಕಾರಿಗಳಿಗೆ ದೃಢವಾದ ಧೈರ್ಯ ಸಂಕಲ್ಪ ಉಂಟಾಗುತ್ತಿತ್ತು. ಅಂತೆಯೇ ಗಾಂಧೀ ತತ್ವವನ್ನು ಅಳವಡಿಸಿಕೊಂಡ ಸೇವಾದಳದ ವತಿಯಿಂದ ಅಖಿಲಭಾರತ ತರಬೇತಿ ಕೇಂದ್ರವನ್ನು ಮೂರು ತಿಂಗಳು ನಾ.ಸು ಹರ್ಡೀಕರ ಅವರು ಬಾಗಲಕೋಟೆಯಲ್ಲಿ ತೆರೆದರು. ಅದರ ನೇತೃತ್ವವನ್ನು ಗುರುರಾವ ಜೋರಾಪುರ ಅವರಿಗೆ ವಹಿಸಿಕೊಟ್ಟರು.

ಭಾರತದ ವಿವಿಧ ಭಾಗಗಳಿಂದ ಸುಮಾರು ೩೦೦ ಜನರು ಬಂದಿದ್ದರು. ಮೂರು ತಿಂಗಳ ತರಬೇತಿಯಾದ ನಂತರ ಅದರ ಮುಕ್ತಾಯದ ಸಮಾರಂಭದಲ್ಲಿ ಅಂದಿನ ಸೇವಾದಳದ ಅಧ್ಯಕ್ಷರಾಗಿ ಪಂಡಿತ ಜವಾಹರಲಾಲ ನೆಹರು ಅವರು ಬಂದಿದ್ದರು. ಅವರ ಭಾಷಣವನ್ನು ವಿದ್ವಾಂಸರಾದ ಮುದವೀಡು ಕೃಷ್ಣರಾವ್ ಅವರು ಒಂದಕ್ಷರ ಹಿಂದು ಮುಂದಾಗದಂತೆ ಕನ್ನಡದಲ್ಲಿ ಭಾಷಾಂತರಿಸಿ, ನೆಹರು ಅವರು ಪ್ರಾರಂಭಿಸಿದಂತೆಯೇ ಪ್ರಾರಂಭಿಸಿ ಅವರು ಮುಗಿಸಿದಂತೆಯೇ ಮುಗಿಸಿದರು. ಇದನ್ನು ನೋಡಿ ಜನರು ಆಶ್ಚರ್ಯಚಕಿತರಾದರು. ಈ ಕಾರ್ಯಕ್ರಮ ಮುಗಿಸಿಕೊಂಡು ನೆಹರು ಅವರು ಬಾಗಲಕೋಟೆಯಿಂದ ಸೀದಾ ಮುಂಬಯಿ ತಲುಪುವಷ್ಟರಲ್ಲಿಯೇ ಅವರನ್ನು ಬಂಧಿಸಿದರು. ಈ ಸುದ್ದಿ ಜ್ವಾಲಾಮುಖಿಯಂತೆ ಎಲ್ಲೆಡೆ ಹರಡಿತು. ೩೦೦ ಜನ ಸ್ವಯಂ ಸೇವಕರೊಂದಿಗೆ ಸಿದ್ದನಾಥನು ಮಲಗಿ. ನಿದ್ರಿಸುತ್ತಿದ್ದನು. ಅಲ್ಲಿಯ ವ್ಯವಸ್ಥಾಪಕರಿಗೆ ಈ ಸುದ್ದಿ ತಿಳಿದೊಡನೆ ಅವರು ಮುನ್ನೆಚ್ಚರಿಕೆಯಿಂದ ಎಲ್ಲ ಸ್ವಯಂಸೇವಕರನ್ನು ಮಧ್ಯರಾತ್ರಿಯಲ್ಲಿ ಎಬ್ಬಿಸಿದರು. ಅವರಿಗೆ ಯಾರು, ಯಾವ ಯಾವ ಕಾರ್ಯ ಮಾಡಬೇಕೆಂಬ ಆದೇಶವನ್ನಿತ್ತು ಕಳುಹಿಸಿದರು. ತಕ್ಷಣ ಅವರು ಈ ನಿರ್ಧಾರ ತೆಗೆದುಕೊಳ್ಳದಿದ್ದರೆ ಸ್ವಲ್ಪ ತಡವಾಗಿದ್ದರೆ ಸಿದ್ದನಾಥನೊಂದಿಗೆ ಎಲ್ಲ ಸ್ವಯಂಸೇವಕರು ಹಾಗು ಸೇವಾದಳದ ಇತರ ಸಿಬ್ಬಂದಿಗಳ ಬಂಧನವಾಗುತ್ತಿತ್ತೆಂಬ ವಿಚಾರ ಆಮೇಲೆ ತಿಳಿದು ಬಂದಿತು.

## ೫. ಬಳ್ಳಾರಿ ಜಿಲ್ಲೆಯ ಮೂರನೆಯ ಸರ್ವಾಧಿಕಾರಿ

ಸಿದ್ಧನಾಥನು 1932 ರಲ್ಲಿ ಬಳ್ಳಾರಿ ಜಿಲ್ಲೆಯ ಮೂರನೆಯ ಸರ್ವಾಧಿಕಾರಿಯೆಂದು ನೇಮಿಸಲ್ಪಟ್ಟನು. ಇದಕ್ಕೂ ಮುಂಚೆ ಅಲ್ಲಿ ಇಬ್ಬರು ಸರ್ವಾಧಿಕಾರಿಗಳೆಂದು ನೇಮಕಗೊಂಡು ಅವರ ತಂಡಗಳೊಡನೆ ತಪ್ಪಿಸಿಕೊಂಡು ಬಿಟ್ಟಿದ್ದರು. 1930 ರಂತೆ ಒಂದೆಡೆ ಕ್ಯಾಂಪ್ ಏರ್ಪಡಿಸಿ ಸತ್ಯಾಗ್ರಹ ಸಂಘಟನೆಯ ಕಾರ್ಯ ನಡೆಸುವಂತಿರಲಿಲ್ಲ. ಎಲ್ಲಿ ಇದ್ದವರು ಅಲ್ಲಿಯೇ ಕಾಯಿದೆ ಭಂಗ ಮಾಡಿ ಬಂಧಿಸಲ್ಪಡಲಾಗುತ್ತಿತ್ತು. ಜಿಲ್ಲೆಯಲ್ಲಿ ಅನೇಕರು ತಮ್ಮ ತಮ್ಮ ಭಾಗದಲ್ಲಿಯೇ ಬಂಧಿಸಲ್ಪಟ್ಟು ಶಿಕ್ಷೆಗೊಳಗಾಗಿದ್ದರು.

ಸಿದ್ದನಾಥನು ಸರ್ವಾಧಿಕಾರಿಯಾದ ಬಳಿಕ, ತಾವು ಮಾಡಬೇಕಾದ ಕಾರ್ಯಯೋಜನೆಗಳನ್ನು ಕುರಿತು ಚರ್ಚಿಸಲು ಸುಬ್ರಮಣ್ಯಂ ಅವರ ಮನೆಗೆ ಹೋಗಿದ್ದನು. ಅದನ್ನು ಪೋಲಿಸರು ಹೇಗೋ ತಿಳಿದುಕೊಂಡು ಅವನನ್ನು ಬಂಧಿಸಲು ಸುಬ್ರಮಣ್ಯಂ ಅವರ ಮನೆಯ ಎದುರು ನಿಂತಿದ್ದರು. ಇದನ್ನು ತಿಳಿದುಕೊಂಡು ಸಿದ್ಧನಾಥನು ಸುಬ್ರಮಣ್ಯಂ ಅವರ ಸಹಕಾರದಿಂದ ಹೇಗೋ ಪಾರಾದನು.

ಕೆಲವು ದಿವಸ ಜಿಲ್ಲೆಯ ಪಶ್ಚಿಮ ತಾಲ್ಲೂಕುಗಳಾದ ಹೊಸಪೇಟೆ, ಹರಪನಹಳ್ಳಿ, ಹಡಗಲಿ, ಕೂಡ್ಲಿಗಿ ತಾಲ್ಲೂಕುಗಳಲ್ಲಿ ಪ್ರಚಾರ ಪ್ರವಾಸ ಕೈಕೊಂಡು. ಹಗರಿಬೊಮ್ಮನಹಳ್ಳಿಗೆ ಬಂದು ತಾಯಿ ತಂದೆಯರಿಗೆ ಬೆಟ್ಟಿಯಾದನು. ಅವನನ್ನು ನೋಡಿ ತಂದೆ ತಾಯಿಗಳು ಬಹಳ ಸಂತೋಷಪಟ್ಟರು. ಸ್ವಾತಂತ್ರ್ಯ ಸಂಗ್ರಾಮದ ಚಳುವಳಿ, ಗಾಂಧೀಜಿಯ ಉಪವಾಸ ಸತ್ಯಾಗ್ರಹ, ಪಿಕೆಟಿಂಗ್ ಚಳುವಳಿ ಮುಂತಾದ ಅನೇಕ ವಿಷಯಗಳನ್ನು ಅವರಿಗೆ ಹೇಳಿದನು. ಅವರಿಗೂ ಗಾಂಧೀಜಿಯ ಬಗೆಗೆ ಅಪಾರ ವಿಶ್ವಾಸ, ಗೌರವಗಳು ಉಂಟಾದವು ತಾಯಿಯು ತನ್ನ ಮಗನಿಗೆ ಇಷ್ಟವಾದ ಹೂರಣಹೋಳಿಗೆಯನ್ನು ಮಾಡಿ ಅದರಲ್ಲಿ ಪ್ರೀತಿಯಿಂದ ಬಹಳ ತುಪ್ಪ ಹಾಕಿ ಊಟಕ್ಕೆ ನೀಡಿದಳು. ಬಹಳ ದಿನಗಳಿಂದ ಮಾತೃವಾತ್ಸಲ್ಯದ ಸಿಹಿಊಟ ಕಾಣದ ಆತನು ಇನ್ನು ತುತ್ತು ಬಾಯಲ್ಲಿ ಇಡುವಷ್ಟರಲ್ಲಿ ಕಟ್, ಕಟ್ ಧ್ವನಿ ಬಂದಿತು. ರೇವಪ್ಪ ಎದ್ದು ಬಾಗಿಲು ತೆಗೆದೊಡನೆಯೇ ಅಧಿಕಾರಿಗಳೊಂದಿಗೆ ಪೋಲಿಸರು ಒಳನುಗ್ಗಿದರು. ಆಗ ತಂದೆತಾಯಿಗಳಿಬ್ಬರು ಗಾಬರಿಯಾದರು. ತಂದೆ ರೇವಪ್ಪ ದಾರಿಗಡ್ಡ ನಿಂತು ಪೋಲಿಸರಿಗೆ ಕೇಳಿಕೊಂಡರೂ ಅವರು ಅವನನ್ನು ತಳ್ಳಿ ಸಿದ್ಧನಾಥನನ್ನು ಎಳೆದುಕೊಂಡು ಹೊರಹೊರಟಾಗ, ತಾಯಿ ಮಗನನ್ನು ಬಿಡಿರೆಂದು ಗೋಳಾಡಿದಳು. ಸಿದ್ಧಪ್ಪನು ಕೈಯಲ್ಲಿ ಹಿಡಿದ ಒಂದು ತುತ್ತನ್ನು ತಿನ್ನದೆ ಹೋದದ್ದು ಆ ತಾಯಿಗೆ ಮರೆಯದ ದುಃಖವನ್ನುಂಟು ಮಾಡಿತು.

ಪೋಲಿಸ್ ಅಧಿಕಾರಿಗಳು ಸಿದ್ಧನಾಥ ಹುಟ್ಟೂರಿಗೆ ಬಂದೇ ಬರುತ್ತಾನೆಂದು ಕಾಯುತ್ತ ಕುಳಿತಿದ್ದರು. ಅವನು ಬಂದನು ಎಂದು ಗೊತ್ತಾದೊಡನೆ ಸಿಕ್ಕಲ್ಲಿ ಹಿಡಿಯುವ ಆಜ್ಞೆಯ ಪ್ರಕಾರ ಊಟಕ್ಕೆ ಕುಳಿತ ಆತನನ್ನು ಹಿಡಿದುಕೊಂಡು ಹೊರಟರು. ಹೊಸಪೇಟೆಯಲ್ಲಿ ವಿಚಾರಣೆಯಾಯಿತು. ರಾಜದ್ರೋಹದ ಭಾಷಣ ಮಾಡಿದ ಆರೋಪಕ್ಕಾಗಿ ಅಸಿಸ್ಟೆಂಟ್ ಕಲೆಕ್ಟರನು ಎಂಟು ತಿಂಗಳ ಸಕ್ಷಮ ಶಿಕ್ಷೆ ಹಾಗೂ 25 ರೂ. ಗಳ ದಂಡ ವಿಧಿಸಿದರು.

## ಜೈಲಿನಲ್ಲಿ ಭಗತಸಿಂಗರ ಸಹಕಾರಿಗಳ ಪರಿಚಯ

ಬಳ್ಳಾರಿ ಸೆಂಟ್ರಲ್ ಜೈಲಿನ್ದಲಿ ಸಿದ್ಧನಾಥ ಹಾಗೂ ಅವನ ಗುಂಪಿನವರನ್ನು ಪ್ರತ್ಯೇಕ ಕೋಣೆಯಲ್ಲಿಡಲಾಗಿತ್ತು. ಭಗತ್‌ಸಿಂಗರ ಸಹಕಾರಿಗಳಾದ ಬಟುಕೇಶ್ವರ ದತ್ತ, ನಯಾ ಪ್ರಸಾದ, ಮಹಾವೀರ ಸಿಂಗ - ಇವರನ್ನು ಉತ್ತರ ಭಾರತದ ಜೈಲಿನಲ್ಲಿಟ್ಟರೆ, ಜನತೆ ರೊಚ್ಚಿಗೆದ್ದು ಕ್ರಾಂತಿಯನ್ನೆಬ್ಬಿಸುವರು ಎಂದು ಬಳ್ಳಾರಿಯ ಸೆಂಟ್ರಲ್ ಜೈಲಿನಲ್ಲಿಟ್ಟದ್ದು. ಆಗ ಅವರ ಪರಿಚಯ ಸಿದ್ಧನಾಥನಿಗಾಯಿತು. ಆ ಪರಿಚಯ ದಿನೇ ದಿನೇ ಹೆಚ್ಚಿ ಆತ್ಮೀಯತೆಗೆಡೆ ಮಾಡಿತು. ಜೀವನವನ್ನು ಪಣವಾಗಿಟ್ಟು ಸ್ವಾತಂತ್ರ್ಯಕ್ಕಾಗಿ ಹೆಣಗಾಡುತ್ತಿರುವ ಅವರ ಜೀವನ ಕಾವ್ಯ ಕುತೂಹಲಕರವಾಗಿತ್ತಷ್ಟೇ ಅಲ್ಲ, ಅದ್ಭುತವಾಗಿತ್ತು. ಆಗಾಗ ಸಮಯ ದೊರೆತಾಗಲೆಲ್ಲ ಅವರು ರೈಲ್ವೆ ಹಳಿ ತೆಗೆಯುವುದು, ಅಂಚೆ ಪತ್ರಗಳನ್ನು ಸುಡುವುದು, ಪೋಲಿಸರಿಗೆ ಚಳ್ಳೆಹಣ್ಣು ತಿನ್ನಿಸುವುದು ಮುಂತಾದ ತಮ್ಮ ಕ್ರಾಂತಿಕಾರಕ ಘಟನೆಗಳನ್ನು ಒಂದೊಂದಾಗಿ ಕತೆ ಕಟ್ಟಿ ಹೇಳಿದಂತೆ ಹೇಳುತ್ತಿದ್ದರು. ಅವರ ಈ ಸಾಹಸಕಥೆ ಕೇಳುತ್ತಿದ್ದರೆ, ಅವರಿಗೆಲ್ಲ ಒಂದು ರೀತಿಯ ರೋಮಾಂಚನಕಾರಿ ಅನುಭವ ಉಂಟಾಗುತ್ತಿತ್ತು.

ಭಗತ್‌ಸಿಂಗನ ಸಹಕಾರಿಗಳು ಜೀವಾವಧಿ ಶಿಕ್ಷೆಗೊಳಗಾದ ಖೈದಿಗಳಾದ್ದರಿಂದ ಸುಧಾರಿಸಿದ ಜೈಲು ಕಾನೂನುಗಳ ಪ್ರಕಾರ ಸಲ್ಲತಕ್ಕ ಅನೇಕ ಸವಲತ್ತುಗಳನ್ನು ಅವರಿಗೆ ಒದಗಿಸಿರಲಿಲ್ಲ. ಆ ಸವಲತ್ತುಗಳನ್ನು ಬೇಡಿ ಅವರು ಅನ್ನಸತ್ಯಾಗ್ರಹ ಮಾಡಿದರು. ಅವರಿಗೆ ಸಹಾನುಭೂತಿ ವ್ಯಕ್ತ ಮಾಡುವ ಸಲುವಾಗಿ ಸಿದ್ದನಾಥ ಹಾಗು ಹಲವು ಜೊತೆಗಾರರು ಸೇರಿ ಅನ್ನಸತ್ಯಾಗ್ರಹ ಪ್ರಾರಂಭಿಸಿದರು. ಇದು ಎಂತಹ ಭಾವನಾತ್ಮಕ ಸಂಬಂಧ, ಇವರು ಎಲ್ಲಿಯವರೋ ಅವರು ಎಲ್ಲಿಯವರೋ ಇದ್ದರೂ, ಪರದಾಸ್ಯದಡಿಗೆ ನರಳುತ್ತಿರುವ 'ಭಾರತಮಾತೆಗೆ ಸ್ವಾತಂತ್ರ್ಯ ತಂದು ಕೊಡುವ ಬೃಹತ್ ಉದ್ದೇಶದಿಂದ ಪರಸ್ಪರ ಅವರು ಒಂದಾಗಿದ್ದರು.

"ಕ್ರಾಂತಿಕಾರರೊಡನೆ ಆಗ ಆದ ಪುಟ್ಟ ಪರಿಚಯ ಸಂಪರ್ಕಗಳಿಂದಲೇ (ತಗಣೆಯನ್ನು ಒರೆಯಲು ಹಿಂಜರಿಯುವ ನನ್ನನ್ನು ಹಗ್ಗವನ್ನು ಹಾವೆಂದು ತಿಳಿದು, ಗುಪ್ತ ಪೋಲಿಸರು, ನಾನು ತುಂಗಭದ್ರ ಹರಿದ್ವಾರ, ಕಲ್ಕತ್ತಗಳಲ್ಲಿ ವೈದ್ಯಕೀಯ ತರಬೇತಿಗಾಗಿ ಇದ್ದ ಪ್ರಸಂಗಗಳಲ್ಲಿ ಬೆನ್ನುಬಿಡದೆ ಕಾಡಿದರು. (ಅದು ಅವರ ಭತ್ಯಗಳನ್ನು ಭರಿಸುವ ಸಲುವಾಗಿಯೂ ಇರಬಹುದು)" ಎಂದು ಸಿದ್ದನಾಥ ಅವರೇ ಕ್ರಾಂತಿಕಾರರ ಪರಿಚಯದಿಂದುಂಟಾದ ತಮ್ಮ ಅನುಭವವನ್ನು ಹೇಳಿಕೊಂಡಿದ್ದಾರೆ.

# ೬. ದೀನಸೇವಾಶ್ರಮ

1932 ರಲ್ಲಿ ಸಿದ್ಧನಾಥನು ಮದ್ರಾಸಜೈಲಿನಿಂದ ಬಿಡುಗಡೆಯಾದನು. ಮಹಾತ್ಮಾ ಗಾಂಧಿ ಮತ್ತು ಕರ್ನಾಟಕ ಗಾಂಧಿ - ಇವರಿಬ್ಬರ ಪ್ರಭಾವಕ್ಕೊಳಗಾದ ಸಿದ್ಧನಾಥನಿಗೆ ಕೊಟ್ಟೂರನ್ನು ತನ್ನ ಕಾರ್ಯಕ್ಷೇತ್ರದ ಕೇಂದ್ರವನ್ನಾಗಿ ಮಾಡಿಕೊಂಡು "ದೀನಸೇವಾಶ್ರಮ" ಎಂಬ ಸಂಸ್ಥೆಯನ್ನು ತೆರೆಯಬೇಕೆಂದು ಅವರ ಮನಸ್ಸಿನಲ್ಲಿ ಬಂದಿತು. ಅದಕ್ಕೆ ಕೊಟೂರಿನವರೇ ಆದ ಬಣಗಾರ ಗೌಡಪ, ಗೋರ್ಲಿ ಶರಣಪ್ಪ, ಬಿ.ಎಂ. ಅಚ್ಚಯ್ಯ ಮುಂತಾದ ಕಾರ್ಯಕರ್ತರ ಸಹಕಾರ, ಪ್ರೋತ್ಸಾಹ ದೊರೆತದ್ದರಿಂದ ಅದನ್ನು ಕಟ್ಟುವಲ್ಲಿ ಯಶಸ್ವಿಯಾದರು. ಅವರ ಆ ಸ್ವಪ್ಪ ಸಾಕಾರಗೊಂಡಿತು.

ಸಿದ್ಧನಾಥನು ಹರಿಜನೋದ್ಧಾರವನ್ನು ಕೂಡ ಮುಖ್ಯ ಗುರಿಯಾಗಿರಿಸಿಕೊಂಡು, ಹರಿಜನಕೇರಿಯಲ್ಲಿಯೇ ಹರಿಜನ ಮಕ್ಕಳ ಶಿಕ್ಷಣಕ್ಕಾಗಿ ಕುಟೀರವನ್ನು ಕೊಂಡು "ದೀನಸೇವಾಶ್ರಮ" ವೆಂದು ಅದಕ್ಕೆ ಹೆಸರಿಟ್ಟು ಅಲ್ಲಿಯೇ ಕಾರ್ಯಕರ್ತರೊಡನೆ ಇರಹತ್ತಿದನು. ಹರಿಜನ ಮಕ್ಕಳ ಶಿಕ್ಷಣಕ್ಕೆಂದು ಮೂರು ಸರತಿಯ ಮೇಲೆ ದುಡಿಯುತಿದ್ದರು. ಆ ಸಂಸ್ಥೆಯ ಮೂಲಕ ದೀನದಲಿತರ ಸೇವೆ, ಅಸ್ಪೃಶ್ಯತಾ ನಿವಾರಣೆಯ ಕಾರ್ಯ, ಸಾಕ್ಷರತಾ ಪ್ರಚಾರ, ಗ್ರಾಮೀಣ ಭಾಗಗಳಲ್ಲಿ ರಾಷ್ಟ್ರೀಯ ಗ್ರಾಮೋದ್ಯೋಗ ಮುಂತಾದ ಕಾವ್ಯಗಳನ್ನು ಪಾದಯಾತ್ರೆಯ ಮೂಲಕ ಪ್ರಚಾರ ಮಾಡಲಾರಂಭಿಸಿದರು - ಹೀಗೆ ಇಡೀ ಜಿಲ್ಲೆಯ ಸಂಪರ್ಕವನ್ನು ಬೆಳೆಸುತ್ತ ರಾಷ್ಟ್ರೀಯ ಕಾರ್ಯ ಮುಂದುವರೆಸಿದ ಸಂಸ್ಥೆ ಇದಾಯಿತು ಎಂದರೆ ತಪ್ಪಾಗಲಾರದು.

ಒಮ್ಮೆ ಆಶ್ರಮದ ಚಟುವಟಿಕೆಗಳನ್ನು ನೋಡಲೆಂದೇ ಅಖಿಲಭಾರತ ಹರಿಜನ ಸೇವಾ ಸಂಘದ ಪ್ರಮುಖರಾದ ಅಮೃತಲಾಲ ಠಕ್ಕರ ಅವರು ಕೊಟ್ಟೂರಿಗೆ ಬೆಟ್ಟಿ ಕೊಟ್ಟು ಅಲ್ಲಿ ಎರಡು ದಿನ ವಾಸ್ತವ್ಯ ಮಾಡಿದರು.

ದಿನದಿಂದ ದಿನಕ್ಕೆ ಕುಟೀರವು ಒಳ್ಳೆಯ ಹೆಸರು ಪಡೆದಿತ್ತು. ಹರಿಜನ ಕೇರಿಯಲ್ಲಿ ಅದನ್ನು ಮತ್ತು ಅಲ್ಲಿಯ ಶಿಕ್ಷಣವನ್ನು ಪ್ರತ್ಯಕ್ಷದರ್ಶಿಗಳಾಗಿ ನೋಡಿದರು. ಅದಕ್ಕೆ ಹತ್ತಿಕೊಂಡೇ ಇದ್ದ ವಿದ್ಯಾರ್ಥಿನಿಲಯಕ್ಕೂ ಬೆಟ್ಟಿ ಕೊಟ್ಟರು.

ಆಗ ಆ ನಿಲಯದಲ್ಲಿ ಯಾವುದೇ ಜಾತಿಭೇದಗಳಿಲ್ಲದೆ ಬ್ರಾಹ್ಮಣರಿಂದ ಹಿಡಿದು ಮುಸಲ್ಮಾನ, ಹರಿಜನ, ಲಿಂಗಾಯತ, ಲಂಬಾಣಿ - ಹೀಗೆ ವಿವಿಧ ಜಾತಿಯ ವಿದ್ಯಾರ್ಥಿಗಳು ಒಂದೇ ಪಂಕ್ತಿಯಲ್ಲಿ ಊಟ ಮಾಡುತ್ತಿರುವುದನ್ನು ಪ್ರತ್ಯಕ್ಷ ಕಂಡು ಸಂತೋಷಪಟ್ಟುಕೊಂಡರು. ಅಲ್ಲಿಂದ ಹೋದ ಮೇಲೆ ಠಕ್ಕರ ಅವರು ಹರಿಜನಸೇವಕ ಸಂಘದ ವತಿಯಿಂದ ಪ್ರತಿವರ್ಷ ನಿಲಯಕ್ಕೆ ಹಣದ ಸಹಾಯ ಮಾಡುತ್ತಿದ್ದರು. ಇಂದು ಆ ನಿಲಯವು ಸ್ವತಂತ್ರ ಕಟ್ಟಡವಾಗಿ ನಿಂತಿದೆ. ಅಷ್ಟೇ ಅಲ್ಲ, ಯಾವ ಉದ್ದೇಶದಿಂದ ಆ ವಿದ್ಯಾರ್ಥಿ ನಿಲಯವು ನಿರ್ಮಾಣವಾಗಿತ್ತೋ ಅದರಲ್ಲಿ ಯಾವ ಬದಲಾವಣೆಯಾಗದೆ ಇಮ್ಮಡಿ ಮುಮ್ಮಡಿ ಪ್ರಗತಿ ಸಾಧಿಸಿದೆ.

## ೭. ಹರಿಜನಕೇರಿಯಲ್ಲಿ ಬಳ್ಳಾರಿ ಸಿದ್ದನಾಥನ ವಿವಾಹ ಪ್ರಸಂಗ

ಸಿದ್ದನಾಥನು ಚಳುವಳಿಯ ಪ್ರಚಾರಕಾರ್ಯ ಮಾಡುತ್ತ ಅನೇಕ ಕಡೆಗಳಲ್ಲಿ ಸಂಚರಿಸುತ್ತಿದ್ದನು. ಆಗ ಸುಶೀಲಾ ಎಂಬ ಚಳುವಳಿಗಾರ್ತಿಯ ಪರಿಚಯವಾಯಿತು. ಅವಳು ಹೆಸರಿಗೆ ತಕ್ಕಂತೆ ಸುಶೀಲಳೂ, ಸುಂದರಳೂ ಆಗಿದ್ದಳು. ಅವರಿಬ್ಬರ ವಿಚಾರಗಳು ಒಂದೇಯಾಗಿದ್ದರಿಂದ ಅಲ್ಲಲ್ಲಿ ಬೆಟ್ಟಿಯಾದಾಗ ಮಾತುಕತೆಗಳು ನಡೆಯುತ್ತಿದ್ದವು. ಸ್ವಾತಂತ್ರ್ಯ ಸಂಗ್ರಾಮದ ಹೋರಾಟ, ಗಾಂಧೀಜಿ ಸತ್ಯಾಗ್ರಹ, ಮದ್ರಾಸ ಆಡಳಿತಕ್ಕೆ ಒಳಪಟ್ಟ ಬಳ್ಳಾರಿ ಕನ್ನಡಿಗರ ಸ್ಥಿತಿಗತಿ, ತೆಲುಗು ಜನರ ಬೇಡಿಕೆ ಮುಂತಾದ ಅನೇಕ ವಿಷಯಗಳನ್ನು ಕುರಿತು ಚರ್ಚಿಸುತ್ತಿದ್ದರು. ಇದರಿಂದ ಅವರು ಪರಸ್ಪರ ಹತ್ತಿರಕ್ಕೆ ಬಂದರು. ತಾವಿಬ್ಬರೂ ಲಗ್ನವಾಗಿ ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸಿ ತಮ್ಮ ಧ್ಯೇಯೋದ್ದೇಶಗಳನ್ನು ಸಾಧಿಸಬೇಕೆಂದುಕೊಂಡರು. ಸಿದ್ದನಾಥನು ಹರಿಜನಕೇರಿಯಲ್ಲಿಯೇ ಅವಳನ್ನು ಲಗ್ನವಾಗಬೇಕೆಂದು ನಿರ್ಧರಿಸಿದನು. ಎಲ್ಲ ಕಾರಕರ್ತರು ಇದಕ್ಕೆ ಒಪ್ಪಿಗೆ ಕೊಟ್ಟರು.

ಈ ವಿಷಯದಲ್ಲಿ ಸಿದ್ಧನಾಥನು ತಂದೆ ತಾಯಿಗಳಿಗೆ ತಿಳಿಸಿ ಒಪ್ಪಿಗೆ ಪಡೆಯಲು ಹಗರಿಬೊಮ್ಮನಹಳ್ಳಿಗೆ ಹೋದರು. ಅವರೇನೋ ಸುಶೀಲಳನ್ನು ಮದುವೆಯಾಗಲು ಒಪ್ಪಿಗೆಯನ್ನಿತ್ತರು. ಆದರೆ ಸಿದ್ಧನಾಥನು ಮದುವೆಯಾಗುವದು ಹರಿಜನಕೇರಿಯಲ್ಲೆಂದಾಗ ರೇವಪ್ಪನಿಗೆ ಹುಡುಗಿ ಸ್ವಜಾತಿಯದಿದ್ದರೂ ಅದನ್ನು ಸಹಿಸಿಕೊಳ್ಳಲಾಗದಷ್ಟು ಸಿಟ್ಟು ಬಂದಿತು. ಆದರೆ ಮಗನ ಮನಸ್ಸನ್ನು ಅರ್ಥ ಮಾಡಿಕೊಂಡ ಸಹನಶೀಲಳಾದ ರೇವಮ್ಮ "12ನೆಯ ಶತಮಾನದಲ್ಲಿ ಬಸವಣ್ಣನವರು ಅನುಭವಮಂಟಪ ಸ್ಥಾಪಿಸಿ ಅಂತರ್‌ಜಾತಿಯ ವಿವಾಹ ಮಾಡಿಸಿದ್ದು ನೀವು ಕೇಳಿದ್ದಿರಲ್ಲ, ಇದೇನು ಶರಣತತ್ವಕ್ಕೆ ವಿರೋಧವಾದುದೇ? ಇಲ್ಲಿ ನಮಗೆ ಮಗನ ಮದುವೆಗೆ ಅಡ್ಡಿಯಾದದ್ದು ಹರಿಜನಕೇರಿ ಮಾತ್ರವಲ್ಲವೆ?" ಎಂದು ಗಂಡನಿಗೆ ಪ್ರಶ್ನಿಸಿದಳು. ಆಗ ಆತನ ಸಿಟ್ಟು ಶಾಂತವಾದರೂ ಸಮಾಜವನ್ನು ಎದುರು ಹಾಕಿಕೊಂಡು ಬದುಕುವುದಕ್ಕಿಂತ ಲಗ್ನಕ್ಕೆ ಹೋಗದಿರುವುದೇ ಲೇಸೆಂದುಕೊಂಡನು ಅದನ್ನು ಅರಿತು ಮಗನ ಮದುವೆಗೆ ಹೋಗುವದಾಗುವದಿಲ್ಲವೆಂದು ತಿಳಿದು ದುಃಖವಾಯಿತಾದರೂ, ಆ ಸಾಧ್ವಿಯು ಸೊಸೆಗೆಂದೇ ತೆಗೆದಿರಿಸಿದ ಬಂಗಾರದ ಕಿವಿಯೋಲೆಗಳನ್ನು, ಸರವನ್ನು ಸಿದ್ಧನಾಥನ ಕೈಯಲ್ಲಿತ್ತು ಆಶೀರ್ವದಿಸಿದಳು. ತೆಗ್ಗಿನಮಠದ ಪರಮಪೂಜ್ಯ ಶ್ರೀ ಚಂದ್ರಶೇಖರ ಸ್ವಾಮಿಗಳು ಮೌನ ಸಮ್ಮತಿಯನ್ನಿತ್ತರು.

ಕೊಟ್ಟೂರಿನಲ್ಲಿರುವ ಹರಿಜನಕೇರಿಯಲ್ಲಿ 'ದೀನಸೇವಾಶ್ರಮ'ದ ಕುಟೀರದಲ್ಲಿ ಯಾವುದು ಹಳೆಯ ಸಂಪ್ರದಾಯಗಳಿಲ್ಲದೆ ಸರಳ ರೀತಿಯಲ್ಲಿ ತಿರಂಗಿ ಧ್ವಜ ಹಾರಿಸುವದರೊಡನೆ ಅವರ ಅಪೂರ್ವಲಗ್ನ ನಡೆದುಹೋಯಿತು. ಅಂದಿನ ಈ ಕಾರ್ಯಕ್ರಮಕ್ಕೆ ಜಿಲ್ಲೆಯ ಕಾಂಗ್ರೆಸ್ ಮುಂದಾಳುಗಳಾದ ಟೇಕೂರು ಸುಬ್ರಮಣ್ಯಂ, ಟಿ.ಬಿ. ಕೇಶವರಾವ್ ಹಾಗು ಇನ್ನಿತರ ಕಾರ್ಯಕರ್ತರು ಹಾಜರಿದ್ದರು. ಇದನ್ನು ಕುರಿತು ಮಹಾತ್ಮಾಗಾಂಧಿ ತಮ್ಮ 'ಯಂಗ್ ಇಂಡಿಯಾ' ದಲ್ಲಿ ಪ್ರಶಂಸಾಪರ ಎರಡು ವಾಕ್ಯಗಳನ್ನು ಬರೆದು ಪ್ರಕಟಿಸಿದ್ದರು.

ಶರಣ, ಸಂತರ ತತ್ತ್ವ, ಗಾಂಧಿ ತತ್ತ್ವ ಎರಡನ್ನು ಮೈಗೂಡಿಸಿಕೊಂಡು ಡಾ|| ನಾ.ಸು. ಹರ್ಡೀಕರ ಅವರ ಗರಡಿಯಲ್ಲಿ ತಯಾರಾದ ಹಗರಿಬೊಮ್ಮನಹಳ್ಳಿಯ ಈ ಸಿದ್ದಪ್ಪನ ಕಾರ್ಯ ಸ್ತುತ್ಯವಾದುದು. ಅವರೇ ಒಂದು ಕಡೆ ಹೀಗೆ ಹೇಳಿದ್ದಾರೆ "ಅಂದಿನ ಸಮಾಜಕ್ಕೆ ಮಾತ್ರ ಅದು ಹಿಡಿಸಲಾರದ ಗುಕ್ಕು, ನಮ್ಮ ತಂದೆತಾಯಿಗಳಿಬ್ಬರೂ ಆ ಸಮಾರಂಭಕ್ಕೆ ಉಪಸ್ಥಿತರಿಲ್ಲದಿದ್ದುದೂ ಅದರ ಸಂಕೇತ. ಕನ್ಯೆ ಸ್ವಜಾತಿಯದಿದ್ದರೂ ಸ್ಥಳ ಮಾದಿಗರಕೇರಿ"

ಸಿದ್ಧನಾಥನ ಮನದಿಚ್ಛೆಯ ಪ್ರಕಾರ ಲಗ್ನ ಮುಗಿದರೂ ಹೂಡಿದ ಚಳುವಳಿ ಕಾರ್ಯ ಮುಗಿದಿರಲಿಲ್ಲ. ಅಂತೆಯೇ ಸಿದ್ಧನಾಥನು, ಮುಂದಿನ ಕಾರ್ಯಗಳ ತರಬೇತಿಗೆಂದು ತಮ್ಮ ಪತ್ನಿ ಸುಶೀಲಳನ್ನು ವರ್ಧಾದಲ್ಲಿ ಜಮನಲಾಲ್ ಬಜಾಜರು ನಡೆಸುತ್ತಿದ್ದ ಮಹಿಳಾಶ್ರಮಕ್ಕೆ ಕಾರ್ಯಕರ್ತ ಬಿ.ಎಂ.ಅಚ್ಚಯ್ಯನವರ ತಂಗಿ ರುದ್ರಮ್ಮಳನ್ನು ಜೊತೆ ಮಾಡಿ ಕಳುಹಿಸಿಕೊಟ್ಟರು.

# ೮. ಹರಿಜನಕೇರಿಯಲ್ಲಿ ವಿಧವಾ ವಿವಾಹ

ದೇಶಕ್ಕಾಗಿ, ದೇಶದ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿಯವರು ಹೂಡಿದ ಸತ್ಯಾಗ್ರಹ ಚಳುವಳಿಯಲ್ಲಿ ಮಹಿಳೆಯರು ಮಾಡಬೇಕಾದ ಕಾರ್ಯಗಳ ಬಗೆಗೆ ತರಬೇತಿಯನ್ನು ಮಹಿಳಾಶ್ರಮದಲ್ಲಿ ಕೊಡುತ್ತಿದ್ದರು. ಸಿದ್ದನಾಥನ ಪತ್ನಿ ಸುಶೀಲಾಬಾಯಿ, ರುದ್ರಮ್ಮ - ಇಬ್ಬರೂ 2 ವರ್ಷಗಳ ವರೆಗೆ ಆ ತರಬೇತಿಯನ್ನು ಪಡೆದು ಬಂದರು.

'ದೀನ ಸೇವಾಶ್ರಮದ ಕಾರ್ಯಕರ್ತರಾದ ಶ್ರೀ.ಬಿ.ಎಂ. ಅಚ್ಚಯ್ಯನವರು ತಂಗಿ ರುದ್ರಮ್ಮಳನ್ನು ಚಿಕ್ಕಂದಿನಲ್ಲಿಯೇ ಮದುವೆ ಮಾಡಿಕೊಟ್ಟಿದ್ದರು. ಆತನು ಸ್ವಲ್ಪ ದಿನಗಳಲ್ಲಿಯೇ ತೀರಿಕೊಂಡಿದ್ದನು. ವಿಧವೆಯ ಪಟ್ಟವನ್ನು ಕಟ್ಟಿಕೊಂಡ ಸಂಪ್ರದಾಯನಿಷ್ಠ ಸಮಾಜದಲ್ಲಿ ರುದ್ರಮ್ಮ ಅಣ್ಣನಿಂದ ಗಾಂಧೀಜಿ ಸತ್ಯಾಗ್ರಹದ ಪ್ರಭಾವಕ್ಕೊಳಗಾಗಿ ಚಳುವಳಿಯಲ್ಲಿ ಭಾಗವಹಿಸಿ ಶರಣ ತತ್ವಗಳನ್ನು ಅಳವಡಿಸಿಕೊಂಡು ಬಾಳುತ್ತಿದ್ದಳು. ವರ್ಧಾ ಮಹಿಳಾಶ್ರಮದಲ್ಲಿ ತರಬೇತಿ ಪಡೆದು ಬಂದ ಮೇಲೆ, ಚಳುವಳಿಯ ಬಗೆಗೆ ಸುತ್ತಮುತ್ತ ಹಳ್ಳಿಯ ಜನರಿಗೆ ಜಾಗೃತಿಯನ್ನುಂಟು ಮಾಡುತ್ತಿದ್ದಳು.

ಇಂತಹ ಅವಳ ಸೇವಾಮನೋಭಾವವನ್ನು ಕಂಡು ಕೊಟ್ಟೂರಿನ ಪ್ರಮುಖ ಕಾರ್ಯಕರ್ತರು, ಭಾರತ ವ್ಯಾಯಾಮ ಶಾಲೆಯ ಸಂಸ್ಥಾಪಕ ಸಂಚಾಲಕರೂ ಆದ ಗೋರ್ಲಿ ಶರಣಪ್ಪನವರಿಗೆ ಅವಳನ್ನು ವಿವಾಹವಾಗುವ ಮನಸ್ಸು ಉಂಟಾಯಿತು. ಅವರು ಒಬ್ಬ ಚಳುವಳಿಗಾರರಾಗಿ ಕಾರ್ಯಗೈಯುತ್ತ ಮದುವೆಯನ್ನು ಮಾಡಿಕೊಂಡಿರಲಿಲ್ಲ. ಅವರು ತಮ್ಮ ಮನಸಿನ ಇಚ್ಛೆಯನ್ನು ಮೊದಲು ಸಿದ್ದನಾಥನ ಮುಂದೆ ಹೇಳಲು, ಅವರು ಬಹಳ ಸಂತೋಷಪಟ್ಟರು. ಅಷ್ಟೇ ಅಲ್ಲ, ತಂಗಿ ರುದ್ರಮ್ಮಳ ಬಾಳನ್ನು ಪುನಃ ಬೆಳಗುವಂತೆ ಮಾಡಲು ಬಂದ ಗೋರ್ಲಿ ಶರಣಪ್ಪನವರೊಂದಿಗೆ ವಿವಾಹ ಮಾಡುವಂತೆ ಶ್ರೀ ಬಿ.ಎಂ. ಅಚ್ಚಯ್ಯನವರನ್ನು ಒಪ್ಪಿಸಿದರು. ಅವರು ಪ್ರತಿ ಮಾತನಾಡದೆ ಒಪ್ಪಿದರು. ಅಂದು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು, ತಮ್ಮ ಉದ್ದೇಶ ಸಾಧನೆಗಾಗಿ ಹಲವು ಸಂಘಸಂಸ್ಥೆಗಳನ್ನು ಸ್ಥಾಪಿಸಿ ಧಾರವಾಡ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿದ್ದ ಹಳ್ಳಿಕೇರಿ ಗುದ್ದೆಪ್ಪ ಮತ್ತು ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ ಮೈಲಾರ ಮಹಾದೇವಪ್ಪನಿಗೆ ಎಲೆ ಮರೆಯ ಕಾಯಿಯಂತೆ ಸಹಾಯ ಸಹಕಾರ ನೀಡಿದ ಆತನ ಧರ್ಮಪತ್ನಿ ಸಿದ್ಧಿಮತಿ - ಇವರ ನೇತೃತ್ವದಲ್ಲಿ ಹೊಸರಿತ್ತಿಯ ಆಶ್ರಮದಲ್ಲಿ ರುದ್ರಮ್ಮ, ಗೋರ್ಲಿ ಶರಣಪ್ಪನೊಂದಿಗೆ ಪುನರ್ವಿವಾಹವಾದರು. "ವಿಧವೆಯ ಈ ಪುನರ್ವಿವಾಹಕ್ಕೆ ಅವರ ತಂದೆತಾಯಿಗಳಾಗಲೀ, ಬಂಧುಬಳಗವಾಗಲೀ ಉಪಸ್ಥಿತರಿಲ್ಲವೆಂದ ಮೇಲೆ ಅಂದಿನ ಸಮಾಜದ ದೃಷ್ಟಿಯಲ್ಲಿ ಎಷ್ಟು ಆಕ್ಷೇಪಾರ್ಹವಿತ್ತೆಂಬುದನ್ನು ಊಹಿಸಬಹುದಾಗಿದೆ" ಎಂದು ಸಿದ್ಧನಾಥ ಅವರೇ ಒಂದೆಡೆ ಹೇಳಿದ್ದಾರೆ ಮಹಿಳೆಯರ ಬಗೆಗೆ ಅನುಕಂಪ ಬೀರಿ ಸಮಾನತೆಯ ತೋರಿದ ಶರಣದ ನಡೆ-ನುಡಿಗಳನ್ನೇ ಆದರ್ಶವಾಗಿರಿಸಿಕೊಂಡ ಶ್ರೀ ಮಂಜಪ್ಪ ಹರ್ಡೀಕರ ಅವರ ಮಾರ್ಗದರ್ಶನದಲ್ಲಿ ಮುನ್ನಡೆದ ಸಿದ್ದನಾಥರು ಹರಿಜನೋದ್ಧಾರದಂತೆ ಸ್ತ್ರೀಯ ಉದ್ಧಾರವಾಗಬೇಕೆಂದು ಬಯಸಿದರು.

## ೯. ಅಪೂರ್ವ ಪುಣ್ಯಕ್ಷಣ

ಕೆಲವೇ ವರ್ಷಗಳಲ್ಲಿ ದೀನಸೇವಾಶ್ರಮವು ಹಲವಾರು ರೀತಿಯ ಕಾರ್ಯಗೈದು ಇಡೀ ಬಳ್ಳಾರಿ ಜಿಲ್ಲೆಯಲ್ಲಿ ಒಳ್ಳೆಯ ಹೆಸರು ಪಡೆಯುವುದಕ್ಕೆ ಕಾರಣ ಸಿದ್ಧನಾಥನ ಸೇವಾರ್ಥ ಮನೋಧರ್ಮ, ತ್ಯಾಗಜೀವನ ಹರಿಜನ ಸೇವಾಕಾರ್ಯದ ಪ್ರತೀಕವಾದ ದೀನಸೇವಾಶ್ರಮದ ಚಟುವಟಿಕೆಗಳನ್ನು ಅಧಿಕ ಪ್ರಮಾಣದಲ್ಲಿ ಮುಂದುವರಿಸಲು ಅವರು ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದರು. ಕೊಟ್ಟೂರ ಹತ್ತಿರದ ಕೋಗಳಿ ಗ್ರಾಮದ ತೋಟನಗೌಡರೆಂಬುವರು ಸಿದ್ಧನಾಥನ ಬಗೆಗೆ ಗೌರವಾದರಗಳನ್ನು ಇರಿಸಿಕೊಂಡವರು. ಅವನ ಕಾರ್ಯಗಳನ್ನು ಮೆಚ್ಚಿಕೊಂಡವರು. ಅವರು ಕೊಟ್ಟೂರಿನಲ್ಲಿರುವ ತಮ್ಮ ಎಂಟು ಎಕರೆ ತೋಟವನ್ನೇ ದಾನವಾಗಿ ಕೊಟ್ಟರು. ದೀನ ಸೇವಾಶ್ರಮದ ಕಾರ್ಯಗಳು ನಿರಂತರವಾಗಿ ಸಾಗಿ ಬರಲೆಂದು ಹರಿಸಿದರು. ತಕ್ಷಣ ಸಿದ್ದನಾಥರು ಅದನ್ನು ತಮ್ಮ ಸ್ವಾಧೀನ ಮಾಡಿಕೊಳ್ಳದೆ 'ದೀನಸೇವಾಶ್ರಮ'ದ ಟ್ರಸ್ಟಿನ ಹೆಸರಿಗೆ ಮಾಡಿಸಲು ಮುಂದಾದರು.

ಮಹಾತ್ಮಾ ಗಾಂಧಿಯವರು ಹರಿಜನ ಕಾರ್ಯದ ಸಲುವಾಗಿ ಇಡೀ ಭಾರತದ ಪ್ರವಾಸ ಕೈಗೊಂಡ ದಿನಗಳವು, ಕರ್ನಾಟಕದ ಅವರ ಪ್ರಯಾಣದಲ್ಲಿ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ - ಕೊಟ್ಟೂರು - ಸೊಂಡೂರು - ಕುಡುತಿನಿ - ಬಳ್ಳಾರಿಗಳು ಒಳಗೊಂಡಿದ್ದವು.

ತಮ್ಮನಗೌಡರ ಆ ತೋಟದಲ್ಲಿಯೇ 'ದೀನಸೇವಾಶ್ರಮ' ದ ಅಡಿಗಲ್ಲು ಸಮಾರಂಭ ಮಹಾತ್ಮರ ಪರಮ ಹಸ್ತದಿಂದ ನೆರವೇರಬೇಕೆಂದು ಸಭೆಯಲ್ಲಿ ಒಮ್ಮನದಿಂದ ಕಾರ್ಯಕರ್ತರೊಂದಿಗೆ ಸಿದ್ಧನಾಥರು ನಿರ್ಣಯ ತೆಗೆದುಕೊಂಡಿದ್ದರು. ಆದರೆ ತೋಟದ ದಾನಪತ್ರವಾಗುವದು ತಡವಾದದ್ದರಿಂದ ಗಾಂಧೀಜಿಯವರ ಪ್ರವಾಸ ಕಾರ್ಯಕ್ರಮದ ಪಟ್ಟಿಯಲ್ಲಿ ಇದನ್ನು ಸೇರಿಸುವದಾಗಲಿಲ್ಲ. ಸಿದ್ದನಾಥರಿಗೆ ಹೇಗಾದರೂ ಮಾಡಿ ಅವರ ಕೈಯಿಂದಲೇ ಅಡಿಗಲ್ಲು ಸಮಾರಂಭ ನೆರವೇರಿಸಬೇಕೆಂಬ ಇಚ್ಛೆ ಮತ್ರ ಪ್ರಬಲವಾಗಿತ್ತು.

ರಾಷ್ಟ್ರಪಿತ ಗಾಂಧೀಜಿಯವರು ಕೊಟ್ಟೂರಿಗೆ ಮಧ್ಯಾಹ್ನ ಮೂರುವರೆ ಗಂಟೆಗೆ ಬಂದು ಮುಟ್ಟಿದರು. ಅಲ್ಲಿಯ ವಿಶಾಲವಾದ ತೇರು ಬಜಾರಿನಲ್ಲಿ ಎತ್ತರವಾಗಿ ಹಾಕಿದ್ದ ಮಂಟಪದಲ್ಲಿ ಕುಳಿತಿದ್ದರು. ಬಳ್ಳಾರಿಯ ಬಿಸಿಲಿನ ತಾಪದಿಂದ, ಸತತ ಪ್ರಯಾಣದಿಂದ ಅವರ ಮುಖದ ಮೇಲೆ ಆಯಾಸ ಎದ್ದು ಕಾಣುತ್ತಿತ್ತು. ಅಲ್ಲದೆ ಹಿಂದಿನ ದಿನದಂದೂ ಕಿಕ್ಕಿರಿದ ಜನಸಮೂಹದ ಕಾರ್ಯಕ್ರಮದಿಂದ ತೊಂದರೆಯೂ ಆಗಿತ್ತೆಂದು ತಿಳಿದು ಬಂದಿತ್ತು.

ಇದರಿಂದ ಅವರ ಮುಂದೆ ಹೋಗುವ ಧೈರ್ಯವನ್ನು ಯಾರು ಮಾಡದೆ ಹಿಂಜರಿದರು. ಆಗ ಸಿದ್ದನಾಥರು ನಿರಾಶರಾಗದೆ, ಕಾಲವನ್ನು ವ್ಯರ್ಥ ಮಾಡದೆ, ಧೈರ್ಯ ಮಾಡಿ ಎತ್ತರದ ಸಭಾಮಂಟಪವನ್ನೇರಿ, ಗಾಂಧೀಜಿಯವರಿಗೆ ಮೊದಲು ಪಾದ ಮುಟ್ಟಿ ಪ್ರಣಮಿಸಿದರು. ನಂತರ ದೀನ ಸೇವಾಶ್ರಮದ ವರದಿ ಒಪಿಗೆ, ಅದರ ಹೆಸರಿನಲ್ಲಿರುವ ರಿಜಿಸ್ಟರ್ ಆದ ಎಂಟು ಎಕರೆ ತೋಟದ ದಾನಪತ್ರವನ್ನು ತೋರಿಸಿ, ವಿಷಯವನ್ನು ವಿವರಿಸಿ, ಅಲ್ಲಿಯೇ ಅಡಿಗಲ್ಲನ್ನು

ಹಾಕಲು ವಿನಂತಿಸಿಕೊಂಡರು. ಗಾಂಧೀಜಿಯವರು ಅದಕ್ಕೆ ಮರುಮಾತನಾಡದೆ ನಸುನಗುತ್ತ "ಅಚ್ಚಾ, ಅಚ್ಚಾ' ಎಂದು ಒಪ್ಪಿಕೊಂಡರು.

ಸಿದ್ದನಾಥರ ಮಿತ್ರರಾದ ಬನ್ನಿಕಲ್ಲಿನ ಸಾಹುಕಾರ ಈಶ್ವರಪ್ಪನವರು ಗಾಂಧೀಜಿಯವರ ಮೇಲೆ ತುಂಬ ಪ್ರೇಮಾದರವನ್ನಿಟ್ಟಿದ್ದರು. ಅದಕ್ಕಾಗಿ ಅವರು ತಮ್ಮ ಹೊಸದಾಗಿ ಕೊಂಡ ಕಾರಿನಲ್ಲಿ ಇಡೀ ಜಿಲ್ಲೆಯ ಪ್ರವಾಸ ಕೈಕೊಳ್ಳಬೇಕೆಂದು ಗಾಂಧೀಜಿಯವರನ್ನು ಒಪ್ಪಿಸಿದ್ದರು. ಅದೇ ಕಾರಿನಲ್ಲಿಯೇ ಗಾಂಧೀಜಿಯವರನ್ನು ಕೂಡಿಸಿಕೊಂಡು ತೋಟಕ್ಕೆ ತಲುಪಿದರು. ಬಿಸಿಲಿನಿಂದ ಬಳಲಿದ ಮಹಾತ್ಮಾ ಅವರಿಗೆ ಮಾವು, ತೆಂಗು, ನೆಲ್ಲಿ ಗಿಡಗಳ ನೆರಳಿನಲ್ಲಿ ತೇಜೋಹಾರಿಯಾದ ನಿಸರ್ಗದ ಸನ್ನಿಧಿಯಲ್ಲಿ ಆಹ್ಲಾದಕಾರಕವೆನಿಸಿರಬೇಕು. ಅವರು ಬಹಳ ಸಂತೋಷದಿಂದಿದ್ದರು. ಗಾಂಧೀ ಭಕ್ತರು, ಕಾರ್ಯಕರ್ತರು, ಹರಿಜನಕೇರಿಯ ಗಂಡು-ಹೆಣ್ಣುಮಕ್ಕಳೆಲ್ಲ ಅಡಿಗಲ್ಲಿನ ಸಮಾರಂಭಕ್ಕಾಗಿ ಸಜ್ಜಾಗಿ ಬಂದಿದ್ದರು. ಸಿದ್ದನಾಥರ ಪತ್ನಿ ಸುಶೀಲಾ, ಗೊರ್ಲಿ ಶರಣಪ್ಪರ ರುದ್ರಮ್ಮ- ಇವರ ನೇತೃತ್ವದಲ್ಲಿ ಅನೇಕ ಸುವಾಸಿನಿಯರು ಆರತಿಯನ್ನು ಹಿಡಿದು ನಿಂತಿದ್ದರು.

ಗಾಂಧೀಜಿಯವರಿಗೆ ಅನೇಕ ಕಾರ್ಯಕರ್ತರು ಹಾರವನ್ನು ಹಾಕಿದ ಮೇಲೆ ಅವರು ಆರತಿಯನ್ನು ಬೆಳಗಿದರು. ನಂತರ ಭಾರವಾಗಿದ್ದ ಸಮಾರಂಭದ ಅಡಿಗಲ್ಲನ್ನು ಚೈತನ್ಯದ ಚಿಲುಮೆಯಂತಿದ್ದ ತರುಣ ಸಿದ್ದನಾಥರು ಎತ್ತಿಕೊಂಡು ಹೋದಾಗ ಗಾಂಧೀಜಿ ಅವರು "ಕ್ಯಾ ಮುಜುಮೇ ಇತನಾ ಶಕ್ತಿ ನಹೀ ಹೈ?" (ಏನು, ನನ್ನಲ್ಲಿ ಇಷ್ಟು ಶಕ್ತಿಯಿಲ್ಲವೇ?) ಎಂದವರೇ ಅವರ ಕೈಬಿಡಿಸಿ ಸ್ವತಃ ತಾವೇ ಅಡಿಗಲ್ಲನ್ನೆತ್ತಿ ಕೂಡಿಸಿದರು. ಅವರೆಲ್ಲರೂ ಚಪ್ಪಾಳೆ ತಟ್ಟಿದರು.

ಅಷ್ಟರಲ್ಲಿಯೇ ಅವರ ಯೋಗಕ್ಷೇಮವನ್ನು ನೋಡುತ್ತಿದ್ದ ಮೀರಾಬಾಯಿಯವರಿಗೆ ಈ ಬದಲಾದ ಕಾರ್ಯಕ್ರಮದ ಕಲ್ಪನೆಯಿರಲಿಲ್ಲ. ಅವರು ಸೊಂಡೂರು ಹಾದಿ ಹಿಡಿದು ಮುಂದೆ ಹೋಗಿಬಿಟ್ಟಿದ್ದರು. ಗಾಂಧೀಜಿಯವರ ಫಲಹಾರದ ಸಮಯವಾಗಿತ್ತೆಂದು ಅರಿತ ಸಿದ್ಧನಾಥರು ಅವರಿಗೆ ತೋಟದಲ್ಲಿಯೇ ಹಾಲು-ಎಳನೀರು, ಕಿತ್ತಳೆ ಹಣ್ಣಿನ ರಸದ ವ್ಯವಸ್ಥೆ ಮಾಡಿದ್ದರು. ಹಚ್ಚ ಹಸುರಿನ ಮರಗಿಡಗಳ ತಂಪಾದ ನೆರಳಿನಲ್ಲಿ ಅವುಗಳನ್ನು ಅತ್ಯಂತ ಆನಂದತುಂದಿಲರಾಗಿ ಸ್ವೀಕರಿಸಿದರು. ಹೀಗೆ ಅಡಿಗಲ್ಲು ಸಮಾರಂಭವಾದ ನಂತರ ದಣಿವಾರಿಸಿಕೊಂಡು ಫಲಹಾರ ಮಾಡಿ ಚೈತನ್ಯ ಹೊಂದಿ ಪ್ರಸನ್ನ ಮುಖದಿಂದ ಅವರು ಹೊರಟರು. ಆಗ ವಿನಯದಿಂದ ಕೈ ಮುಗಿದು ನಿಂತಿದ್ದ ಸಿದ್ಧನಾಥರ ಬೆನ್ನು ಚಪ್ಪರಿಸಿ, ನಗುನಗುತ್ತ ಪ್ರಯಾಣ ಮುಂದುವರಿಸಿದರು.

ಸಿದ್ದನಾಥ ಅವರು "ಕೊಟೂರು ಬಸವೇಶ್ವರನ ಊರಿನ ಇತಿಹಾಸದಲ್ಲಿ ಅದೊಂದು ಸುವರ್ಣಮಯ ಸಮಯ ಮತ್ತು ತನ್ನ ಜೀವನದಲ್ಲಿ ಅಪೂರ್ವ ಪುಣ್ಯದ ಕ್ಷಣ" ಎಂದಿದ್ದಾರೆ. ಅಲ್ಲದೆ ಆಗಾಗ ಈ ಪ್ರಸಂಗವನ್ನು ಜ್ಞಾಪಿಸಿಕೊಂಡು ಸಿದ್ಧನಾಥ ಅವರು ತಮ್ಮ ಬೆನ್ನನ್ನು ತಾವೇ ಚಪ್ಪರಿಗೆ ಕೊಳ್ಳುತ್ತಿದ್ದರು. ಎಂದು ರಾಜೇಂದ್ರ (ಸಿದ್ದನಾಥರ ಕೊನೆಯ ಮಗ) ಅವರು ಹೇಳುತ್ತಾರೆ.

ಗಾಂಧೀಜಿ ಬಂದು ಹೋದ ಐತಿಹಾಸಿಕ ಘಟನೆಯ ನೆನಪಿಗಾಗಿ ಆ ತೋಟಕ್ಕೆ ಇಂದಿಗೂ 'ಗಾಂಧಿ ತೋಟ' ವೆಂದು ಕರೆಯುತ್ತಾರೆ.

## ೧೦. ಕೊಟ್ಟೂರಿನಲ್ಲಿ ನಡೆದ ಬಳ್ಳಾರಿ ಜಿಲ್ಲಾ ರೈತಪರಿಷತ್ತು

ಸು. 1935-36ರ ಸಮಯದಲ್ಲಿ ಬಳ್ಳಾರಿಯಲ್ಲಿ ಭಯಂಕರ ಬರಗಾಲ ಬಿದ್ದಿತು. ಹೀಗಿದ್ದರೂ ಸರಕಾರಕ್ಕೆ ರೈತರ ಬೇಡಿಕೆಗಳನ್ನು ಪೂರೈಸಬೇಕೆಂಬ ವಿಚಾರವೇ ಇರಲಿಲ್ಲ. ಮದ್ರಾಸ್ ಸರ್ಕಾರಕ್ಕೆ ಅವರು ಸಲ್ಲಿಸಿದ್ದ ಬೇಡಿಕೆಗಳೆಲ್ಲ ಜಾರಿಯಲ್ಲಿ ಬರದೆ ನಿರಾಕರಿಸಲ್ಪಟ್ಟಿದ್ದವು. ಅದಕ್ಕೆ ಸುವರ್ಣ ಎಂಬ ಜಿಲ್ಲಾ ಕಲೆಕ್ಟರ ಬರೆದ ವರದಿಯೇ ಕಾರಣವೆಂದು ಸಿದ್ಧನಾಥ ಅವರು ಹೇಳುತ್ತಾರೆ. ಇದರಿಂದ ಬಳ್ಳಾರಿ ಜಿಲ್ಲಾ ರೈತ ಪರಿಷತ್ತೊಂದನ್ನು ಕೊಟ್ಟೂರಿನಲ್ಲಿ ಸೇರಿಸಿದರು. ಹೀಗೆ ರೈತ ಪರಿಷತ್ತನ್ನು ಸೇರಿಸಿದವುಗಳಲ್ಲಿ ಇದೇ ಮೊದಲನೆಯದು.

ಗಾಂಧೀ ವಲಯದ ಪ್ರಭಾವಕ್ಕೊಳಗಾಗಿ ಚಿಕ್ಕ ವಯಸ್ಸಿನಲ್ಲಿ ವಕೀಲಿವೃತ್ತಿಯನ್ನು ತೊರೆದು, ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿ ಹೋರಾಟಗೈದ ಕರ್ನಾಟಕದ ಪ್ರಮುಖ ಮುಂದಾಳುಗಳದ ಕೌಜಲಗಿ. ಹನುಮಂತರಾಯರು ಅದನ್ನು ಉದ್ಘಾಟಿಸಿದರು. ಬಳ್ಳಾರಿಯ ಚಳುವಳಿಯ ಪ್ರಮುಖ ವ್ಯಕ್ತಿಯಾದ ಟೇಕೂರು ಸುಬ್ರಮಣ್ಯಂ ಅವರು ಅಧ್ಯಕ್ಷತೆಯನ್ನು ವಹಿಸಿದ್ದರು. ಅದರಲ್ಲಿ ಜಿಲ್ಲಾ ರೈತರಿಗೆ ಪೋಷಕವೆನಿಸುವ ಅನೇಕ ಗೊತ್ತುವಳಿಗಳು ಸ್ವೀಕೃತವಾಗಿ ಸರಕಾರದ ಎದುರು ಮಂಡಿಸಲ್ಪಟ್ಟವು.

## ೧೧. ಪೈಜಪುರ ಅಧಿವೇಶನದಲ್ಲಿ ಭಾಗಿಯಾಗಿದ್ದು

ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ ಸಿದ್ಧನಾಥ ಅವರು ಆಯ್ಕೆಯಾಗಿದ್ದರು. ಹೀಗಾಗಿ ಅವರು ಹಾಗು ಟೇಕೂರು ಸುಬ್ರಮಣ್ಯಂ ಕೂಡಿಕೊಂಡು ಪೈಜಪುರ ಅಧಿವೇಶನಕ್ಕೆ ಹೋಗಿದ್ದರು. ಅದೇ ಅಧಿವೇಶನಕ್ಕೆ ಎಂ.ಎನ್.ರಾಯರು ಮೊದಲ ಸಲ ಬಂದಿದ್ದರು. ಕರ್ನಾಟಕ ಕಾಂಗ್ರೆಸ್ ಕಮಿಟಿಯ ಪ್ರಮುಖರಾದ ಅವರನ್ನು ಸಿದ್ಧನಾಥ ಅವರು ಸತ್ಕರಿಸಿದರು. ಅಷ್ಟೇ ಅಲ್ಲ, ಅವರ ಅಮೂಲ್ಯ ವಿಚಾರಗಳನ್ನು ತಿಳಿದುಕೊಂಡಿದ್ದರು.

ಅಂದಿನ ಆ ಪರಿಚಯದಿಂದಲೇ ಸಿದ್ದನಾಥರು ಡೆಹರಾಡೂನಿನಲ್ಲಿ ಎಂ.ಎನ್.ರಾಯರ ವಿಚಾರಸಂಕಿರಣ ಕುರಿತು ಒಂದು ತಿಂಗಳ ವರೆಗೆ ನಡೆದ ಕ್ಯಾಂಪಿನಲ್ಲಿ ಪ್ರವೇಶ ಪಡೆದರು. ಅಲ್ಲಿ ಅವರ ಮಾನವತಾ ವಿಚಾರದ ಬಗೆಗೆ ಪರಿಚಯ ಮಾಡಿಕೊಂಡರಲ್ಲದೆ ಹಲವು ವಿಷಯಗಳನ್ನು ಕುರಿತು ಆ ಕ್ಯಾಂಪಿನಲ್ಲಿ ಚರ್ಚಿಸಿದರು.

# ೧೨. ಹರಿದ್ವಾರದಲ್ಲಿ ಕರ್ನಾಟಕ ಧರ್ಮಶಾಲೆ

ಸಿದ್ದನಾಥರ ವಿಚಾರಗಳೆಲ್ಲ ಸಕಾರಾತ್ಮಕವಾದುದು. ಗಾಂಧೀಜಿಯ ಪ್ರಭಾವಕ್ಕೆ ಸಿಲುಕಿ ಅವರು ಶಿಕ್ಷಣವನ್ನು ಅರ್ಧಕ್ಕೆ ಬಿಟ್ಟು ಹರಪನಹಳ್ಳಿಯಿಂದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದ ನಂತರ ಕೊಟ್ಟೂರಲ್ಲಿ ಅದನ್ನು ಪೂರ್ಣಗೊಳಿಸಿದರು.

ಜನರನ್ನು ಜಾಗೃತಗೊಳಿಸಲು ಊರೂರಿಗೆ ತಿಂಗಳುಗಟ್ಟಲೆ ಬಳ್ಳಾರಿ ಜಿಲ್ಲೆಯಲ್ಲಿ ಅಡ್ಡಾಡುವಾಗ ಹರಿಜನಕೇರಿಯಲ್ಲಿ ವಾಸಿಸುವಾಗ ತಮ್ಮ ಹುಟ್ಟೂರು ಹಗರಿಬೊಮ್ಮನಹಳ್ಳಿಯಲ್ಲಿದ್ದಾಗ ಸಮಯಕ್ಕೆ ಸರಿಯಾಗಿ ವೈದ್ಯಕೀಯ ಚಿಕಿತ್ಸೆ, ಔಷದೋಪಚಾರ ದೊರೆಯದೆ ರೋಗದಿಂದ ಬಳಲಿ ಬಳಲಿ ಸಾಯುವ ಬಡರೋಗಿಗಳನ್ನು ಕಣ್ಣಾರೆ ಕಂಡಿದ್ದರು. ತಾವು ವೈದ್ಯರಾಗಿ ಅಂತಹವರ ಜೀವ ಉಳಿಸಿದರೆ ತಮ್ಮ ಜೀವನ ಸಾರ್ಥಕವಾಗುವದೆಂದು ಅವರಿಗೆ ಅನಿಸುತ್ತಿತ್ತು. ಬೀಜರೂಪವಾಗಿದ್ದ ಅವರ ಮನದಾಳದ ಈ ಆಶೆ ದಿನೇ ದಿನೇ ಬೆಳದು ಹೆಮ್ಮರವಾಯಿತು. ಈ 7 - 8 ವರ್ಷಗಳಲ್ಲಿ ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಿಡುವಿಲ್ಲದೆ ನಿರಂತರವಾಗಿ ದೇಶಸೇವೆಯಲ್ಲಿಯೇ ತೊಡಗಿಸಿಕೊಂಡರು.

ಒಂದಲ್ಲದೆ ಹಲವಾರು ಕಬ್ಬಿಣ ಸಳಿಗಳುಳ್ಳ ಕಮ್ಮಾರನ ಕಾಲುವೆಯಂತೆ ಅನೇಕ ಕಾರ್ಯಯೋಜನೆಗಳನ್ನು ಸಿದ್ಧನಾಥ ಅವರು ಹಮ್ಮಿಕೊಂಡಿದ್ದರು. ಆದರೂ ಸುಮಾರು 1937 - 38 ರಲ್ಲಿ ಸಾರ್ವಜನಿಕ ಜೀವನದಲ್ಲಿ ವೈದ್ಯಕೀಯ ಜ್ಞಾನವನ್ನು ಅಳವಡಿಸಿಕೊಂಡು ಜನಸೇವೆ ಮಾಡಬೇಕೆಂಬ ತಮ್ಮ ಬಹುದಿನದ ಆಕಾಂಕ್ಷೆಯನ್ನು ಕಾರ್ಯರೂಪಕ್ಕೆ ಇಳಿಸಬೇಕೆಂದು ಸಂಕಲ್ಪ ಮಾಡಿದರು. “ದೀನಸೇವಾಶ್ರಮ' ದ ಕಾರ್ಯವನ್ನು ತಮ್ಮ ಸಹಕಾರ್ಯಕರ್ತರಾದ ಗೊರ್ಲಿ ಶರಣಪ್ಪ, ಬಿ.ಎಂ. ಅಚ್ಚಯ್ಯ ಮುಂತಾದವರಿಗೆ ಒಪ್ಪಿಸಿದರು. ತಮ್ಮ ಪತ್ನಿಯಾದ ಸುಶೀಲಾಳನ್ನು ವರ್ಧಾ ಮಹಿಳಾಶ್ರಮದಲ್ಲಿ ಸೇವೆಗೈಯಲು ಬಿಟ್ಟು, ಹರಿದ್ವಾರದಲ್ಲಿ ತರಬೇತಿಯೊಂದಿಗೆ ಸ್ವಾಮಿ ಶ್ರದ್ಧಾನಂದರು ಸ್ಥಾಪಿಸಿದ ಗುರುಕುಲದಲ್ಲಿ ಪ್ರವೇಶ ಪಡೆದು, ವೈದ್ಯಕೀಯ ಅಧ್ಯಯನ ಪ್ರಾರಂಭ ಮಾಡಿದರು.

ಎಲ್ಲಿ ಹೋದರೂ ಮೂಲೆ ಹಿಡಿದು ಕುಳಿತುಕೊಳ್ಳುವ ಸ್ವಭಾವ ಸಿದ್ಧನಾತರದಾಗಿರಲಿಲ್ಲ. ಹರಿದ್ವಾರದಲ್ಲಿ ಮೂವರೇ ಕನ್ನಡಿಗರಿಂದ ಕೂಡಿದ ಕರ್ನಾಟದ ಸಂಘವನ್ನು ಕಟ್ಟಿದ್ದು ಒಂದು ಸಾಹಸವೇ ಸರಿ. ಕರ್ನಾಟಕದಿಂದ ಬರುವ ಯಾತ್ರಿಕರಿಗೆ ಹರಿದ್ವಾರದಲ್ಲಿ ಒಂದೆರಡು ದಿವಸ ಉಳಿಯಲು ವ್ಯವಸ್ಥೆ ಮಾಡುವುದೇ ಆ ಸಂಘದ ಮುಖ್ಯ ಉದ್ದೇಶವಾಗಿತ್ತು, ಸಿದ್ದನಾಥ ಅವರು ಆ ಕರ್ನಾಟಕ ಸಂಘದ ಕಾರ್ಯದರ್ಶಿ ಆಗಿದ್ದರು.

ಒಂದು ದಿವಸ ಕರ್ನಾಟಕ ಸಂಘದ ಹೆಸರಿನಿಂದ ಒಂದು ಪತ್ರ ಬಂದಿತು. ಅಂದು ಮೈಸೂರು ದಿವಾನರಾಗಿದ್ದ ಶ್ರೀ ಎನ್. ಮಾಧವರಾಯರದು ಅದರಲ್ಲಿ “ಹರಿದ್ವಾರದಲ್ಲಿ ಒಂದೆರಡು ದಿನ ನಾನು ಉಳಿದು ಕೊಳ್ಳುತ್ತೇನೆ ನೀವು ವಸತಿಯ ವ್ಯವಸ್ಥೆ ಮಾಡಬೇಕು” ಎಂದು ಅವರು ಬರೆದಿದ್ದರು. ಅವರು ಹೇಳಿದಂತೆಯೇ ಕಾರ್ಯದರ್ಶಿಗಳಾದ ಸಿದ್ಧನಾಥ ಅವರು ವ್ಯವಸ್ಥೆ ಮಾಡಿದ್ದರು. ಅವರು ಬಂದ ನಂತರ, ಅದನ್ನು ನೋಡಿ ಸಂತೋಷದಿಂದ ಸಿದ್ದನಾಥರಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಅಲ್ಲದೆ ಕನ್ನಡ ಸಂಘದ ಕಾರ್ಯವನ್ನು ಶ್ಲಾಘಿಸಿದರು.

ಶ್ರೀ ಎನ್. ಮಾಧವರಾಯರೊಂದಿಗೆ ಮಾತಿಗೆ ತೊಡಗಿದಾಗ "ಭಾರತದ ಬೇರೆ ಬೇರೆ ಭಾಗಗಳಿಂದ ಬರುವ ಯಾತ್ರಿಕರಿಗೆ ಆಯಾ ಭಾಗಗಳ ಸಾರ್ವಜನಿಕ ಹಿತಾಸಕ್ತರು ಧರ್ಮಶಾಲೆಗಳನ್ನು ಒದಗಿಸಿದ್ದಾರೆ. ಆದರೆ ಕರ್ನಾಟಕದ ಭಾಗದಿಂದ ಬರತಕ್ಕಂತಹ ಯಾತ್ರಿಕರಿಗೆ ಅಂತಹ ವ್ಯವಸ್ಥೆಯಿಲ್ಲದೆ ಬಹಳ ಅಡಚಣೆಗೆ ಈಡಾಗುತ್ತಿದ್ದಾರೆ." ಎಂದು ಸಿದ್ದನಾಥರು ಹೇಳಿ ಆ ವಿಷಯದೆಡೆ ಅವರ ಗಮನ ಸೆಳೆದರು. ಅಷ್ಟೇ ಅಲ್ಲ. ಆ ರೀತಿಯ ಲಿಖಿತ ಮನವಿಯನ್ನು ಸಲ್ಲಿಸುತ್ತ ಮೈಸೂರು ಮಹಾರಾಜರಿಗೆ ಹೇಳಿ ಹರಿದ್ವಾರದಲ್ಲಿ ಕರ್ನಾಟಕ ಧರ್ಮಶಾಲೆಯನ್ನು ಕಟ್ಟುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡರು. ಅವರ ಈ ಬೇಡಿಕೆ ಸಫಲವಾಯಿತು. ಮೈಸೂರು ಮಹಾರಾಜರಿಗೆ ಅಲ್ಲಿಯ ಸ್ಥಿತಿಯ ಸಾರಾಸಾರವನ್ನು ಶ್ರೀ ಎನ್. ಮಾಧವರಾಯರು ತಿಳಿಸಲು, ಅವರ ಆ ಬೇಡಿಕೆಯನ್ನು ಜಾರಿಯಲ್ಲಿ ತಂದರು.

ಹೀಗೆ ಪ್ರಾರಂಭವಾದ ಹರಿದ್ವಾರದಲ್ಲಿನ ಕರ್ನಾಟಕ ಧರ್ಮಶಾಲೆಯ ಅವರ ಕಲ್ಪನೆ ಸಾಕಾರಗೊಂಡು ಇಂದು ಸುಸಜ್ಜಿತವಾದ ಎರಡಂತಸ್ತಿನ ಭವ್ಯ ಕಟ್ಟಡವಾಗಿ ಬೆಳೆದು ನಿಂತಿದೆ. ಈ ಕರ್ನಾಟಕ ಧರ್ಮಶಾಲೆ ಹರಿದ್ವಾರದ ರೇಲ್ವೆ ನಿಲ್ದಾಣದ ಸಮೀಪವಿದ್ದು ಗಂಗಾನದಿಯ ದಂಡೆಯ ಮೇಲೆ ರಾರಾಜಿಸುತ್ತದೆ. ಶ್ರೀ.ಎಸ್. ನಿಜಲಿಂಗಪ್ಪನವರು ಅಂದು ಆ ಧರ್ಮಶಾಲೆಯ ಪ್ರಮುಖ ಟ್ರಸ್ಟಿಗಳಾಗಿದ್ದರು. ಆಗ ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದ ಪಂ.ನಂಜುಂಡ ಶಾಸ್ತ್ರೀಗಳೇ ಮುಂದೆ ಧರ್ಮಶಾಲೆಯ ವ್ಯವಸ್ಥಾಪಕರಾದರು. ಅದರ ವ್ಯವಸ್ಥೆಯನ್ನು ಅತ್ಯಂತ ಯೋಗ್ಯ ರೀತಿಯಿಂದ ನಡೆಸಿಕೊಂಡು ಹೋದ ಅವರ ಕಾರ್ಯ ಅಭಿನಂದನೀಯವಾದದ್ದು ಮತ್ತೆ ಈಗ ಮುಂದಿನವರು ನಡೆಸಿಕೊಂಡು ಹೋಗುತ್ತಿದ್ದಾರೆ. ಸೊಲ್ಲಾಪುರದಲ್ಲಿದ್ದಾಗ ಸಿದ್ಧನಾಥರು ಇದನ್ನು ಆಗಾಗ ನೆನೆಸಿಕೊಂಡು, ಒಳ್ಳೆಯ ವಿಚಾರಗಳು ಎಂದು ವ್ಯರ್ಥವಾಗುವುದಿಲ್ಲ ಎಂದು ಅನ್ನುತ್ತಿರುತ್ತಾರೆ.

ಹರಿದ್ವಾರದಲ್ಲಿಯ ವೈದ್ಯಕೀಯ ಅಭ್ಯಾಸ ಮುಗಿಸಿ, ಮುಂದಿನ ಅಭ್ಯಾಸಕ್ಕಾಗಿ ಸಿದ್ದನಾಥ ಅವರು ಕಲಕತ್ತೆಗೆ ತೆರಳಿದರಾಗಿ ತಿಳಿದು ಬರುತ್ತದೆ. ಅಲ್ಲಿಯ ಅಭ್ಯಾಸವನ್ನು ಮುಗಿಸಿ ವೈದ್ಯಕೀಯ ಪದವಿ ಪಡೆದುಕೊಂಡರು.

## ೧೩. ೧೯೪೨ರ ಕ್ವಿಟ್ ಇಂಡಿಯಾ ಚಳುವಳಿ

ಹರಿದ್ವಾರ, ಕಲಕತ್ತೆಗಳಲ್ಲಿಯ ತಮ್ಮ ವೈದ್ಯಕೀಯ ಶಿಕ್ಷಣ ಮುಗಿದ ನಂತರ ಕೊಟ್ಟೂರಿಗೆ ಬಂದರು. ಅಲ್ಲಿ ತಾವು ಬಿಟ್ಟು ಹೋದ ಕಾರ್ಯಗಳನ್ನು ಮುಂದುವರಿಸಿದರು. ಅಷ್ಟರಲ್ಲಿ 1942ರ 'ಕ್ವಿಟ್ ಇಂಡಿಯಾ' ಚಳುವಳಿ ಪ್ರಾರಂಭವಾಯಿತು. ಆ ಭಾಗದಲ್ಲಿಯ ಆ ಚಳುವಳಿಯಲ್ಲಿ ಭಾಗವಹಿಸಿ ಸಿದ್ಧನಾಥ ಅವರು ಸತತವಾಗಿ ಕಾರ್ಯ ನಡೆಸಿದರೆಂದು ತಿಳಿದು ಬರುತ್ತದೆ.

## ೧೪. ಬಳ್ಳಾರಿ ಜಿಲ್ಲೆಯ ಜನರು ಜಾಗೃತಿಗೊಂಡ ಪ್ರಸಂಗ

1932ರಲ್ಲಿ ಸಿದ್ಧನಾಥ ಅವರು ಬಳ್ಳಾರಿ ಜಿಲ್ಲೆಯಲ್ಲಿ ಮೂರನೆಯ ಸರ್ವಾಧಿಕಾರಿಯಾದಾಗ ಜನರಿಗೆ ಸ್ವಾತಂತ್ರ್ಯ ಆಂದೋಲನದ ಬಗೆಗೆ ಜಾಗೃತಿ ಮೂಡಿಸುವುದಕ್ಕಾಗಿ ಒಂದೆಡೆ ನಿಲ್ಲದೆ ಹಳ್ಳಿ ಹಳ್ಳಿಗೆ ತಿರುಗುತ್ತಿದ್ದರು. ಆಗ ಅವರ ಜಿಲ್ಲೆಯಲ್ಲಿ ನಡೆದ ಉಲ್ಲೇಖನೀಯ ಪ್ರಸಂಗವೊಂದನ್ನು ಕುರಿತು ಸಿದ್ಧನಾಥ ಅವರೇ ಹೇಳುತ್ತಾರೆ.

"ಕೊಟ್ಟೂರಿನ ಸ್ವದೇಶಿ ದಲ್ಲಾಳಿ ಅಂಗಡಿಯ ಅಂದಾನೆಪ್ಪ ಹಾಗೂ ಮತ್ತೊಬ್ಬರು ಸತ್ಯಾಗ್ರಹ ಹೂಡಿದ್ದಕ್ಕಾಗಿ ಬಂಧಿಸಲ್ಪಟ್ಟರು ಪೋಲಿಸ್ ಲಾಕಪ್ಪಿನಲ್ಲಿ ಇವರನ್ನು ಮನಸ್ವೀ ಹೊಡೆದು ಬಡಿದು ಬಡಿದು ಮರುದಿನ ಮನೆಗೆ ಅಟ್ಟಿದರು. ಅವರ ಮೈಮೇಲೆ ಲಾಠಿ ಹಾಗೂ ಬೆತ್ತದ ಹೊಡೆತದಿಂದ ಮೂಡಿದ್ದ ಬಾಚಲುಗಳು ಅಸಹ್ಯ ವೇದನೆಯುಂಟು ಮಾಡುತ್ತಿದ್ದವು. ಹೊಡೆತ ತಿಂದು ಇಬ್ಬರು ಸತ್ಯಾಗ್ರಹಿಗಳು ಗಂಭೀರ ಸ್ಥಿತಿಯಲ್ಲಿಯೇ ಇದ್ದುದರಿಂದ ಅವರನ್ನು ಬಳ್ಳಾರಿಯ ಸರಕಾರೀ ಆಸ್ಪತ್ರೆಯಲ್ಲಿಟ್ಟು ಹಲವು ಕಾಲ ಉಪಚರಿಸಬೇಕಾಯಿತು. ಈ ಪ್ರಕರಣದ ವಿಚಾರಣೆಯಾಗಬೇಕೆಂದು ಜಿಲ್ಲೆಯ ಜನತೆ ಅತ್ಯಂತ ಒತ್ತಾಯಪಡಿಸಿತು. ಆ ಮೇರೆಗೆ ಐರೋಪ್ಯ ಜಿಲ್ಲಾ ಕಲೆಕ್ಟರ್ ಸ್ವತಃ ಕೊಟ್ಟೂರಿನಲ್ಲಿಯೇ ವಿಚಾರಣಾಕಾರ ಪ್ರಾರಂಭಿಸಿದರು. ಇಡೀ ಊರ ಜನತೆ ಅಧಿಕಾರಿಗಳಿಬ್ಬರ ವಿರುದ್ಧ ಸಾಕ್ಷ ನುಡಿಯಿತು. ಅಧಿಕಾರಿಗಳು ತಮ್ಮ ಪರವಾಗಿ (ಪೋಲೀಸರನ್ನು ಬಿಟ್ಟರೆ) ಒಂದು ಸಾಕ್ಷಿಯನ್ನು ನುಡಿಸಲು ಶಕ್ಯವಾಗಲಿಲ್ಲ. ಆ ಪ್ರಕರಣದಲ್ಲಿ ಇಬ್ಬರು ಪೋಲಿಸ್ ಅಧಿಕಾರಿಗಳು ಹಾಗೂ ನಾಲ್ಕು ಮಂದಿ ಪೊಲೀಸರು ತಮ್ಮ ನೌಕರಿ ಕಳೆದುಕೊಂಡರು. ಇಂತಹ ಪ್ರಕರಣ ನಾಡಿನಲ್ಲಿ ಅಂದು ನಡೆದದ್ದು ಅದೊಂದೇ ಎಂದು ಹೇಳಬಹುದು. ಇದು ಜಿಲ್ಲೆಯ ಜನರ ಜಾಗೃತಿಗೆ ಸೂಚಕ.

ಆಗ ನಡೆದ ಈ ಪ್ರಸಂಗ ಜಿಲ್ಲೆಯ ಜನರ ಮೇಲೆ ಎಷ್ಟೊಂದು ಪರಿಣಾಮ ಬೀರಿತ್ತೆಂದು ಹೇಳಬಹುದು.

# ೧೫. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಬಳ್ಳಾರಿ ಜಿಲ್ಲೆಯ ಹೋರಾಟಗಾರರು

ಸ್ವಾತಂತ್ರ್ಯ ಸಂಗ್ರಾಮದ ಪ್ರತ್ಯಕ್ಷ ದರ್ಶಿಯಾಗಿ, ಕಾರ್ಯಕರ್ತರಾಗಿ, ಜಿಲ್ಲೆಯ ಮೂರನೆಯ ಸರ್ವಾಧಿಕಾರಿಯಾಗಿ ಪ್ರದೇಶ ಕಾಂಗ್ರೆಸ್ ಕಮಿಟಿಯ ಸದಸ್ಯರಾಗಿ, "ದೀನಸೇವಾಶ್ರಮ' ಸಂಸ್ಥೆಯ ಸ್ಥಾಪಕರಾಗಿ ಸಿದ್ದನಾಥರು ಹಲವು ರೀತಿಯ ಮಹತ್ವ ಪೂರ್ಣ ಕಾರ್ಯಗಳಲ್ಲಿ ಭಾಗಿಯಾಗಿದ್ದರು.

ಆಗ ಮನೆಮಠವನ್ನು ಲೆಕ್ಕಿಸದೆ, ಸ್ವತಃ ತಮ್ಮ ಜೀವದ ಪರಿವೇ ಇಲ್ಲದೆ, ದೇಶಕ್ಕಾಗಿ ಸರ್ವಾರ್ಪಣ ಭಾವದಿಂದ ದುಡಿಯುತ್ತಿದ್ದವರ ಹೆಸರುಗಳನ್ನು ಸಿದ್ದನಾಥ ಅವರು ಸ್ಮರಿಸಿಕೊಂಡು ತಮ್ಮ ಅನುಭವಗಳನ್ನು ಇಲ್ಲಿ ಹೇಳಿಕೊಂಡಿದ್ದಾರೆ.

ಸಿದ್ಧನಾಥರು ಸತ್ಯಾಗ್ರಹದಲ್ಲಿ ಜಿಲ್ಲೆಯ ಹಲವು ಭಾಗಗಳಲ್ಲಿ ವಿಶೇಷ ಆಸಕ್ತಿಯಿಂದ ಭಾಗವಹಿಸಿದ ಹಲವರ ಹೆಸರುಗಳನ್ನು ಉಲ್ಲೇಖಿಸಿದ್ದಾರೆ. ಅವುಗಳಲ್ಲಿ ಮೊದಲ ಹೆಸರು ಟೇಕೂರು ಸುಬ್ರಮಣ್ಯಂ ಅವರದು. ಅವರ ಮನೆಮಾತು ತೆಲುಗು ಇದ್ದರೂ, ಕರ್ನಾಟಕಕ್ಕಾಗಿ ದುಡಿಯುತ್ತಿದ್ದ ಧೀಮಂತ ವ್ಯಕ್ತಿ, ಕರ್ನಾಟಕ ಪರವಾಗಿ ದುಡಿಯುತ್ತೇನೆ ಎಂದು ಕನ್ನಡಿಗರಿಗಾಗಿ ಮೊಸಳೆ ಕಣ್ಣೀರು ಸುರಿಸಿ, ನಾಳೆ ಬಳ್ಳಾರಿ ನಗರವನ್ನೇ ಆಂಧ್ರಕ್ಕೆ ಸಾಗಿಸಿದರೆ ಎಂಬ ಭೀತಿ ದೂರದ ಕರ್ನಾಟಕ ಪ್ರದೇಶ ಕಾಂಗ್ರೇಸ್ ಕಮೀಟಿಯವರಿಗೆ ಇತ್ತು. ಈ ಸಂಶಯದ ಸುಳಿವು ಹತ್ತುತ್ತಲೇ ನಿಜವಾದ ಕರ್ನಾಟಕ ಪ್ರೀತಿಯುಳ್ಳ ಸುಬ್ರಮಣ್ಯಂ ಅವರು ತುಂಬ ನೊಂದುಕೊಂಡರು.

ಅಷ್ಟೇ ಅಲ್ಲ, ತಾವಾಗಿಯೇ ಮುಂದೆ ಬಂದು ಎಲ್ಲ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮೀಟಿಯವರ ಎದುರು 'ಜೀವದುಸಿರು ಇರುವವರೆಗೆ ಕರ್ನಾಟಕಕ್ಕಾಗಿಯೇ ದುಡಿಯುತ್ತೇನೆ' ಎಂದು ವಾಗ್ದಾನವಿತ್ತರು. ಇದು ಅವರ ಔದಾರ್ಯದ ಅಚಲ ರಾಷ್ಟ್ರೀಯ ವೃತ್ತಿಯ ದ್ಯೋತಕ. ಇದನ್ನು ಬಳ್ಳಾರಿಯ ಕುರಿತಾದ ತೀರ್ಪಿನಲ್ಲಿ ಜಸ್ಟಿಸ್ ಮಿಶ್ರರವರು ಉಲ್ಲೇಖ ಮಾಡಿರುವುದನ್ನು ಇಲ್ಲಿ ನೆನೆಯಬಹುದಾಗಿದೆ. ಸಿದ್ದನಾಥ ಅವರು "ಸುಬ್ರಮಣ್ಯಂ ಅವರ ಕರ್ನಾಟಕ ಪರ ತ್ಯಾಗಕ್ಕಾಗಿ ಆಂದ್ರ ಪ್ರಾಧಾನ್ಯ ಮದ್ರಾಸ್ ರಾಜ್ಯದಲ್ಲಿ ಬಳ್ಳಾರಿ ಜಿಲ್ಲೆಯಿರುವವರೆಗೆ ಅವರಿಗೆ ನೈಜವಾಗಿ ದೊರೆಯಬೇಕಾದ ಸ್ಥಾನಮಾನಗಳು ಸಿಗದೆ ಹಲವಾರು ಕಷ್ಟನಷ್ಟಗಳನ್ನು ಕೂಡ ಅವರು ಎದುರಿಸಬೇಕಾಯಿತೆಂಬುದು ಸತ್ಯಸಂಗತಿಯಾಗಿದೆ" ಎಂದಿದ್ದಾರೆ.

ಎರಡನೆಯ ಹೆಸರು ಟಿ.ಬಿ. ಕೇಶವರಾವ್- ಟೇಕೂರು ಸುಬ್ರಮಣ್ಯಂ ಅವರಂತೆ ಚಳುವಳಿಯ ಪ್ರಾರಂಭದಿಂದಲೂ ಜಿಲ್ಲೆಯ ಜನತೆಯನ್ನು ಜಾಗೃತಗೊಳಿಸುತ್ತ ಯಾವ ಪರಿಸ್ಥಿತಿಯಲ್ಲಿಯೂ ಕ್ಷೇತ್ರ ಪಲ್ಲಟವಾಗದೆ ಗಾಂಧೀತತ್ವ, ಹರಿಜನ ಸೇವಾಕಾರ, ಹಿಂದಿ ಪ್ರಚಾರ ಮುಂತಾದವುಗಳಲ್ಲಿ ದುಡಿಯುತ್ತ ಬಂದ ಜಿಲ್ಲೆಯ ಮುಂದಾಳುಗಳಲ್ಲಿ ಟಿ.ಬಿ. ಕೇಶವರಾಯರು ಪ್ರಮುಖರಾಗಿದ್ದಾರೆ.

ರಾಷ್ಟ್ರ ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸಿ ದಂಪತಿ ಸಮೇತ ಕಾರಾಗೃಹವಾಸ ಅನುಭವಿಸಿ, ಯಾವ ಫಲಾಪೇಕ್ಷೆ ಇಲ್ಲದೆ ಈ ಇಳಿವಯಸ್ಸಿನಲ್ಲಿಯೂ ದುಡಿಯುವ ಹಂಬಲವುಳ್ಳ ಟಿ.ಬಿ. ಕೇಶವರಾವ್ ಹಾಗು ಅವರ ಧರ್ಮಪತ್ನಿ ಜಯಲಕ್ಷ್ಮೀ ದೇವಿಯವರ ಹೆಸರುಗಳು ವಿಶೇಷ ಉಲ್ಲೇಖನೀಯವಾಗಿದೆ.

ಇವರಿಬ್ಬರಲ್ಲದೆ ಬಳ್ಳಾರಿ ಜಿಲ್ಲೆಯಿಂದ ಚಳುವಳಿಯಲ್ಲಿ ಭಾಗವಹಿಸಿ, ಕಾರಾಗೃಹವಾಸವನ್ನು ಅನುಭವಿಸಿದ ಇತರರ ಹೆಸರುಗಳು ಹೀಗೆ ಇವೆ - ಬಿ.ವಿ. ಶೇಷಗಿರಿರಾವ್, ಅವರ ತಂದೆ ಬಿ. ವೆಂಕೋಬರಾವ್, ಡಿ.ಎಚ್. ವೆಂಕೋಬರಾವ್ ಹಾಗು ಅವರ ತಮ್ಮ ಡಿ.ಎಚ್. ಕೃಷ್ಣರಾವ್, ಡಿ. ಗೋಪಾಲರಾವ್, ಸದಾಶಿವ, ಡಾ|| ಸರಾಪ್, ಮೊಕಾ ಭೀವಸೇನಾಚಾರ್ಯ, ಹೊಸಪೇಟೆ, ಅನಂತಾಚಾರ್ಯ, ಮತ್ತಿಹಳ್ಳಿ ರಾಘವೇಂದ್ರರಾವ್, ಪತ್ತಿಕೊಂಡ ಗುರುನಾಥಪ್ಪ ಶೆಟ್ಟಿ, ಕಟ್ಟೆ ರಾಮಾಚಾರ್ಯ, ಕೊಟ್ಟೂರು: ಬಣಕಾರ ಗೌಡಪ್ಪ, ಗೊರ್ಲಿ ಶರಣಪ್ಪ, ಭದ್ರಶೆಟ್ಟಿ ಸಣ್ಣ ರುದ್ರಪ್ಪ, ತೊಲಹಳ್ಳಿ ಗುರುಲಿಂಗಪ್ಪ, ಹಳ್ಳಿ ಗುರುಬಸಪ್ಪ, ಗುರುಬಸಯ್ಯ, ಸೀತಾರಾಮರಾವ್, ಅವರ ತಮ್ಮ ಕೃಷ್ಣರಾವ್, ಬಡಿಗೇರ ಬಸಪ್ಪ, ಯಲಿಗಾರ ಅಜ್ಜಯ್ಯ, ಹರಪನಹಳ್ಳಿ: ಭೋಗಾರ ಚೂಡಪ್ಪ, ಬಣಗಾರ ಹೊನ್ನಪ್ಪ, ಇಜಾರಿ ಸಿರಸಪ್ಪ, ಡಾ|| ದಂಡಿನ ರಾಮರಾವ್, ಲಕ್ಕುಂಡಿ ಶ್ಯಾಮರಾವ್, ಬೆಣ್ಣೆಹಳ್ಳಿ ಬಸಲಿಂಗಜ್ಜ, ಅರಸೀಕೆರೆ ರೇವನಗೌಡ.

ಹೀಗೆ ಬಳ್ಳಾರಿ ಜಿಲ್ಲೆಯ ಸತ್ಯಾಗ್ರಹದಲ್ಲಿ 1929 ರಿಂದ 1936 ರವರೆಗೆ ಭಾಗವಹಿಸಿದ ಹೋರಾಟ ಮಾಡಿದ ಹಾಗೂ ಜೈಲುವಾಸ ಅನುಭವಿಸಿದವರ ಹೆಸರುಗಳನ್ನು ಸಿದ್ಧನಾಥ ಬಳ್ಳಾರಿಯವರು ಹೇಳಿದ್ದಾರೆ. ಇದರಿಂದ ಎಲೆಮರೆಯಕಾಯಿಯಂತಿದ್ದ ಹಲವರ ಹೆಸರುಗಳನ್ನು ಬೆಳಕಿಗೆ ತಂದ ಶ್ರೇಯಸ್ಸು ಸಿದ್ಧನಾಥ ಬಳ್ಳಾರಿಯವರಿಗೆ ಸೇರುತ್ತದೆ.

# ಅಧ್ಯಾಯ - ೩

## ಡಾ|| ಸಿದ್ದನಾಥ

## ಬಳ್ಳಾರಿಯವರ ನಂತರದ

## ಜೀವನ ಘಟ್ಟ

## (೧೯೪೭ ರಿಂದ ೧೯೯೧)

## ೧. ೧೯೪೭ರ ವರೆಗಿನ ಸೊಲ್ಲಾಪುರ ಕನ್ನಡಿಗರ ಸ್ಥಿತಿ-ಗತಿ

"ನಾವು ಮಹಾರಾಷ್ಟ್ರದಲ್ಲಿ ಆಳವಾಗಿ ತೋಡಿದಂತೆಲ್ಲ ಅಲ್ಲಿ ನಮಗೆ ಕರ್ನಾಟಕದ ಬೇರುಗಳೇ ಕಾಣುತ್ತವೆಯಲ್ಲದೆ, ಮಹಾರಾಷ್ಟ್ರದ ಬೇರುಗಳು ಕಾಣುವುದಿಲ್ಲ" ಎಂದು ಒಂದೆಡೆ ಪಾಟೀಲ ಪುಟ್ಟಪ್ಪನವರು ಹೇಳಿದಂತೆ, ಸೊಲ್ಲಾಪುರ ಜಿಲ್ಲೆಯಲ್ಲಿ ದೊರೆಯುವ ಶಾಸನಗಳು ಹೆಚ್ಚಾಗಿ ಕನ್ನಡದಲ್ಲಿವೆ. ಶಾತವಾಹನರಿಂದ ಮೊದಲುಗೊಂಡು, ಬಾದಾಮಿ ಚಾಲುಕ್ಯರು, ಕಲ್ಯಾಣ ಚಾಲುಕ್ಯರು, ದೇವಗಿರಿ ಯಾದವರು, ಕಲಚೂರ್ಯರು, ರಾಷ್ಟ್ರಕೂಟರು ಮುಂತಾದ ಅರಸು ಮನೆತನಗಳು ರಾಜ್ಯ ಆಳಿದರು. 12ನೆಯ ಶತಮಾನದಲ್ಲಿ ವಚನ ಸಾಹಿತ್ಯ ರಚಿಸಿ ಸೊನ್ನಲಿಗೆಯನ್ನು ಆಧುನಿಕ ಶ್ರೀಶೈಲವನ್ನಾಗಿ ಮಾಡಿದ ಸಿದ್ದರಾಮೇಶ್ವರ ಕನ್ನಡಿಗರೆಲ್ಲರ ಹೃದಯಮಂದಿರದಲ್ಲಿ ಸ್ಫೂರ್ತಿಯ ಸೆಲೆಯಾಗಿ, ಭಕ್ತಿಯ ನೆಲೆಯಾಗಿ ನಿಂತುಕೊಂಡಿದ್ದಾನೆ. ಸೊನ್ನಲಿಗೆ ಸುತ್ತಮುತ್ತ ಅನೇಕ ಶಿವಶರಣರು ಆಗಿ ಹೋಗಿದ್ದಾರೆ. ಮುಂದೆ ವಿಜಾಪುರದ ಆದಿಲಶಾಹಿಗಳು ಇದನ್ನು ಆಳಿದ್ದಾರೆ. ಆಗ ಸ್ವಾಮಿಗಳು, ಜಂಗಮರು, ಆಡಳಿತಾಧಿಕಾರಿಗಳು ಎನಿಸಿದ ಪಾಟೀಲರು, ಕುಲಕರ್ಣಿಗಳು, ದೇಶಮುಖರು, ದೇಶಪಾಂಡೆಯರು ಇನಾಮುಗಳನ್ನು, ಸನದು ಪಡೆದವರಲ್ಲಿ ಹೆಚ್ಚಿನ ಪಾಲು ಕನ್ನಡಿಗರದೇ ಆಗಿತ್ತು,

ಬ್ರಿಟಿಷರ ಆಡಳಿತದಲ್ಲಿಯಂತೂ ಇಡೀ ಕರ್ನಾಟಕವೇ 22 ಭಾಗಗಳಾಗಿ ಹರಿದು ಹಂಚಿ ಹೋಗಿತ್ತು, ಗಾಂಧೀಜಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾರತೀಯರೆಲ್ಲರೂ ಭಾಗವಹಿಸಿ ಜೀವದ ಹಂಗುದೊರೆದು ಹೋರಾಡಿ ಸ್ವಾತಂತ್ರ್ಯ ದೊರಕಿಸಿದ್ದೊಂದು 20ನೆಯ ಶತಮಾನದ ಐತಿಹಾಸಿಕ ಘಟನೆಯಾದರೆ, ಇನ್ನೊಂದು ಸ್ವಾತಂತ್ರ್ಯ ದೊರೆತ ನಂತರ ನಡೆದ ಭಾಷಾವಾರು ರಾಜ್ಯಗಳ ವಿಂಗಡಣೆಯಾಗಿದೆ. ಒಡೆದು ಹೋದ ಕನ್ನಡ ನಾಡನ್ನು ಒಂದುಗೂಡಿಸಿ ಅಖಂಡ ಕರ್ನಾಟಕವನ್ನಾಗಿ ಮಾಡಬೇಕೆಂಬುದೇ ಕನ್ನಡಿಗರೆಲ್ಲರ ಆಶಯವಾಗಿತ್ತು ಅದಕ್ಕಾಗಿ ಕರ್ನಾಟಕದ ಹಿರಿಯರು, ಚಿಂತಕರು ತಮ್ಮ ಜೀವವನ್ನೇ ಪಣಕ್ಕೆ ಹಚ್ಚಿ ಅಹರ್ನಿಸಿ ಹೋರಾಡತೊಡಗಿದರು. ಸಂಯುಕ್ತ ಕರ್ನಾಟಕವಾಗಬೇಕೆಂಬ ಕನ್ನಡಿಗರೆಲ್ಲರ ಮನದಾಳದ ಕೂಗು **'ಕರ್ನಾಟಕ ಏಕೀಕರಣ ಚಳುವಳಿ'** ಯಾಗಿ ಪರಿಣಮಿಸಿತು.

ಈ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಸೋಲ್ಲಾಪುರದ ಪಾತ್ರವು ಮಹತ್ತರವಾದುದು. ಕನ್ನಡ ಸಾಹಿತ್ಯ ಸಂಸ್ಕೃತಿಯನ್ನೊಳಗೊಂಡ ಗಂಡುಮೆಟ್ಟಿನ ಸ್ಥಳವಾದ ಸೋಲ್ಲಾಪುರಕ್ಕೆ 19ನೆಯ ಶತಮಾನದಲ್ಲಿ ಮರಾಠಿಗರು ಬಂದು ನೆಲೆಸಿದರು. ಮಾತೃಭಾಷಾಭಿಮಾನಿಗಳಾದ ಅವರು ಕನ್ನಡಿಗರಿಗೆ ಮರಾಠಿಯನ್ನು ಕಲಿಸಿದರೇ ಹೊರತು ಅವರೊಂದಿಗೆ ಕನ್ನಡವನ್ನು ಕಲಿತು ಒಂದಾಗಲಿಲ್ಲ. ಮುಂದೆ ಅನೇಕ ರಾಜಕೀಯ ಬದಲಾವಣೆಗಳಾದವು. ಎಲ್ಲೆಡೆ ಮರಾಠಿ ಪ್ರಸಾರ ಹೆಚ್ಚಾಗಿ ಆ ಭಾಷೆ ಬೆಳೆದು ಗಟ್ಟಿಯಾಗಿ ನೆಲೆಯೂರಿತು. ಇದರಿಂದ ಕನ್ನಡಿಗರಿಗೆ ಬೆಳೆಯುವ ಅವಕಾಶವಿಲ್ಲದೆ, ಅವರು ಎಲ್ಲ ರೀತಿಯಿಂದಲೂ ಹತ್ತಿಕ್ಕಲ್ಪಟ್ಟರು. ಇಷ್ಟಿದ್ದರೂ ಇಲ್ಲಿ ಕನ್ನಡದ ಸಾಂಸ್ಕೃತಿಕ ಬೇರುಗಳನ್ನು ಕಿತ್ತು ಹಾಕುವುದು ಸುಲಭಸಾಧ್ಯವಿಲ್ಲವೆಂದು ಮರಾಠಿಗರು ಮನಗಂಡಿದ್ದರು. ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಸಮಿತಿ (ಅಕರಾನಿ) ಯನ್ನು ಮಾಡಿ ಸರಕಾರದೆದುರು ತಮ್ಮ ಬೇಡಿಕೆಗಳನ್ನು ಮಂಡಿಸಲು ಯತ್ನ

ಮಾಡಿದರು ಇದರ ಅಧ್ಯಕ್ಷರನ್ನಾಗಿ "ಕರ್ನಾಟಕ ಏಕೀಕರಣ ಶಿಲ್ಪಿ' ಯೆಂದೆನಿಸಿಕೊಂಡ ಎಸ್. ನಿಜಲಿಂಗಪ್ಪರನ್ನು ಮಾಡಿ, ಹಳ್ಳಿಕೇರಿ ಗುದ್ದೆಪ್ಪ, ಸಿದ್ದಪ್ಪ ಕಂಬಳಿ, ಅದರಗುಂಚಿ ಶಂಕರಗೌಡ ಮುಂತಾದವರಿಂದ ಅಲ್ಲಲ್ಲಿ ಸಭೆಗಳು ನಡೆದು ಗೊತ್ತುವಳಿ ಪ್ರಕಟಿಸಿದರು.

ಮಹಾರಾಷ್ಟ್ರದ ನೇತಾರರು ಕೂಡ ದೂರ್ತತನದಿಂದ ಸೋಲ್ಲಾಪುರವು ಕರ್ನಾಟಕಕ್ಕೆ ಹೋಗಬಹುದೆಂದು, ಅದನ್ನು ಕೈಬಿಡಬಾರದೆಂದು ಒಳಗೊಳಗೆ ಅನೇಕ ತಂತ್ರಗಳನ್ನು ಹೆಣೆದಿದ್ದರು. ಅಲ್ಲದೆ ಅವರು ಕೂಡ ಸಂಯುಕ್ತ ಮಹಾರಾಷ್ಟ್ರ ಸಮಿತಿಯನ್ನು ಸ್ಥಾಪಿಸಿದ್ದರು.

1940 ರಿಂದಲೂ ಕನ್ನಡ ಸಾಹಿತ್ಯ ಪರಿಷತ್ತು, ಅಖಂಡ ಕರ್ನಾಟಕ ರಾಜ್ಯನಿರ್ಮಾಣ ಸಮಿತಿ ಮುಂತಾದವುಗಳು ಲೇಖನ, ಭಾಷಣಗಳ ಮೂಲಕ ಗಡಿನಾಡಿನ, ಒಳನಾಡಿನ ಹಳ್ಳಿ ಹಳ್ಳಿಗಳಲ್ಲಿಯೂ ಕರ್ನಾಟಕ ಏಕೀಕರಣಕ್ಕಾಗಿ ಕರೆ ಕೊಡುತ್ತ ಜನಜಾಗೃತಿ ತರಲು ಪ್ರಯತ್ನಿಸಿದವು. ಇದನ್ನು ಸೋಲ್ಲಾಪುರದಲ್ಲಿಯ ಪ್ರತಿಯೊಬ್ಬ ಕನ್ನಡಿಗರ ಕಿವಿಗಳನ್ನು ತಲುಪಿಸುವ, ಜಾಗೃತಿ ಮೂಡಿಸುವ ಕೆಲಸವನ್ನು ಇಲ್ಲಿ ಅನೇಕರು ಮಾಡಿದರು. ಅದರಲ್ಲಿ ಮುಂಚೂಣಿಯಲ್ಲಿದ್ದವರು ನಾಗಪಣ್ಣಾ, ಕಾಡಾದಿ, ಫುಲಾರಿ, ಷಡಕ್ಷರ ಸ್ವಾಮಿ, ಬಾಬಾ ಸಾಹೇಬ ವಾರದ ನಾಗಪ್ಪಣ್ಣ ಅಬ್ದುಲ್ಲಪುರಕರ, ಮಹಾಂತಪ್ಪ ತಾಳಿಕೋಟೆ, ಶಂಕರ ಮೂಗಿ, ಬ್ಯಾರಿಸ್ಟರ ಎಂ.ಎಸ್. ಸರ್ದಾರ, ಪಂ. ವರ್ಧಮಾನ ಶಾಸ್ತ್ರಿ, ಶ್ರೀ.ಎಚ್.ಕೆ. ಭಾರದ್ವಾಜ, ಕೆ.ಬಿ. ಪೂರ್ವಾಚಾರಿ, ಡಾ|| ಗಲಗಲಿ, ಡಾ|| ಬಬಲಾದಿ, ರಾಜಶೇಖರ ಮಡಕಿ, ಚೆನ್ನವೀರ ಕಲ್ಯಾಣಶೆಟ್ಟಿ, ಅಕ್ಕಲಕೋಟದ ಅಣ್ಣರಾವ ಮೋದಿ, ದುಧನಿಯ ಮಹಾಲಿಂಗ ಸ್ವಾಮಿಗಳು, ಶಿರವಳವಾಡಿಯ ಶರಣಪ್ಪ ತಾನವಡೆ, ಮಹಾಲಿಂಗಪ್ಪ ಶೀಲವಂತ, ಹಾಲಹಳ್ಳಿ ಮುಂತಾದವರು. ಇವರೆಲ್ಲರೂ ಕನ್ನಡ ಜಾಗೃತಿಯ ಕಹಳೆಯನ್ನು ಊದಿದರು.

1938ರಲ್ಲಿ ಅಖಿಲಭಾರತ ವೀರಶೈವ ಮಹಿಳಾ ಪರಿಷತ್ತಿನ ಅಧ್ಯಕ್ಷಸ್ಥಾನ ವಹಿಸಿಕೊಂಡು, ಕನ್ನಡಕ್ಕಾಗಿ ತನುಮನಧನದಿಂದ ದುಡಿದು ತಾಯಿ ಸ್ವರೂಪದಲ್ಲಿದ್ದ ಜಯದೇವಿತಾಯಿ ಲಿಗಾಡೆ ಅವರ ತಾಯಂದಿರಾದ ಸಂಗವ್ವ, ಬಸಮ್ಮ, ಗೌರಮ್ಮ, ಪಂಚವ್ವ ಸರ್ದಾರ, ಪ್ರಯಾಗಬಾಯಿ ಪಟ್ಟಣಶೆಟ್ಟಿ, ಮಹಾದೇವಿ ನಿಂಬರಗಿ ಮುಂತಾದ ಮಹಿಳೆಯರು ಕೂಡ ಕನ್ನಡ ಉಳಿಸಲು, ಬೆಳೆಸಲು ಪ್ರಯತ್ನಿಸಿ ಅಂದಿನ ದಿನಗಳಲ್ಲಿ ಸೋಲ್ಲಾಪುರದಲ್ಲಿ ಕನ್ನಡ ಸೇವೆ ಮಾಡಿದ್ದು ಸ್ತುತ್ಯಾರ್ಹವೆಂದೇ ಹೇಳಬೇಕು.

ಹೀಗೆ ಸೋಲ್ಲಾಪುರ ಕರ್ನಾಟಕವನ್ನು ಸೇರಬೇಕೆಂಬ ಏಕೈಕ ಉದ್ದೇಶದಿಂದ ಅಂದು ಸ್ತ್ರೀ-ಪುರುಷರೆನ್ನದೆ ಎಲ್ಲರೂ ಹಗಲುರಾತ್ರಿ ದುಡಿದು ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಭಾಗವಹಿಸಿದರು. ಇಂತಹ ಗಾಳಿ ಜೋರಾಗಿ ಬೀಸುತ್ತಿರುವಾಗ ಸಿದ್ದನಾಥ ಬಳ್ಳಾರಿ ಅವರು ಸೋಲ್ಲಾಪುರಕ್ಕೆ ಕಾಲಿಟ್ಟದ್ದೊಂದು ವಿಶೇಷ. ಅದೂ ಕನ್ನಡಿಗರೆಲ್ಲರ ಪುಣ್ಯವೆಂದೇ ಹೇಳಬೇಕು.

## ೧. ಡಾ|| ಸಿದ್ದನಾಥ ಬಳ್ಳಾರಿಯವರು ಸೊಲ್ಲಾಪುರಕ್ಕೆ ಆಗಮಿಸಿದ್ದು

ಭಾರತೀಯರು ಶತಮಾನಗಳ ವರೆಗೆ ದಾಸ್ಯದಡಿಯಲ್ಲಿ ಸಿಕ್ಕಾಗ ಅವರಿಗಾಗಿ ಗಾಂಧೀ ಸತ್ಯಾಗ್ರಹ ಸಮರವನ್ನೇ ಸಾರಿದರು. ಸಮಸ್ತ ಭಾರತವೇ ಆತನನ್ನು ಹಿಂಬಾಲಿಸಿತು. ಗಾಂಧೀವಾದಿಯಾಗಿ ಸಿದ್ದನಾಥರು ಆತನ ಪ್ರೇರಣೆ, ಪ್ರಭಾವಕ್ಕೊಳಗಾದರು. ಹಿಂದುಸೇವಾದಳದಲ್ಲಿ ತರಬೇತಿ ಹೊಂದಿ, ಕೊಟ್ಟೂರನ್ನು ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು **'ದೀನಸೇವಾಶ್ರಮ'** ಸ್ಥಾಪಿಸಲು ಕಾರಣರಾಗಿ ಸೇವಾತ್ಯಾಗ ಮನೋಭಾವದಿಂದ ಜನಮನಗೆದ್ದ ಸಿದ್ದನಾಥ ಅವರ ಜೀವನ ಪ್ರವಾಹವು ಬೇರೆ ತಿರುವನ್ನು ಪಡೆದುದೊಂದು ವಿಚಿತ್ರವೆಂದೇ ಹೇಳಬೇಕು. ಆದರೆ ಅದು ವಿಚಿತ್ರವಾದರೂ ಸತ್ಯವಾಗಿದೆ. ಮನುಷ್ಯನು ತಾನೊಂದು ಬಗೆದರೆ ದೈವ ಬೇರೊಂದು ಬಗೆಯಿತು ಎಂಬಂತಾಯಿತು.

ಇದಕ್ಕೆ ಅವರ ಕೌಟುಂಬಿಕ ಜೀವನದಲ್ಲಿ ನಡೆದ ದುರ್ಘಟನೆಯೇ ಕಾರಣವೆಂದು ಹೇಳಲಾಗುತ್ತಿದೆ. ಅದೆಂದರೆ ಅವರ ಪತ್ನಿ ಸುಶೀಲಾಬಾಯಿಯು ಆಕಸ್ಮಾತ್ತಾಗಿ ಮಡಿದುದು. ಸಂಸಾರದೊಂದಿಗೆ ಕೊನೆಯವರೆಗೂ ದೇಶಸೇವೆ, ನಾಡಸೇವೆ ಮಾಡುತ್ತ ಜೀವನ ಸಾಗಿಸಬೇಕೆಂದು ನಿರ್ಧಾರ ಮಾಡಿ ಮದುವೆಯಾಗಿದ್ದ ಬಳ್ಳಾರಿಯವರಿಗೆ ಹೆಂಡತಿಯ ಸಾವಿನಿಂದಾಗಿ ಜೀವನವೇ ನಿಸ್ಸಾರವೆನಿಸಿತು. ಇಬ್ಬರ ಗುರಿ, ಕಾರ್ಯ ವೈಖರಿ ಒಂದೇ ಆಗಿತ್ತು. ವೈದ್ಯಕೀಯ ಶಿಕ್ಷಣ ಮುಗಿಸಿಕೊಂಡು ಬಂದೊಡನೆ ವರ್ಧಾ ಮಹಿಳಾಶ್ರಮದಿಂದ ಪತ್ನಿಯನ್ನು ಕರೆದುಕೊಂಡು ಬಂದು ಹೊಸ ಸಂಸಾರ ಹೂಡಿದ್ದರು. ಮೊದಲ ಮಗು ಹುಟ್ಟಿದಾಗ ದಂಪತಿಗಳು ತುಂಬ ಸಂತೋಷದಿಂದ **'ಶಿವಾನಂದ'** ಎಂದು ಹೆಸರಿಟ್ಟರು. ಆದರೆ ಕಾಲಪುರುಷನಿಗೆ ಕರುಣೆ ಬರಬೇಕಲ್ಲ? ಅದು ಇನ್ನು ಒಂದು ವರ್ಷದ ಮಗುವಿರುವಾಗಲೇ ಸುಶೀಲಳ ಸಾವಿನ ಕರಾಳ ಛಾಯೆಯಿಂದ ದಿಗ್ಮೂಢರಾಗಿ ಅವರು ಬೆಳಕಿನ ಕಿರಣಗಳಿಗಾಗಿ ಅಲೆದಾಡುತ್ತಿದ್ದರು. ಚಿಕ್ಕ ಮಗು ಶಿವಾನಂದನ ಜವಾಬ್ದಾರಿಯನ್ನು ಸುಶೀಲಳ ತವರು ಮನೆಯವರು ವಹಿಸಿಕೊಂಡು ಸಲಹಲಾರಂಭಿಸಿದರು. ಸುಶೀಲಾ ಸಾಯುವಾಗ "ಎಂತಹ ಪ್ರಸಂಗ ಬಂದರೂ ಚಳುವಳಿಗಾರರಾಗಿ ದೇಶಕ್ಕಾಗಿ, ನಾಡು-ನುಡಿಗಾಗಿ ಸೇವೆ ಸಲ್ಲಿಸುವುದನ್ನು ಬಿಡಬೇಡಿರಿ" ಎಂದು ಹೇಳಿದ ಕೊನೆಯ ಮಾತು ಯಾವಾಗಲೂ ಅವರ ಕಿವಿಯಲ್ಲಿ ರಿಂಗಣಿಸುತ್ತಿತ್ತು.

ಸೋಲ್ಲಾಪುರದ ಇತಿಹಾಸದ ಪುಟಗಳನ್ನು ತಿರುವಿದಾಗ, ಬ್ರಿಟಿಷರಿಂದಲೇ 'ರಾವ್‌ಬಹದ್ದೂರ' ಎಂಬ ಗೌರವ ಪದವಿ ಪಡೆದ, ಜನರಿಂದ 'ಪುಣ್ಯಶ್ಲೋಕ' ಎಂದೆನಿಸಿಕೊಂಡ ವಾರದ ಮಲ್ಲಪ್ಪನವರ ಕೀರ್ತಿ ಎಲ್ಲೆಡೆ ಹಬ್ಬಿತ್ತು. ಸೊಲ್ಲಾಪುರವೆಂದರೆ ವಾರದ ಮಲ್ಲಪ್ಪನವರು, ವಾರದ ಮಲ್ಲಪ್ಪನವರೆಂದರೆ ಸೋಲ್ಲಾಪುರ ಎನ್ನುವಷ್ಟರ ಮಟ್ಟಿಗೆ ಅವರ ಪ್ರಭಾವವಿತ್ತು. ಸತತವಾಗಿ ಇಪ್ಪತ್ತೈದು ವರ್ಷಗಳ ವರೆಗೆ ಮಹಾನಗರ ಸಭೆಯ ಮಹಾಪೌರರಾಗಿದ್ದರು. ಅವರ ಒಬ್ಬನೇ ಒಬ್ಬ ಮಗ ಬಾಬಾ ಸಾಹೇಬ ಅವರ ಬೆಟ್ಟಿ ಸಿದ್ಧನಾಥರಿಗೆ ಹಿಂದಿನ ಜನ್ಮದ ಋಣಾನುಬಂಧವೋ

ಎಂಬಂತೆ ಆಯಿತು. ಮೃದುಮನಸಿನ ವಿಶಾಲ ಹೃದಯಿ ಬಾಬಾಸಾಹೇಬ ವಾರದ ಅವರು ಕನ್ನಡಿಗರ ಮೇಲಿಟ್ಟಿರುವ ಪ್ರೇಮಾಭಿಮಾನ ಮೆಚ್ಚುವಂತಹದು. ಅವರು ಸಿದ್ಧನಾಥರ ಹೃದಯ ಬೇಗುದಿಯನ್ನು ಅರಿತರು.

"ನಿಮ್ಮ ಸಮಸ್ಯೆಗೆ ಪರಿಹಾರ ತೋರಿ ಶಾಂತಿ-ಸಮಾಧಾನವನ್ನೀಯುವವನು, ಬೆಳಕಿನ ಮಾರ್ಗ ತೋರುವವನು ಸೊಲ್ಲಾಪುರ ಸಿದ್ದರಾಮೇಶ್ವರನೇ ಆಗಿದ್ದಾನೆ. ಅವನು ನೊಂದು ಬೆಂದವರ, ದುಃಖಿಗಳ ಕೈಯನ್ನು ಎಂದಿಗೂ ಬಿಡುವುದಿಲ್ಲ" ಎಂದು ಅವರು ಹೇಳಿ ಸಿದ್ದನಾಥರಿಗೆ ಸೋಲ್ಲಾಪುರಕ್ಕೆ ಬರಲು ಆಹ್ವಾನವನ್ನಿತ್ತರು. ಬಾಲ್ಯದಿಂದಲೂ ಸಿದ್ಧರಾಮೇಶ್ವರನ ಮೇಲೆ ಭಕ್ತಿ, ಶ್ರದ್ಧೆಯನ್ನಿಟ್ಟು ಅವರ ಪಾದವೇ ಗತಿಯೆಂದು ನಂಬಿದ ಸಿದ್ಧನಾಥ ಬಳ್ಳಾರಿಯವರು ಬಾಬಾಸಾಹೇಬ ವಾರದ ಅವರ ಈ ಆಹ್ವಾನವನ್ನು ಸ್ವೀಕರಿಸಿ, ತಮ್ಮ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ, ಕೊಟ್ಟೂರಿನ ಪರಿಸರ ಪರಿವಾರ ಬಿಟ್ಟು ಸೊಲ್ಲಾಪುರಕ್ಕೆ ಬಂದರು. ಅಷ್ಟೇ ಅಲ್ಲ, ಕೊನೆಯ ವರೆಗೂ ಅವರು ಅಲ್ಲಿಯೇ ನೆಲೆಸಿದರು.

## ೩. ವೈದ್ಯಾಧಿಕಾರಿಯಾಗಿ ಡಾ|| ಸಿದ್ದನಾಥ ಬಳ್ಳಾರಿಯವರು

"ಎತ್ತಣ ಮಾಮರ ಎತ್ತಣ ಕೋಗಿಲೆ
ಎತ್ತಣಿಂದೆತ್ತ ಸಂಬಂಧವಯ್ಯಾ?
ಎತ್ತಣ ನೆಲ್ಲಿಕಾಯಿ, ಎತ್ತಣ ಸಮುದ್ರದೊಳಗಣ ಉಪ್ಪು
ಎತ್ತಣಿಂದೆತ್ತ ಸಂಬಂಧವಯ್ಯಾ?
ಎತ್ತಣ ಗುರು ಎತ್ತಣ ಶಿಷ್ಯ
ಎತ್ತಣಿಂದೆತ್ತ ಸಂಬಂಧವಯ್ಯಾ? ಗುಹೇಶ್ವರ

ಎಂಬ ಅಲ್ಲಮಪ್ರಭುಗಳ ವಚನದಂತೆ ಹಗರಿಬೊಮ್ಮನಹಳ್ಳಿಯ ಸಿದ್ಧಪ್ಪ ಬಳ್ಳಾರಿ, ಡಾ|| ಸಿದ್ದನಾಥ ಬಳ್ಳಾರಿಯಾಗಿ 1946ರಲ್ಲಿ ಸೋಲ್ಲಾಪುರಕ್ಕೆ ಎತ್ತಣಿಂದೆತ್ತ ಸಂಬಂಧ ಎಂಬಂತೆ ಬಂದರು. ಮೊದಲು ಸಿದ್ದರಾಮೇಶ್ವರನ ದೇವಾಲಯಕ್ಕೆ ಬಂದು ಆತನ ದರ್ಶನ ಪಡೆದು ಪುನೀತರಾದರು. ಅಲ್ಲಿ ಎಂತಹ ಪ್ರಸಂಗ ಬಂದರೂ ಕನ್ನಡದ ಕೈಂಕರ್ಯವನ್ನು ಬಿಡಲಾರೆನೆಂದು ಸಂಕಲ್ಪ ತೊಟ್ಟರು.

ಮುಂದೆ ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಬಳ್ಳಾರಿ ಜಿಲ್ಲೆಯಲ್ಲೆಲ್ಲ ಸಂಚರಿಸಿ ಹರಿದ್ವಾರ, ಕಲಕತ್ತಾ ಮುಂತಾದೆಡೆಯಲ್ಲಿ ವೈದ್ಯಕೀಯ ಶಿಕ್ಷಣ ಪಡೆದು, ಅವರು ವೈದ್ಯರಾಗಿ ಸೊಲ್ಲಾಪುರದಲ್ಲಿಯ ಸಾಖರಪೇಠದಲ್ಲೇ ಆಸ್ಪತ್ರೆ ತೆರೆದು ತಮ್ಮ ಹೊಸ ವೃತ್ತಿಜೀವನ ಪ್ರಾರಂಭಿಸಿದರು.

ಮುಂದೆ ಸಿದ್ದರಾಮೇಶ್ವರರ ಕೃಪಾಶೀರ್ವಾದದಿಂದ ಹಾಗೂ ಬಾಬಾ ಸಾಹೇಬ ವಾರದ ಅವರ ಪ್ರಭಾವದಿಂದ ಡಾ|| ಸಿದ್ದನಾಥರಿಗೆ 1950ರಲ್ಲಿ ಮಹಾನಗರ ಪಾಲಿಕೆಯಲ್ಲಿ ವೈದ್ಯಾಧಿಕಾರಿಯಾಗಿ ನೌಕರಿ ದೊರೆಯಿತು. ಅಲ್ಲಿ ಅವರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿದ್ದರು. ಬಡವರ ಬಗೆಗೆ ಕರುಣೆ, ಅನುಕಂಪ ತೋರುವ ವೈದ್ಯರೆಂದು ರೋಗಿಗಳೆಲ್ಲ ಅವರೆಡೆಗೆ ಧಾವಿಸುತ್ತಿದ್ದರು. "ಜನಸೇವೆಯೇ ಜನಾರ್ಧನ ಸೇವೆ" ಯೆಂದು ತಿಳಿದು ರೋಗಿಗಳ ಸೇವೆಯನ್ನು ಮನಮುಟ್ಟಿ ಮಾಡುತ್ತಿದ್ದರು.

ಬೆಳಿಗ್ಗೆ ಮಹಾನಗರ ಪಾಲಿಕೆಗೆ ಹೋಗುವ ಮೊದಲು, ಅಲ್ಲಿಂದ ಬಂದ ನಂತರ ಸಾಖರಪೇಠಯ ಆಸ್ಪತ್ರೆಯಲ್ಲಿ ರೋಗಿಗಳನ್ನು ತಪಾಸಿಸುತ್ತಿದ್ದರು. ಅವರು ರೋಗಿಗಳ ಆರ್ಥಿಕ ಸ್ಥಿತಿ ನೋಡಿ ಹಣವನ್ನು ತೆಗೆದುಕೊಳ್ಳುತ್ತಿದ್ದರು. ಅತ್ಯಂತ ದಾರಿದ್ರ್ಯದ ರೇಖೆಯಲ್ಲಿರುವ ರೋಗಿಗಳಿಗೆ ಪುಕ್ಕಟೆಯಾಗಿ ಗುಣಪಡಿಸುತ್ತಿದ್ದರು.

ರೋಗಿಗಳು ಗುಣ ಹೊಂದಿ ನಗುನಗುತ್ತ ಹೋದಾಗಲೇ ಅವರಿಗೆ ಸಮಾಧಾನ ಶಾಂತಿ.

ಅಂದು ಹಳ್ಳಿಹಳ್ಳಿಗೂ ವೈದ್ಯರಿರುವುದು ಕಡಿಮೆಯೆಂದೇ ಹೇಳಬೇಕು. ಹೀಗಾಗಿ ರಜೆಯಿದ್ದರೂ ಅವರು ಸುಮ್ಮನೆ ಕೂಡುತ್ತಿರಲಿಲ್ಲ. ಸೊಲ್ಲಾಪುರದ ಸುತ್ತುಮುತ್ತಲಿನ ಹಳ್ಳಿಹಳ್ಳಿಗೆ ಹೋಗಿ ಬಡರೋಗಿಗಳನ್ನು ಪರೀಕ್ಷಿಸಿ, ಅವರಿಗೆ ಔಷದೋಪಚಾರ ಮಾಡಿ ಗುಣಪಡಿಸುತ್ತಿದ್ದರು. ಅಷ್ಟೇ ಅಲ್ಲ, ಸೊಲ್ಲಾಪುರದ ಸಮೀಪ ಕರ್ನಾಟಕದ ಗಡಿಯಲ್ಲಿರುವ

ಲಚ್ಯಾಣ, ಚಡಚಣಗಳ ವರೆಗೂ ಹೋಗಿ ವೈದ್ಯಕೀಯ ಸೇವೆ ಸಲ್ಲಿಸುತ್ತಿದ್ದರೆಂದು ಇಂದಿಗೂ ಆ ಊರ ಜನರು ಹೇಳಿಕೊಳ್ಳುತ್ತಾರೆ. ಹನ್ನೆರಡನೆಯ ಶತಮಾನದಲ್ಲಿ ಆಗಿ ಹೋಗಿರುವ ಶರಣ ವೈದ್ಯ ಸಂಗಣ್ಣ ಅವರ ಉದಾತ್ತ ವಚನಗಳು ಯಾವಾಗಲೂ ದಾರಿದೀಪದಂತೆ ಅವರ ಕಣ್ಣ ಮುಂದಿರುತ್ತಿದ್ದವು.

## ೪. ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ದುಮುಕಿದುದು

ಸೋಲ್ಲಾಪುರಕ್ಕೆ ಬಂದ ನಂತರ ನೌಕರಿ, ಮನೆಯಷ್ಟೇ ನೋಡಿಕೊಂಡು ಇದ್ದು ಬಿಡುವ ಸ್ವಭಾವ ಸಿದ್ಧನಾಥರದಾಗಿರಲಿಲ್ಲ, ಕುಳಿತಾಗ, ನಿಂತಾಗ, ಮಲಗಿದ್ದಾಗ 'ಕನ್ನಡಕೆ ಹೋರಾಡು ಕನ್ನಡದ ಕಂದ' ಎಂದು ಚಿಕ್ಕವರಿದ್ದಾಗ ಹಾಡಿದ ಹಾಡು ಹೃದಯದಲ್ಲಿ ಪ್ರತಿಧ್ವನಿಸುತ್ತಿತ್ತು. ಸೊಲ್ಲಾಪುರ ಜಿಲ್ಲೆಯಲ್ಲಿ ಎಲ್ಲೆಡೆ ಅಡ್ಡಾಡಿದರೂ ಕನ್ನಡದ ಸ್ಥಿತಿ ಅಧೋಗತಿಗಿಳಿಯುತ್ತಿರುವುದು ಅವರಿಗೆ ಎದ್ದು ಕಾಣುತ್ತಿತ್ತು. ಹೀಗಾಗಿ ಬಳ್ಳಾರಿಯಲ್ಲಿ ತೆಲುಗರಿಂದ, ಸೊಲ್ಲಾಪುರದಲ್ಲಿ ಮರಾಠಿಗರಿಂದ ಆಗುತ್ತಿರುವ ಅನ್ಯಾಯಕ್ಕೆ ಅವರು ಮಮ್ಮಲ ಮರುಗಿದರು.

ಅಖಂಡ ಕರ್ನಾಟಕವಾಗಬೇಕೆಂಬ ಕನಸು ಹೊತ್ತು ಕನ್ನಡಿಗರೆಲ್ಲ 'ಕರ್ನಾಟಕ ಏಕೀಕರಣ ಚಳುವಳಿ' ಯನ್ನು ಕೈಗೊಂಡಿದ್ದರು. "ಸೊಲ್ಲಾಪುರವನ್ನು ಕನ್ನಡಿಗರು ಎಂದೆಂದೂ ಬಿಟ್ಟು ಕೊಡಬಾರದು. ಅದು ಮೊದಲಿನಿಂದಲೂ ಕನ್ನಡಿಗರ ಸೊತ್ತು. ಸಿದ್ಧರಾಮೇಶ್ವರನಿರುವ ಪುಣ್ಯಪಾವನ ಕ್ಷೇತ್ರ. ಅದು ಅಖಂಡ ಕರ್ನಾಟಕದಲ್ಲಿ ಸೇರಬೇಕೆಂಬ ಹಂಬಲ ಹೊತ್ತು ಡಾ|| ಸಿದ್ಧನಾಥ ಬಳ್ಳಾರಿ ಅವರು ಚಳುವಳಿಗೆ ಸೇರಿದರು. ಅಷ್ಟೇ ಅಲ್ಲ ಕನ್ನಡದ ಯಾವುದೇ ಕಾರ್ಯಕ್ಕೆ ಕಂಕಣಬದ್ಧರಾಗಿ, ತಮ್ಮ ಜೀವವನ್ನೇ ಪಣವಾಗಿಟ್ಟು ಹೋರಾಡಲು ನಿಶ್ಚಯಿಸಿದರು.

ಆಗ ಅವರು ಮಾಡಬೇಕಾದ ಮೊದಲ ಕೆಲಸಗಳು ಈ ಕೆಳಗಿನಂತಿದ್ದವು.

1. ಸೊಲ್ಲಾಪುರದ ಕನ್ನಡಿಗರನ್ನೆಲ್ಲ ಒಂದುಗೂಡಿಸುವುದು.

2. ಸಭೆ ಸಮ್ಮೇಳನಗಳನ್ನು ಏರ್ಪಡಿಸುವುದು.

3. ಸರಕಾರಕ್ಕೆ ತಮ್ಮ ಬೇಡಿಕೆಗಳನ್ನು ಮುಂದಿಡಲು ಗೊತ್ತುವಳಿಗಳನ್ನು ತಯಾರು ಮಾಡಿ ಮನವಿಗಳನ್ನು ಸಲ್ಲಿಸುವುದು. ಅದಕ್ಕಾಗಿ ಅವರು ಈಗಾಗಲೇ ಅಲ್ಲಿ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಭಾಗಿಯಾಗಿರುವ ಕನ್ನಡಿಗರೆಲ್ಲರನ್ನು ಸ್ವತಃ ಬೆಟ್ಟಿಯಾಗಿ, ಅವರೊಂದಿಗೆ ಕೈ ಕೂಡಿಸುವ ವಿಚಾರ ಮಾಡಿದರು. .

ಅಂದು ಸೋಲ್ಲಾಪುರದಲ್ಲಿಯಲ್ಲದೆ ಇಡೀ ಕನ್ನಡ ನಾಡಿನಲ್ಲಿಯೇ ಜಯದೇವಿತಾಯಿ ಲಿಗಾಡೆಯವರದು ಬಹಳ ದೊಡ್ಡ ಹೆಸರು, ಅವರಿಗೆ ಬೆಂಬಲವನ್ನು ನೀಡುತ್ತ ಅನೇಕರು ಕನ್ನಡದ ಕೆಲಸ-ಕಾರ್ಯಗೈಯುತ್ತಿದ್ದರು. ಅವರೊಂದಿಗೆ ಸಭೆ ಏರ್ಪಡಿಸಿ, ಜಯದೇವಿತಾಯಿಯವರು ಅನೇಕ ನಿರ್ಣಯಗಳನ್ನು ತೆಗೆದುಕೊಳ್ಳುತಿದ್ದರು. ಅವರ ಮನೆ **'ಜಯನಿಕೇತನ'**ವು ಕನ್ನಡಿಗರೆಲ್ಲರ ಆಶ್ರಯ ತಾಣವಾಗಿತ್ತು. ಕನ್ನಡ ನಾಡಿನಿಂದ ಬರುವ ಸಾಹಿತಿ, ಕವಿ, ಕಲೆಗಾರ, ಮಂತ್ರಿಮಹೋದಯರೆಲ್ಲರೂ ಅಲ್ಲಿಯೇ ಆಶ್ರಯ ಪಡೆಯುತ್ತಿದ್ದರು.

ಒಳನಾಡಿನಲ್ಲಿ ನಡೆಯುವ ಎಲ್ಲ ಘಟನೆಗಳೊಂದಿಗೆ, ಕರ್ನಾಟಕ ಏಕೀಕರಣ ಚಳುವಳಿಯ ತೀವ್ರ ಸ್ವರೂಪವು ಕೂಡ ಅಲ್ಲಿಂದಲೇ ತಿಳಿದು ಬರುತ್ತಿತ್ತು. ಅದಕ್ಕಾಗಿ ಜಯದೇವಿತಾಯಿಯವರು ಜಯನಿಕೇತನದಲ್ಲಿಯೇ **'ಕನ್ನಡ ಕೋಟೆ'** ಯೆಂಬ ಸಂಘವನ್ನು ಕಟ್ಟಿ, ಅದರ ಮೂಲಕ ಕನ್ನಡದ ಕಾರ್ಯಗಳೆಲ್ಲವನ್ನು ನಡೆಸುತ್ತಿದ್ದರು.

ಇದನ್ನೆಲ್ಲ ಡಾ|| ಸಿದ್ಧನಾಥ ಬಳ್ಳಾರಿಯವರು ಅರಿತು ಮೊದಲು ಜಯದೇವಿ ತಾಯಿ ಲಿಗಾಡೆಯವರಿಗೆ ಬೆಟ್ಟಿಯಾದರು. ಅವರಿಗೆ ಡಾ|| ಸಿದ್ಧನಾಥ ಬಳ್ಳಾರಿ ಅವರನ್ನು ನೋಡಿ ಹೊಸ ಶಕ್ತಿ ಸಂಚಲನವಾದಂತಾಯಿತು. ಅವರು ಬಹಳ ಸಂತೋಷಗೊಂಡು ತಮ್ಮ ಆಪ್ತವಲಯದಲ್ಲಿ ಒಬ್ಬರನ್ನಾಗಿಸಿಕೊಂಡರು. ಶಂಕರ ಮುಗಿ, ನಾಪ್ಪಣ್ಣಾ ಕಾಡಾದಿ, ರಾಜಶೇಖರ ಮಡಕಿ, ಮಹಾದೇವ ರಾಂಪುರೆ, ಕೆ.ಬಿ. ಪೂರ್ವಾಚಾರಿ, ಡಾ|| ಬಬಲಾದಿ, ಚೆನ್ನವೀರ ಕಲ್ಯಾಣಶೆಟ್ಟಿ, ಬ್ಯಾರಿಸ್ಟರ ಎಂ.ಎಸ್. ಸರ್ದಾರ ಮುಂತಾದ ಪ್ರಮುಖ ಹೋರಾಟಗಾರರನ್ನಲ್ಲದೆ, ಸೊಲ್ಲಾಪುರ ಜಿಲ್ಲೆಯ ಹಳ್ಳಿ ಹಳ್ಳಿಯಲ್ಲಿ ತಿರುಗಿ ಕನ್ನಡ ಕಾರ್ಯಕರ್ತರ ಪರಿಚಯವನ್ನು ಮಾಡಿಕೊಂಡರು. ಅಲ್ಲದೆ ಅವರೊಂದಿಗೆ ಚರ್ಚಿಸಿದರು. ಪ್ರತಿಯೊಬ್ಬ ಕನ್ನಡಿಗರಿಗೂ ಕನ್ನಡ ಕಾರ್ಯದಲ್ಲಿ ಸಹಕರಿಸಲು ವಿನಂತಿಸಿಕೊಂಡರು.

ಕನ್ನಡಿಗರಲ್ಲಿ ಒಗ್ಗಟ್ಟನ್ನುಂಟು ಮಾಡುವುದೇ ಅವರ ಪ್ರಥಮ ಉದ್ದೇಶವಾಗಿತ್ತು. ಅಲ್ಲದೆ ಸೊಲ್ಲಾಪುರದಲ್ಲಿ ನಿರಂತರವಾಗಿ ಕನ್ನಡ ಉಳಿದು ಬೆಳೆದು ಬರಬೇಕಾದರೆ, ಮೊದಲು ಮಕ್ಕಳಿಗೆ ಕನ್ನಡದಲ್ಲಿ ಶಿಕ್ಷಣ ನೀಡಬೇಕು. ಅದಕ್ಕಾಗಿ ಕನ್ನಡ ಶಾಲೆಗಳನ್ನು ತೆರೆಯಬೇಕು ಎಂದು ಹೇಳಿ **'ಕನ್ನಡ ಶಿಕ್ಷಣ ಸಮಿತಿ'**ಯನ್ನು ಸ್ಥಾಪಿಸಲು ಕಾರಣರಾದರು. ಅಲ್ಲದೆ ಕೊನೆಯವರೆಗೂ ಅದರ ಕಾರ್ಯದರ್ಶಿಯಾಗಿ ನಿಷ್ಠೆಯಿಂದ ಕನ್ನಡಸೇವೆ ಸಲ್ಲಿಸಿದರು.

# ೫. ಕನ್ನಡ ಶಾಲೆಗಳು

ಮಾತೃಭಾಷಾ ಶಿಕ್ಷಣಕ್ಕೆ ಮಹಾತ್ಮಾ ಗಾಂಧೀಜಿ, ರವೀಂದ್ರನಾಥ ಠಾಕೂರ, ಸ್ವಾಮಿ ವಿವೇಕಾನಂದ ಮುಂತಾದ ಮಹಾನ್ ವ್ಯಕ್ತಿಗಳು ಪ್ರಾಧಾನ್ಯತೆಯನ್ನು ನೀಡಿದ್ದಾರೆ. “ಮಗುವಿಗೆ ಉಣಿಸುವಾಗ ಮೊದಲ ತುತ್ತು ರುಚಿಯಾಗಿದ್ದರೆ ಮಾತ್ರ ಊಟ ಮಾಡುವುದು ಇಲ್ಲದಿದ್ದರೆ ಇಲ್ಲ. ಹಾಗೆಯೇ ಮಾತೃಭಾಷೆಯಲ್ಲಿ ಶಿಕ್ಷಣ ದೊರೆತರೆ ಮಾತ್ರ ಮಗುವು ಮುಂದಿನದೆಲ್ಲ ಸಲೀಸಾಗಿ ಕಲಿಯಲು ಸಾಧ್ಯವಾಗುತ್ತದೆ” ಎಂದು ರವೀಂದ್ರನಾಥ ಠಾಕೂರ ಅವರು ಒಂದೆಡೆ ಹೇಳಿದ್ದಾರೆ. ಇದನ್ನು ಅರಿತುಕೊಂಡು ಡಾ॥ ಸಿದ್ಧನಾಥ ಬಳ್ಳಾರಿ ಅವರು ಸೋಲ್ಲಾಪುರ ಜಿಲ್ಲೆಯ ಕನ್ನಡ ಶಿಕ್ಷಣದ ದಾರುಣ ಪರಿಸ್ಥಿತಿ ಕಂಡು 'ಕನ್ನಡ ಶಿಕ್ಷಣ ಸಮಿತಿ' ಯನ್ನು ರಚಿಸಿ, ಅದರ ಮೂಲಕ ಕನ್ನಡ ಶಾಲೆಗಳನ್ನು ಹೆಚ್ಚು ಹೆಚ್ಚು ತೆರೆಯಲು ಪ್ರಯತ್ನಿಸಿದರು. ಕನ್ನಡ ಮಾಧ್ಯಮಿಕ ಶಾಲೆಗಳಿಗಾಗಿಯೂ ಮಹಾರಾಷ್ಟ್ರ ಸರಕಾರದೊಂದಿಗೆ ಅವರು ಹೋರಾಟ ಮಾಡಿದರು.

**“ಕನ್ನಡದ ಹುಲಿ”** ಎಂದು ಕರೆಯಿಸಿಕೊಂಡ ಡೆಪ್ಯೂಟಿ ಚೆನ್ನಬಸಪ್ಪನವರು 1856ರಲ್ಲಿ ಮೊಟ್ಟಮೊದಲು ಕನ್ನಡದ ಕಹಳೆಯನ್ನು ಊದಿದರು. ಅಂದು ಅವರು ಮುಂಬೈ ಕರ್ನಾಟಕದಲ್ಲಿ ಕೇವಲ 34 ಸಂಖ್ಯೆಯಲ್ಲಿದ್ದ ಕನ್ನಡ ಶಾಲೆಗಳನ್ನು 668ಕ್ಕೆ ಏರಿಸಿದ್ದು ಸಾಮಾನ್ಯ ಸಂಗತಿಯಲ್ಲ. ಅದು ಅವರ ಕರ್ತೃತ್ವ ಶಕ್ತಿಯ ಕುರುಹು. ಅವರ ನಂತರ ಬರಬರುತ್ತ ಕನ್ನಡ ಶಾಲೆಗಳು ಕಡಿಮೆಯಾಗತೊಡಗಿದವು. 169-1889ರಲ್ಲಿ ಮೊಟ್ಟಮೊದಲು ಸೊಲ್ಲಾಪುರದಲ್ಲಿ ಸ್ತ್ರೀ ಶಿಕ್ಷಣದ ಮಹತ್ವ ತಿಳಿದು “ವೀರಶೈವ ಮಹಿಳಾ ಜ್ಞಾನಮಂದಿರ” ಸ್ಥಾಪನೆಯಾಯಿತು. ಅದೂ ಕನ್ನಡಿಗರಾದ ವಾರದ ಮಲ್ಲಪ್ಪನವರ ಮನೆಯಲ್ಲಿ ಅವರು ಅದಕ್ಕೆ ಎಲ್ಲ ರೀತಿಯಿಂದಲೂ ಸಹಾಯ ಸಹಕಾರ ನೀಡಿದರು. ಅಂದು ಶಿಕ್ಷಣವೇ ಹೆಚ್ಚು ಇರಲಾರದ ಕಾಲದಲ್ಲಿ ಸ್ತ್ರೀ ಶಿಕ್ಷಣ ನೀಡಿ, ಅವರನ್ನು ಜಾಗೃತಗೊಳಿಸಿದ ಶ್ರೇಯಸ್ಸು ಬಸಮ್ಮ, ಗೌರಮ್ಮ ವಾರದ, ಸಂಗಮ್ಮ ಮಡಕಿ, ಪಂಚವ್ವ ಸರ್ದಾರ, ಪ್ರಯಾಗಬಾಯಿ ಪಟ್ಟಣ ಶೆಟ್ಟಿ ಮುಂತಾದವರು. ಇದೇ ಮುಂದೆ 1937ರಲ್ಲಿ ಹೊಸ ಕಟ್ಟಡದಲ್ಲಿ ಜಯದೇವಿತಾಯಿಯವರ ಮೇಲ್ವಿಚಾರಣೆಯಲ್ಲಿ ಮುಂದುವರಿಯಿತು.

ಡಾ॥ ಸಿದ್ದನಾಥರು ಬಳ್ಳಾರಿಯಿಂದ ಸೊಲ್ಲಾಪುರಕ್ಕೆ ಬಂದಾಗ “ಜಯದೇವಿತಾಯಿ ಕನ್ಯಾಶಾಲೆ” ಯೆಂದಾಗಿ ನಡೆಯುತ್ತಿದ್ದಿತು. ಮುಂದೆ ಅವರು ಅದರ ಮೂಲಕ ಜಯದೇವಿತಾಯಿಯವರೊಂದಿಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೆಂದು ತಿಳಿದು ಬರುತ್ತದೆ.

ಅಂದಿನ ಕಾಲದಲ್ಲಿ ಸೊಲ್ಲಾಪುರವು ಔದ್ಯೋಗಿಕ ಕೇಂದ್ರವಾಗಿದ್ದು, ಸಾಕಷ್ಟು ಗಿರಣಿಗಳು ಬೆಳೆದು ಬಂದಿದ್ದವು. ಅವುಗಳಲ್ಲಿ ಕೆಲಸ ಮಾಡುವ ಕಾರ್ಮಿಕರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದವರು ಕನ್ನಡಿಗರೇ. ಅದಕ್ಕಾಗಿ ಡಾ॥ ಸಿದ್ದನಾಥ ಅವರು ಪ್ರಹ್ಲಾದ ಜೋಶಿ, ಷಡಕ್ಷರಿ ಸ್ವಾಮಿ ಮುಂತಾದವರೊಂದಿಗೆ ಅವರ ಮನೆ ಮನೆಗೆ ಹೋಗಿ ಕನ್ನಡ ಶಾಲೆಗೆ ಅವರ ಮಕ್ಕಳನ್ನು ಸೇರಿಸಲು ಪ್ರೋತ್ಸಾಹಿಸುತ್ತಿದ್ದರು. ಅಲ್ಲದೆ ಸಾಕುವ ಶಕ್ತಿಯಿರದೆ ಕಾರ್ಮಿಕ ಪಾಲಕರು ತಮ್ಮ

ಮಕ್ಕಳನ್ನು ಗಿರಣಿಗಳಲ್ಲಿ ಚಿಂದಿಯನ್ನಾಯುವ, ಇದ್ದಲಿಗಳನ್ನಾಯುವ ಕೆಲಸಕ್ಕೆ ಹಚ್ಚುತ್ತಿದ್ದರು. ಅಂತಹ ತಂದೆ ತಾಯಿಗಳಿಗೆ ತಿಳಿ ಹೇಳಿ ಕನ್ನಡ ಶಾಲೆಗಳಿಗೆ ಕಳುಹಿಸುವಂತೆ ಅವರು ಮಾಡಿದರು. ಕನ್ನಡಿಗರು ಹೆಚ್ಚಿರುವ ಸ್ಥಳಗಳಾದ ಮಡಿಕಿವಸ್ತಿ, ಸಖಾರಾಮವಸ್ತಿ, ಜುಮ್ಮಾ ವಸ್ತಿ, ವಾರದ ಮಡ್ಡಿ. ರೇವಣ್ಣಸಿದ್ದೇಶ್ವರ ಗುಡಿಯ ಸುತ್ತಲಿನ ಸ್ಥಳ ಸಾಖರಪೇಠ ಮುಂತಾದೆಡೆ ಕನ್ನಡ ಶಾಲೆಗಳನ್ನು ತೆರೆಯುವಂತೆ ಮಾಡಿದರು. ಸಾಖರಪೇಠಯ ಕನ್ನಡ ಹೆಣ್ಣುಮಕ್ಕಳ ಶಾಲೆಯಲ್ಲಿ 300 ಹುಡುಗಿಯರನ್ನು ಕೂಡಿಸಿದ್ದರಿಂದ ಹಾಜರಾತಿ ಸಂಖ್ಯೆ ಹೆಚ್ಚಿ 8 ಜನ ಶಿಕ್ಷಕರಾಗಿ ಪ್ರಹ್ಲಾದ ಜೋಶಿಯವರು ಮುಖ್ಯಾಧ್ಯಾಪಕರಾದರು. ಪ್ರಹ್ಲಾದ ಜೋಶಿಯವರನ್ನು 'ಸಿದ್ಧನಾಥರ ಮರಿ' ಯೆಂದೇ ಎಲ್ಲರೂ ಕರೆಯುತ್ತಿದ್ದರು. ಡಾ|| ಸಿದ್ದನಾಥರ ಜೊತೆಗೆ ಕನ್ನಡಕ್ಕಾಗಿ, ಕನ್ನಡ ಶಾಲೆಗಳಿಗಾಗಿ ಹೋರಾಡಿದ ವ್ಯಕ್ತಿಗಳಲ್ಲಿ ಒಬ್ಬರಾದ ಅವರು ಈಗ 80 ವರ್ಷದವರು. ಅವರ ಸಂದರ್ಶನಕ್ಕೆಂದು ಅವರ ಮನೆಗೆ ಹೋದಾಗ, ಪ್ರಹ್ಲಾದ ಜೋಶಿಯವರು ಕಣ್ಣೀರುದುಂಬಿ ಹೇಳುತ್ತಿದ್ದರು. "ಡಾ|| ಸಿದ್ದನಾಥರು ರಾತ್ರಿ ಮಲಗಿ ವಿಶ್ರಾಂತಿ ತೆಗೆದುಕೊಳ್ಳುವಾಗ ಕೂಡ ಅವರ ಮನೆಗೆ ಕನ್ನಡದ ಕೆಲಸಕ್ಕಾಗಿ ಹೋಗುತ್ತಿದ್ದೆನು. ಆಗ ಅವರು ಸ್ವಲ್ಪವೂ ಬೇಸರಿಸದೆ, ಎದ್ದು ಗೂಟಕ್ಕೆ ಹಾಕಿದ ಗುಂಡಗಡಿಗೆಯನ್ನು ಕೊರಳಲ್ಲಿ ಹಾಕಿಕೊಂಡು ಹೊರಟು ಬಿಡುತ್ತಿದ್ದರು. ಎಲ್ಲಿಯಾದರೂ ಕನ್ನಡಕ್ಕೆ ಅನ್ಯಾಯವಾಗುತ್ತಿದ್ದರೆ, ಅಲ್ಲಿಗೆ ತಮ್ಮ ಸ್ವಂತ ಖರ್ಚಿನಲ್ಲಿ ಹೋಗಿ ಬಗೆಹರಿಸುತ್ತಿದ್ದರು. ಅವರಂತಹ ಕನ್ನಡ ಅಭಿಮಾನಶೀಲರನ್ನು ನಾನೆಲ್ಲಿಯೂ ನೋಡಿಲ್ಲ. ನಮ್ಮ ಆಯುಷ್ಯ ಕಲ್ಯಾಣ ಮಾಡಿದವರು. ಡಾ|| ಸಿದ್ದನಾಥ ಬಳ್ಳಾರಿಯವರೆಂದರೆ ಕನ್ನಡ, ಕನ್ನಡವೆಂದರೆ ಡಾ|| ಸಿದ್ದನಾಥ ಬಳ್ಳಾರಿಯವರಾಗಿದ್ದರೆಂದು ಹೇಳಬಹುದು". ಸಾಖರಪೇಠೆಯ ಕನ್ನಡ ಹೆಣ್ಣು ಮಕ್ಕಳ ಶಾಲೆಯಿಂದ ಪ್ರಹ್ಲಾದ ಜೋಶಿಯವರು 1991ರಲ್ಲಿ ನಿವೃತ್ತಿ ಹೊಂದಿದಾಗ, ಗುರುಸ್ವರೂಪದಲ್ಲಿದ್ದ ಡಾ|| ಸಿದ್ದನಾಥ ಬಳ್ಳಾರಿಯವರ ಸ್ಮರಣಾರ್ಥವಾಗಿ 1000 ರೂ.ಗಳನ್ನು ಇಟ್ಟಿದ್ದಾರೆ. ಆ ಶಾಲೆಯಲ್ಲಿ ಈಗಲೂ ಪ್ರತಿವರ್ಷ ಮೊದಲ ನಂಬರ ಪಡೆದ 7ನೆಯ ಇಯತ್ತೆಯ ಕನ್ನಡ ವಿದ್ಯಾರ್ಥಿಗೆ. ಅವರ ಹೆಸರಿನಲ್ಲಿ ಬಹುಮಾನ ರೂಪದಲ್ಲಿ ಕೊಡುತ್ತಾರೆ.

ಮಹಾರಾಷ್ಟ್ರ ಸರಕಾರ ನಿಯಮದ ಪ್ರಕಾರ, ಯಾವುದೇ ಭಾಷೆಯ ಶಾಲೆ ಮೂರುವರ್ಷ ನಡೆದ ತರುವಾಯ ಅದನ್ನು ಮತ್ತು ಅದರಲ್ಲಿರುವ ಶಿಕ್ಷಕರನ್ನು ಸರಕಾರವು ಸ್ವಾಧೀನ ತೆಗೆದುಕೊಂಡು ನಡೆಸಬೇಕು ಎಂಬ ಕರಾರು ಇದೆ. ಆದರೆ ಸೋಲ್ಲಾಪುರದಲ್ಲಿ ಕನ್ನಡ ಶಾಲೆಗಳು 25 ವರ್ಷಗಳಿಗಿಂತಲೂ ಅಧಿಕವಾಗಿ ಸುಸೂತ್ರವಾಗಿ ನಡೆದರೂ, ಅವುಗಳನ್ನು ತಮ್ಮ ಕಕ್ಷೆಯಲ್ಲಿ ತೆಗೆದುಕೊಳ್ಳಲಿಲ್ಲ. ಇದರಿಂದ ದಕ್ಷಿಣ ಸೋಲ್ಲಾಪುರ ತಾಲ್ಲೂಕಿನಲ್ಲಿಯ ಸುಮಾರು 50 ಶಾಲೆಗಳನ್ನು ನಡೆಸುವುದು ಕಷ್ಟವಾಗಹತ್ತಿತು. ಶಿಕ್ಷಕರು ಸಂಬಳವಿಲ್ಲದೆ ಉಪವಾಸ ವನವಾಸಗಳನ್ನು ಅನುಭವಿಸುತ್ತ ನಡೆಸುತ್ತ ಬಂದರೂ, ಕೊನೆಗೆ ಶಾಲೆಗಳನ್ನು ಮುಚ್ಚಬೇಕಾಯಿತು.

ಮಕ್ಕಳು ಅತ್ತಾಗ ತಾಯಿ ಹಾಲು ಕುಡಿಸುತ್ತಾಳೆ, ಹಾಗೆಯೇ ಕನ್ನಡ ಶಾಲೆಗಳನ್ನು ಉಳಿಸಬೇಕೆಂದಾಗ ನಮ್ಮ ಕೂಗು ಸರಕಾರಕ್ಕೆ ತಲುಪಿಸದೇ ಬಿಡಬಾರದು ಎಂದುಕೊಂಡರು. ಡಾ|| ಸಿದ್ಧನಾಥ ಬಳ್ಳಾರಿಯವರು. ಅದಕ್ಕಾಗಿ ಕರ್ನಾಟಕ ಏಕೀಕರಣ ಸಮಿತಿಯಿಂದ ಹಿಡಿದು, ಕೊನೆಗೆ ಕೇಂದ್ರ ಸರಕಾರ ಹಾಗು ಅಲ್ಪ ಭಾಷಿಕ ಸಮಿತಿಯ ವರೆಗೆ

ದೂರು ಒಯ್ದಾಗ ಮಹಾರಾಷ್ಟ್ರ ಸರಕಾರಕ್ಕೆ ಕೆಲವು ಶಾಲೆಗಳನ್ನಾದರೂ ತನ್ನ ಕಕ್ಷೆಯಲ್ಲಿ ತೆಗೆದುಕೊಳ್ಳುವುದು ಅನಿವಾರ್ಯವಾಯಿತು. ಆ ರೀತಿ ಉಳಿಸಿ ಬೆಳೆಸಿದವುಗಳಲ್ಲಿ ಸೊಲ್ಲಾಪುರ ಮಹಾನಗರ ಸಭೆಗಳಲ್ಲಿನ ಹದಿನಾಲ್ಕು ಕನ್ನಡ ಪ್ರಾಥಮಿಕ ಶಾಲೆಗಳು ಒಳಗೊಂಡಿವೆ.

ಕರ್ನಾಟಕ ಏಕೀಕರಣ ಚಳುವಳಿಯ ಮೊದಲ ಹೋರಾಟ ಪ್ರಾಥಮಿಕ ಶಾಲೆಗಳ ಸ್ಥಾಪನೆಯಾಗಿದೆ. ಆದರೆ ಟೊಂಗೆ ಟೊಂಗೆಯನ್ನು ಕಡಿಯದೆ ಕನ್ನಡದ ಬೇರನ್ನು ಕಿತ್ತು, ತಮ್ಮ ಭಾಷೆಯ ಬೇರನ್ನು ಚಾಚಲು ವ್ಯವಸ್ಥಿತವಾಗಿ ಮರಾಠಿಗರು ಅಣಿಯಾಗಿದ್ದರು. ಅದಕ್ಕಾಗಿ ಡಾ॥ ಸಿದ್ಧನಾಥ ಬಳ್ಳಾರಿ ಅವರು **'ಕನ್ನಡ ಹಿತವರ್ಧಕ ಸಂಘ'** ವನ್ನು ಕಟ್ಟಿ ಅದರ ಮೂಲಕ ಅನೇಕ ಕಾರ್ಯಗೈದು ಗಡಿನಾಡಿನಲ್ಲಿ ಕನ್ನಡ ಶಾಲೆಗಳು ಅಲುಗಾಡದೆ ಗಟ್ಟಿಯಾಗಿ ನೆಲೆಯೂರಿ ನಿಲಬೇಕೆಂಬುದೇ ಅವರ ಮನದಾಳದ ಇಚ್ಛೆಯಾಗಿದ್ದು, ಆ ಪ್ರಕಾರ ಅವಿರತ ಪ್ರಯತ್ನ ನಡೆಸಿದರು. ಇದರಿಂದ ಕೆಲವು ಪ್ರಾಥಮಿಕ ಶಾಲೆಗಳನ್ನಾದರೂ ಉಳಿಸಿ ಬೆಳೆಸುವಲ್ಲಿ ಯಶಸ್ವಿಯಾದರೆಂದೇ ಹೇಳಬೇಕು.

ರ್‍ಯಾಂಗ್ಲರ್ ಡಿ.ಸಿ. ಪಾವಟೆ ಅವರು ಮುಂಬೈಯಲ್ಲಿ ಡಿ. ಆಯ್. ಪಿ ಆಡಳಿತಾಧಿಕಾರಿಯಾಗಿ ನೇಮಿಸಲ್ಪಟ್ಟಾಗ ಕನ್ನಡಾಭಿಮಾನಿಗಳಾದ ಅವರನ್ನು ಕೂಡ ಡಾ॥ ಸಿದ್ಧನಾಥ ಅವರು ಬೆಟ್ಟಿಯಾಗಿ ಸೋಲ್ಲಾಪುರ ಜಿಲ್ಲೆಯಲ್ಲಿಯ ಕನ್ನಡ ಶಾಲೆಗಳ ಸ್ಥಿತಿಗತಿಯನ್ನು ವಿವರಿಸಿದರು. ಅವರು ಕೂಡ ಕಣ್ಣಾರೆ ಕಂಡು ಮರುಗಿದರು. ಅವರಿದ್ದಾಗ ಅನೇಕ ಶಾಲೆಗಳನ್ನು ಡಾ॥ ಸಿದ್ಧನಾಥರ ಹೇಳಿಕೆಯಿಂದ ತೆರೆದರು. ಅಷ್ಟೇ ಅಲ್ಲ ಅವುಗಳನ್ನು ಸರಕಾರದ ಕಕ್ಷೆಯಲ್ಲಿ ಬರುವಂತೆ ಮಾಡಿದರು. ಅದಕ್ಕಾಗಿ ಗಡಿನಾಡ ಕನ್ನಡ ಶಾಲೆಗಳ ಶಿಕ್ಷಕರು ಕೃತಜ್ಞತೆಯಿಂದ ರ್‍ಯಾಂಗ್ಲರ್, ಡಿ.ಸಿ.ಪಾವಟೆಯವರನ್ನು, ಡಾ॥ ಸಿದ್ಧನಾಥ ಬಳ್ಳಾರಿಯವರನ್ನು ಪ್ರಾತಃಸ್ಮರಣೀಯರೆಂದು ಇಂದಿಗೂ ನೆನೆಯುತ್ತಾರೆ.

ಪ್ರತಿಭಾವಂತ ಗಡಿನಾಡ ವಿದ್ಯಾರ್ಥಿಗಳು ಆರ್ಥಿಕವಾಗಿ ಹಿಂದುಳಿದು ಬಿ.ಇ. (B.E), ಎಂ.ಬಿ.ಬಿ.ಎಸ್ (M.B.B.S) ಕಲಿಯಲು ಸಾಧ್ಯವಾಗದಿದ್ದರೆ, ಅಂತಹವರಿಗಾಗಿ ರಾಜ್ಯಮಟ್ಟದವರೆಗೆ ಹೋರಾಡಿ, 'ಗಡಿನಾಡ ಮೀಸಲಾತಿ' ಗಾಗಿ ಕಾಯ್ದಿರಿಸಿದ ಸ್ಥಳವನ್ನು ಕೊಡುವ ವ್ಯವಸ್ಥೆ ಮಾಡಿಸಿದ್ದಾರೆ. ಹೀಗೆ ಗಡಿನಾಡಿನ ಅನೇಕ ವಿದ್ಯಾರ್ಥಿಗಳಿಗಾಗಿ ಸ್ವಾರ್ಥ ಭಾವವಿಲ್ಲದೆ ಕರ್ನಾಟಕ ಸರಕಾರದ ಮೀಸಲಾತಿ ಕೊಡಿಸುವ ವ್ಯವಸ್ಥೆಯನ್ನು ಅವರು ಮಾಡಿದ್ದಾರೆ. ಹೀಗೆ ತಮ್ಮ ಕೈಯಿಂದ ಹಣ ಖರ್ಚು ಮಾಡಿಯಾದರೂ, ಕನಿಷ್ಟ ವರ್ಷಕ್ಕೆ ಹತ್ತಾರು ವಿದ್ಯಾರ್ಥಿಗಳಿಗಾದರೂ ಇದರ ಲಾಭ ತಟ್ಟುವಂತೆ ಮಾಡಿದ್ದಾರೆ. ಹೀಗಾಗಿ ಸಾಕಷ್ಟು ವಿದ್ಯಾರ್ಥಿಗಳು ಮೀಸಲಾತಿಯ ಲಾಭವನ್ನು ಅವರ ಕಾಲದಲ್ಲಿ ಪಡೆದರು. ಇದು ಕೂಡ ಅವರು ಒಂದು ಕಲ್ಯಾಣಕಾರ್ಯವೆಂದೇ ಬಗೆದಿದ್ದರು.

# ೬. ಕನ್ನಡ ಶಾಲೆಗಳ ಪಠ್ಯಪುಸ್ತಕಗಳು

ಮಹಾರಾಷ್ಟ್ರ - ಕರ್ನಾಟಕ ಗಡಿವಿವಾದದಿಂದಲೋ ಅಥವಾ ಅಲ್ಪಭಾಷಿಕ ಕನ್ನಡಿಗರೆಂಬ ಉಪೇಕ್ಷೆ ಭಾವನೆಯಿಂದಲೋ ಕನ್ನಡಿಗರ ಸಮಸ್ಯೆಗಳಿಗೆ, ಬೇಡಿಕೆಗಳಿಗೆ ಮಹಾರಾಸ್ತ್ರ ಸರಕಾರ ಸ್ಪಂದಿಸುತ್ತಿರಲಿಲ್ಲ. ಅವರಿಗೆ ಘಟನಾತ್ಮಕ ಸವಲತ್ತುಗಳನ್ನು ಕೊಡಬೇಕಾದುದು ಕ್ರಮಪಾಪ್ರ ಎಂಬ ವಿಚಾರವನ್ನು ಮಹಾರಾಷ್ಟ್ರ ಸರಕಾರಕ್ಕೆ ತಂದು ಕೊಟ್ಟ ಶ್ರೇಯಸ್ಸು ಬಳ್ಳಾರಿಯವರಿಗೆ ಸಲ್ಲತಕ್ಕದ್ದು ಎಂದು ಅವರನ್ನು ಕುರಿತು ಆರ್.ಟಿ. ಮಜ್ಜಿಗೆಯವರು ಹೇಳಿದ್ದಾರೆ.

ಭಾಷಾವಾರು ಪ್ರಾಂತ ಚಳುವಳಿಯ ಮುಂಚೂಣಿಯಲ್ಲಿ ಸೋಲ್ಲಾಪುರ, ಅಕ್ಕಲಕೋಟ ಮುಂತಾದ ಭಾಗಗಳು ಕರ್ನಾಟಕಕ್ಕೆ ಸೇರುವವು ಎಂದು ಗಡಿಭಾಗಗಳಲ್ಲಿ ಕನ್ನಡ ಶಾಲೆಗಳು ನೂರಾರು ಸಂಖ್ಯೆಯಲ್ಲಿ ಬೆಳೆದು ನಿಂತವು. ಆದರೆ ಸಿದ್ಧನಾಥ ಬಳ್ಳಾರಿ ಅವರು ಹೇಳುವಂತೆ ಸುಮಾರು 22 ವರ್ಷ ಆ ಶಾಲೆಗಳಿಗೆ ಪಠ್ಯಪುಸ್ತಕ ಕೊಡದೆ ಕೇವಲ ದೊಡ್ಡಿಗಳಲ್ಲಿಯ ಕುರಿಗಳಂತೆ ನೋಡಿಕೊಳ್ಳುತ್ತಿದ್ದರು. ಡಾ॥ ಸಿದ್ಧನಾಥ ಬಳ್ಳಾರಿ ಅವರು ಡಾ॥ ಜಯದೇವಿತಾಯಿ ಲಿಗಾಡೆ ನಾಗಪ್ಪಣ್ಣ ಕಾಡಾದಿ, ಬ್ಯಾರಿಸ್ಟರ ಎಂ.ಎಸ್.ಸರ್ದಾರ, ಚೆನ್ನವೀರ ಕಲ್ಯಾಣಶೆಟ್ಟಿ, ಫುಲಾರಿ, ಪ್ರಹ್ಲಾದ ಜೋಶಿ, ಸ್ವಾಮಿ ಮುಂತಾದವರೊಂದಿಗೆ ಸಾಕಷ್ಟು ಪ್ರಯತ್ನಪಟ್ಟರೂ ಮಹಾರಾಷ್ಟ್ರ ಸರಕಾರ ಅದಕ್ಕೆ ಜಗ್ಗಲಿಲ್ಲ, ಬಗ್ಗಲಿಲ್ಲ.

ಕೊನೆಯದಾಗಿ ಗೋವಾ ಕಾಂಗ್ರೆಸ್ಸಿನ ಮುಕ್ಕಾಮಿನಲ್ಲಿದ್ದ ಅಂದಿನ ಪ್ರಧಾನಮಂತ್ರಿಗಳಾಗಿದ್ದ ಇಂದಿರಾಗಾಂಧಿಯವರು ಸೋಲ್ಲಾಪುರಕ್ಕೆ ಬರುವವರಿದ್ದರು. ಅವರಿಗೆ ಬೆಟ್ಟಿಯಾಗಲು ಕರ್ನಾಟಕ ಏಕೀಕರಣ ಸಮಿತಿಯ ಶಿಷ್ಯಮಂಡಳದೊಡನೆ ಡಾ॥ ಸಿದ್ಧನಾಥ ಬಳ್ಳಾರಿ ಅವರು ಹೋಗಿ ನಿವೇದನೆಯನ್ನು ಸಲ್ಲಿಸಿದರು. ಅಲ್ಲದೆ ಅವರು ಮಹಾರಾಷ್ಟ್ರದಲ್ಲಿ ಕನ್ನಡ ಅಲ್ಪಭಾಷಿಕರಿಗಿರುವ ಸಂಕಷಗಳನ್ನು ಮನಗಾಣಿಸಿ ಕೊಟ್ಟರು. ಮುಖ್ಯವಾಗಿ ಇಲ್ಲಿಯ ಕನ್ನಡ ಮಕ್ಕಳಿಗೆ ಪಠ್ಯ ಪುಸ್ತಕಗಳು ದೊರೆಯದೆ ತೊಂದರೆಯಾಗಿದೆ ಎಂದು ಹೇಳಿದರು. ಡಾ॥ ಸಿದನಾಥರು. ಆಗ ಶ್ರೀಮತಿ ಇಂದಿರಾ ಗಾಂಧಿಯವರು ಅಲ್ಲಿಯೇ ಇದ್ದ ಮಹಾರಾಷ್ಟ್ರದ ಮುಖ್ಯಮಂತ್ರಿ ವಸಂತರಾವ್ ನಾಯಕರನ್ನು ಉದ್ದೇಶಿಸಿ **"ನಿಮ್ಮ ರಾಜ್ಯದಲ್ಲಿಯ ಕನ್ನಡ ಅಲ್ಪಭಾಷಿಕರ ಮಕ್ಕಳಿಗೆ ಕನ್ನಡ ಪಠ್ಯಪುಸ್ತಕಗಳನ್ನು ಒದಗಿಸದಿದ್ದರೆ ಮತ್ತೇನನ್ನು ಒದಗಿಸಬಲ್ಲಿರಿ"** ಎಂದು ಪ್ರಶ್ನಿಸಿದರು. ಆಗ ಅವರು ನಿರುತ್ತರರಾಗಿ ತಗ್ಗಿಸಿದ ತಲೆಯನ್ನು ಮೇಲೆತ್ತಲಿಲ್ಲವಂತೆ.

ಈ ಘಟನೆ ನಡೆದ ಸ್ವಲ್ಪ ದಿನಗಳಲ್ಲಿಯೇ ಮಹಾರಾಷ್ಟ್ರದಲ್ಲಿಯ ಶಾಲಾಮಕ್ಕಳಿಗೆ ಕನ್ನಡ ಪಠ್ಯಪುಸ್ತಕಗಳು ದೊರಕಿದವು ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಇದರಿಂದ ಮಕ್ಕಳೊಂದಿಗೆ, ಗುರುವಿನಲ್ಲಿಯೂ ಕನ್ನಡ ಕಲಿಸುವಿಕೆಯಲ್ಲಿ ಆಸಕ್ತಿ ಮೂಡಿತೆಂದು ಹೇಳಬಹುದು.

ಮುಂದೆ ಮಹಾರಾಷ್ಟ್ರ ಸರಕಾರವು 'ಬಾಲಭಾರತಿ'ಯ ಮೂಲಕ ಅನೇಕ ಪಠ್ಯಪುಸ್ತಕಗಳನ್ನು ಹೊರಡಿಸಿದ ಮೇಲೆ ಇಂದು ಅವುಗಳ ತೊಂದರೆ ವಿದ್ಯಾರ್ಥಿಗಳಿಗೆ ಕಡಿಮೆಯಾಗಿದೆ.

ಕನ್ನಡ ಪುಸ್ತಕ ಪ್ರಾಧಿಕಾರವು ಗಡಿನಾಡಿನ ಶಾಲೆಗಳ ವಿದ್ಯಾರ್ಥಿಗಳಿಗಾಗಿ ಪುಸ್ತಕ ವಿತರಿಸುವುದನ್ನು ಕಾಣುತ್ತೇವೆ. ಮಹಾರಾಷ್ಟ್ರದ ಗಡಿಭಾಗಗಳಿಗೆ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ॥ ಸಿದ್ಧಲಿಂಗಯ್ಯ, ಸದಸ್ಯರಾದ ಎ.ಕೆ. ರಾಮೇಶ್ವರ ಮುಂತಾದವರು ದಕ್ಷಿಣ ಸೋಲ್ಲಾಪುರ ತಾಲ್ಲೂಕಿನ ಒಳಸಂಗದಲ್ಲಿ ಪುಸ್ತಕ ವಿತರಿಸುವ ಕಾರ್ಯಕ್ರಮವನ್ನು ೨೦೦೯ ರಲ್ಲಿ ಹಮ್ಮಿಕೊಂಡಿದ್ದರು. ಹೀಗೆಯೇ ಪ್ರತಿ ವರ್ಷವೂ ಪುಸ್ತಕ ಪ್ರಾಧಿಕಾರವು ಗಡಿನಾಡಿನ ಕನ್ನಡ ಶಾಲೆಗಳಿಗೆ ಪುಸ್ತಕ ವಿತರಿಸುವುದು ಸ್ತುತ್ಯಕಾರ್ಯವಾಗಿದೆ.

## ೬. ಕಾನಡಿ - ಕನ್ನಡವಾದುದು

'ಕನ್ನಡಂ ಕತ್ತುರಿಯಲ್ತೆ' ಎಂದು ಮುದ್ದಣನಿಂದ ಹೊಗಳಿಸಿಕೊಂಡ ಮಧುರ, ಸುಂದರ, ಲಲಿತವಾಗಿರುವ ಕನ್ನಡವನ್ನು ಯಾರಾದರೂ 'ತೆ ಕಾನಡಿ ಲೋಕ ಆಹೆ' ಎಂದು ಅವಹೇಳನ ಮಾಡಿ ನುಡಿದರೆ ಸಿದ್ದನಾಥ ಬಳ್ಳಾರಿಯವರಿಗೆ ಸಹಿಸುವುದಾಗುತ್ತಿರಲಿಲ್ಲ. ಆಂಧ್ರ - ಕರ್ನಾಟಕ ಗಡಿಭಾಗವಾದ ಬಳ್ಳಾರಿಯಲ್ಲಿಯೂ ಸ್ವಾತಂತ್ರ್ಯ ಸಂಗ್ರಾಮದೊಂದಿಗೆ ಕನ್ನಡ ಚಳುವಳಿಯಲ್ಲಿಯೂ ಭಾಗವಹಿಸುತ್ತ ಬಂದ ಸಿದ್ದನಾಥ ಅವರಿಗೆ ಮಹಾರಾಷ್ಟ್ರ - ಕರ್ನಾಟಕದ ಗಡಿಭಾಗದಲ್ಲಿ ಸೊಲ್ಲಾಪುರ ಕನ್ನಡಿಗರಾಗಿ ಬಾಳುವ ಸ್ಥಿತಿಯು ಬಂದಿದ್ದು ವಿಧಿಯ ವಿಪರ್ಯಾಸವೆನ್ನಬಹುದು.

ಭಾರತೀಯ ರಾಜ್ಯಘಟನೆಯಲ್ಲಿಯ 14 ಭಾಷೆಗಳಲ್ಲಿ ಕರ್ನಾಟಕದಲ್ಲಿಯ ಕನ್ನಡವು, ಮಹಾರಾಷ್ಟ್ರದಲ್ಲಿಯ ಮರಾಠಿಯು ಸೇರಿಕೊಂಡಿವೆ. ಹೀಗಿರುವಾಗ ಕನ್ನಡವನ್ನು ಮರಾಠಿ ಭಾಷಿಕರು ಮಹಾರಾಷ್ಟ್ರ ಶಾಸನ, ಮರಾಠಿ ವೃತ್ತಪತ್ರ ಮುಂತಾದವುಗಳಲ್ಲಿ 'ಕಾನಡಿ' ಎಂದು ಅವಹೇಳನ ಮಾಡಿ ಬರೆಯುತ್ತ, ನುಡಿಯುತ್ತ ಬಂದಿರುವುದು ಸಿದ್ದನಾಥ ಅವರಿಗೆ ಸರಿ ಬರಲಿಲ್ಲ. ಕನ್ನಡಿಗರಾದರೂ ಇದರ ವಿರುದ್ಧ ಮಾತನಾಡದೆ ನಿರ್ಲಕ್ಷ್ಯವಾಗಿ ಉಳಿದದ್ದು ನೋಡಿ ಅವರು ಬಹಳ ನೊಂದುಕೊಂಡರು. ಆ ಶಬ್ದವನ್ನು ವಿಶ್ಲೇಷಿಸಿ ನೋಡಿದಾಗ, 'ಕಾನಡಿ' ಎಂಬ ಪದವು 'ಏನೋ ಅನಾಡಿ' ಎಂದಾಗುತ್ತದೆಯಾದ್ದರಿಂದ ಅದು ಹೀನ ಅರ್ಥವನ್ನು ಕೊಡುತ್ತದೆ" ಎಂದು ಸಿದ್ಧನಾಥ ಬಳ್ಳಾರಿಯವರೇ ಒಂದೆಡೆ ಹೇಳಿದ್ದಾರೆ. ಆದ್ದರಿಂದ ಅವರಿಗೆ ಈ 'ಕಾನಡಿ' ಎಂಬ ನುಡಿ ಸಹನವಾಗಲಿಲ್ಲ.

ಮಹಾರಾಷ್ಟ್ರ ಸರಕಾರಕ್ಕೆ, ಪತ್ರಿಕೆಗಳಿಗೆ, ಸಂಘ ಸಂಸ್ಥೆಗಳಿಗೆ ಪತ್ರದ ಮೂಲಕ ಅವರು ವಿನಂತಿಸಿದರೂ ಏನೂ ಪ್ರಯೋಜನವಾಗಲಿಲ್ಲ. ಮಹಾರಾಷ್ಟ್ರ ಸರಕಾರದ ಭಾಷಾ ನಿರ್ದೇಶಕರನ್ನು **(Director of Marathi Language)** ಉದ್ದೇಶಿಸಿ "ಕನ್ನಡವನ್ನು, ಕನ್ನಡವೆಂದೇ ಬರೆದು ಉಚ್ಚರಿಸಲು ಆದೇಶ ಕೊಡಬೇಕಾಗಿಯೂ, 'ಕಾನಡಿ' ಎಂಬುದು ತಪ್ಪು ಹಾಗು ಹೀನ ಅರ್ಥ ಕೊಡುವಂತಹದಾಗಿದೆ" ಎಂದು ಪತ್ರ ಬರೆದರು. ಇಂತಹ ನಾಲ್ಕೈದು ಪತ್ರಗಳನ್ನು ಬರೆದರೂ ಅದಕ್ಕೆ ಉತ್ತರ ಬರಲಿಲ್ಲ. ಇದನ್ನು ಕಂಡು ಸಿದ್ದನಾಥ ಅವರು ಕೊನೆಯದಾಗಿ "ನೀವು ಮೇಲಿನಂತೆ ಆದೇಶವೀಯದಿದ್ದರೆ ನಾವು ಅನಿವಾರ್ಯವಾಗಿ ಮಾನನಷ್ಟಕ್ಕಾಗಿ ಕೋರ್ಟಿನ ಕಟ್ಟೆ ಹತ್ತಬೇಕಾದೀತು" ಎಂದು ಪತ್ರದಲ್ಲಿ ಸ್ಪಷ್ಟವಾಗಿ ಸೂಚಿಸಿದ್ದರು.

ಈ ಪತ್ರಕ್ಕೆ ಮಾತ್ರ ಅವರಿಗೆ "ಕನ್ನಡವನ್ನು ಬರೆದು ಉಚ್ಚರಿಸುವೆವು" ಎಂಬ ಅನುಕೂಲಕರವಾದ ಉತ್ತರ ಬಂದಿತು. ಆ ರೀತಿಯ ಪತ್ರಿಕಾ ಪ್ರಕಟಣೆಯೂ ಕೂಡ ಅದೇ ದಿನ ಬಂದಿತು. ಆ ರೀತಿಯ ಆದೇಶವನ್ನು ಒಂದಲ್ಲದೆ ಸಲ ಸಮಯದ ಅಂತರದಲ್ಲಿ 3 ಸಲ ಪತ್ರಿಕೆಯಲ್ಲಿ ಪ್ರಸಿದ್ಧಿಸಿದರು. ಆದರೂ ಕೂಡ ಸಿದ್ಧನಾಥ ಅವರಿಗೆ ಮಹಾರಾಷ್ಟ್ರದ ಜನರು 'ಕನ್ನಡ' ನುಡಿಯನ್ನು ಉಪೇಕ್ಷೆ ಮಾಡಿ 'ಕಾನಡಿ' ಎಂದೇ ಬಳಸುವುದು ಕಂಡು ಬಂದಿತು. ಅದಕ್ಕಾಗಿ ಅವರು ಕೊನೆಗೆ ಅಂದಿನ ಮಹಾರಾಷ್ಟ್ರದ ಮುಖ್ಯಮಂತ್ರಿಗಳಾದ ವಸಂತರಾವ್ ನಾಯಕ ಅವರಿಗೂ ಭಾಷಾ

ನಿರ್ದೇಶಕರಿಗೆ ಪತ್ರ ಬರೆದಂತೆಯೇ ಬರೆದರು. ಮುಖ್ಯಮಂತ್ರಿಗಳು ಕೂಡ ಮೂರು ಸಾರಿ ಜಾಹೀರ ರೀತಿಯಿಂದ ಪ್ರಕಟಪಡಿಸಿದರು. ಮಹಾರಾಷ್ಟ್ರ ಶಾಸನವು ಇನ್ನು ಮುಂದೆ 'ಕಾನಡಿ' ಎಂದು ಬರೆಯುವುದನ್ನು ಬಿಟ್ಟು 'ಕನ್ನಡ ಎಂದು ಬರೆದು ಉಚ್ಚರಿಸಬೇಕೆಂದು ಗೆಜೆಟಿಯರ್‌ನಲ್ಲಿ ಆದೇಶವಿತ್ತಿತು.

ಅವರು ಕೆಚ್ಚಿನಿಂದ ಪತ್ರಮುಖಿ ದೀರ್ಘ ಹೋರಾಟ ಮಾಡಿದ, ಅವರ ಶ್ರಮ ಸಾರ್ಥಕವಾಯಿತು. ಅದರ ಪರಿಣಾಮವಾಗಿ ಎಲ್ಲಾ ಕ್ಷೇತ್ರದಲ್ಲಿಯೂ ಕನ್ನಡವೆಂದು ಬರೆದು ಉಚ್ಚರಿಸುವುದು ರೂಢಿಯಾಗಹತ್ತಿತು.

“ಡಾ|| ಸಿದ್ಧನಾಥ ಬಳ್ಳಾರಿ ಅವರ ಈ ಕಾರ್ಯಪ್ರಯತ್ನ ಕ್ಷುದ್ರವೆಂದು ಕಾಣಬಹುದು. ಇಡೀ ಮಹಾರಾಷ್ಟ್ರದಲ್ಲಿಯ ಮರಾಠಿ ಜನಾಂಗ 'ಕಾನಡಿ' ಎಂದು ಬಳಸುತ್ತ ಬಂದದ್ದನ್ನು 'ಕನ್ನಡ' ವೆಂದು ನುಡಿದು ಬರೆಯಲು ಹಚ್ಚುವುದು ಸಾಮಾನ್ಯವಾದುದಲ್ಲ ಡಾ|| ಬಳ್ಳಾರಿಯವರಿಗೆ ಮಾತ್ರ ಇದು ಮಹಾರಾಷ್ಟ್ರದಲ್ಲಿ ಕನ್ನಡನಾಡು ನುಡಿ ಸೇವೆಯಲ್ಲಿ ಅರ್ಪಿಸಿದ ಒಂದು ಪುಷ್ಪದಳ ಮಾತ್ರ ಎಂಬ ಕಿಂಕರ ಭಾವನೆ” ಎಂದು ಶ್ರೀ ಆರ್. ಟಿ. ಮಜ್ಜಿಗೆ ಅವರು ಹೇಳುತ್ತಾರೆ.

## ೮. ಜ್ವಲಂತ ಸಮಸ್ಯೆಯಾಗಿ ಬೆಳಗಾವಿ

ಮಹಾರಾಷ್ಟ್ರ - ಕರ್ನಾಟಕ ಗಡಿವಿವಾದದ, ಪ್ರಪಿತಾಮಹನೆನಿಸಿದ ಶ್ರೀ ಯಶವಂತರಾವ ಚವ್ಹಾಣರು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಾದ ಹೊಸದರಲ್ಲಿ ಬೆಳಗಾವಿ, ನಿಪ್ಪಾಣಿಗಳಿಗೆ ಹೋಗಿ ಅಲ್ಲಿನ ಸ್ಥಿತಿಯನ್ನು ತಿಳಿದುಕೊಂಡರು. ಅಲ್ಲದೆ ಮಹಾರಾಷ್ಟ್ರದಲ್ಲಿ ಅವುಗಳ ವಿಲೀನಕ್ಕೆ ಚಳುವಳಿ ನಡೆಸಲು ಪ್ರಚೋದನೆಯಿತ್ತರು. ಅದಾದ ಸ್ವಲ್ಪ ಕಾಲದಲ್ಲಿಯೇ ಅವರು ಸೊಲ್ಲಾಪುರ ನಗರಕ್ಕೆ ಬೆಟ್ಟಿ ಕೊಟ್ಟರು.

ಆಗ ಒಂದು ಸಾರ್ವಜನಿಕ ಸಭೆಯಲ್ಲಿ "ನೀವು ನಿಪ್ಪಾಣಿ, ಬೆಳಗಾವಿಗಳನ್ನು ಮಹಾರಾಷ್ಟ್ರಕ್ಕೆ ಬೇಡುತ್ತಿರುವಿರಿ, ಸೊಲ್ಲಾಪುರ, ಅಕ್ಕಲಕೋಟಗಳ ವಿಷಯಕ್ಕೆ ನಿಮ್ಮ ಅಭಿಪ್ರಾಯವೇನು?" ಎಂದು ಪ್ರಶ್ನಿಸಲಾಯಿತು. ಅದಕ್ಕೆ ಉತ್ತರವಾಗಿ ಥಟ್ಟನೆ ಅವರು "ಮನ್ ಥೆಯಿನ್ ಪಣ ಚಿಂದಿ ದೇತ ನಾಹಿ" (ಪ್ರಾಣ ಕೊಟ್ಟೆನಾದರೂ ತುಣುಕುಬಟ್ಟೆ ಕೊಡಲಾರೆ) ಎಂದು ಸಭೆಯಲ್ಲಿಯೇ ಗಟ್ಟಿಯಾಗಿ ಹೇಳಿದರು. ಡಾ|| ಸಿದ್ದನಾಥರು ಮರುದಿವಸವೇ ಕರ್ನಾಟಕ ಏಕೀಕರಣ ಸಮಿತಿಯ ವತಿಯಿಂದ ಮುಖ್ಯಮಂತ್ರಿ ಯಶವಂತರಾವ್ ಚವ್ಹಾಣ ಅವರ ಆ ಮಾತನ್ನು ನಿಷೇಧಿಸಿ ಸಾರ್ವಜನಿಕ ಸಭೆ ಕೈಕೊಂಡರು. ಅಲ್ಲದೆ ಒಂದು ನಿವೇದನೆಯನ್ನು ತಯಾರಿಸಿದರು. ಅವರು ಗ್ರಾಮೀಣ ಭಾಗದ ಪ್ರವಾಸದಿಂದ ಮರಳಿದ ತರುವಾಯ ಆ ನಿವೇದನೆಯನ್ನು ಕೊಡಲಾಯಿತು. ಅದರಲ್ಲಿ ಮುಖ್ಯವಾಗಿ ಅನ್ಯರಿಗೆ ಬರತಕ್ಕದ್ದನ್ನು ಕೊಡಲು ತಯಾರಿರದವರಿಗೆ ತಮ್ಮದೆಂಬುದನ್ನು ಬೇಡಲು ಯಾವ ನೈತಿಕ ಬಲವಿದೆ?" ಎಂದು ಮುಂತಾಗಿ ಅನೇಕ ಪ್ರಶ್ನೆಗಳನ್ನು ಡಾ|| ಸಿದ್ಧನಾಥ ಬಳ್ಳಾರಿ ಅವರು ಕೇಳಿದ್ದರು.

ಮುಖ್ಯಮಂತ್ರಿ ಯಶವಂತ ಚವ್ಹಾಣ ಅವರು ಅದನ್ನು ಓದುತ್ತ ಹೋದಂತೆ ಅವರ ಕಣ್ಣು, ಮುಖ ಕೆಂಪೇರಿದವು. ಅತಿ ಸಿಟ್ಟಿಗೆದ್ದರೂ ಕೂಡ ಹೆಚ್ಚಿಗೇನನ್ನು ಮಾತನಾಡದೆ "ನಾನು ನಿಮ್ಮ ಮನವಿಯನ್ನು ಸ್ವೀಕರಿಸಿದ್ದೇನೆ. ಇಷ್ಟೇ ನಾನು ಹೇಳಬಲ್ಲೆ. ನನ್ನನ್ನು ಹೆಚ್ಚಿನ ಚರ್ಚೆಗೆ ಎಳೆಯಬೇಡಿ. ಈ ಬೆಟ್ಟಿ ಸಂದರ್ಭದ ವಿಷಯವನ್ನು ಪತ್ರಿಕೆಗಳಿಗೂ ಕಳುಹಿಸಬೇಡಿ" ಎಂದರು. ಮತ್ತೆ ಅವರು ಒಂದು ನಿಮಿಷ ಕೂಡ ನಿಲ್ಲದೆ ಸಿಟ್ಟಿನ ಭರದಲ್ಲಿ ತರಾತುರಿಯಿಂದ ಎದ್ದು ಹೋದರು. ಮುಂದೆ ಅವರಿಗೆ ಗೃಹಮಂತ್ರಿಯಾಗುವ ಅವಕಾಶ ದೊರೆಯಿತು.

ಮೇಲಿನ ಘಟನೆ ನಡೆದು ಏಳು ವರ್ಷಗಳಾದರೂ ಅವರು ಸೋಲ್ಲಾಪುರಕ್ಕೆ ಕಾಲಿಟ್ಟಿರಲಿಲ್ಲ. ಸೊಲ್ಲಾಪುರದಲ್ಲಿಯ ಒಂದು ಹಾಯಸ್ಕೂಲಿನ ಜ್ಯುಬಿಲಿ ಉತ್ಸವಕ್ಕೆ ಅವರು ಬಂದಿದ್ದರು. ಆಗ ಶ್ರೀ ಯಶವಂತ ಚವ್ಹಾಣರು ಗೃಹಮಂತ್ರಿಯಾಗಿದ್ದರು. ಅಲ್ಪ ಭಾಷಿಕರ ಸಮಸ್ಯೆಗಳು ಅವರ ಆಡಳಿತದಲ್ಲಿ ಬರುತ್ತವೆ ಎಂಬುದನ್ನು ಅರಿತುಕೊಂಡು, ಡಾ|| ಸಿದ್ದನಾಥ ಬಳ್ಳಾರಿ ಅವರು ಮೊದಲೇ ಅವರಿಗೆ ಪತ್ರ ಬರೆದು, ಬೆಟ್ಟಿಯಾಗಿ ಅನುಮತಿಯನ್ನು ತೆಗೆದುಕೊಂಡಿದ್ದರು.

ಆಗ ಬೆಳಗಾವಿ ವಿಭಜನೆ ನಿಶ್ಚಿತವೆಂದು ದಿನಾಲು ಪತ್ರಿಕೆಗಳಲ್ಲಿ ವರದಿಗಳು ಕಾಣಸಿಗುತ್ತಿದ್ದವು. ಆ ಸಮಯದಲ್ಲಿ ಪ್ರಧಾನಮಂತ್ರಿಯಾಗಿದ್ದ ಇಂದಿರಾಗಾಂಧಿಯವರು ಮಹಾರಾಷ್ಟ್ರ ನಾಯಕರ ಬೇಡಿಕೆಯ ಪ್ರಕಾರ ಬೆಳಗಾವಿಯನ್ನು

ಒಡೆದು ಕೊಟ್ಟು, ಅವರ ಆಶೆಯನ್ನು ಪೂರೈಸಿ ತಮ್ಮ ಹಿತಾಸಕ್ತಿಯನ್ನು ಬೆಳೆಸಿಕೊಳ್ಳಬೇಕೆಂದು ಮಾಡಿದ್ದರು. ಬೆಳಗಾವಿಯನ್ನು ಒಡೆಯುವದಾದರೆ ಸೋಲಾಪುರವನ್ನೇಕೆ ಒಡೆಯಬಾರದೆಂಬುದನು ಜಯದೇವಿತಾಯಿಯವರೊಂದಿಗೆ ಡಾ॥ ಬಳ್ಳಾರಿ ಅವರು ಕೂಡ ಇದೇ ಪ್ರಶ್ನೆಯನ್ನು ಎತ್ತಿದ್ದರು. ಇಂದು ಕೂಡ ಕೇಂದ್ರ ಮಂತ್ರಿ ಚವ್ಹಾಣರಿಗೆ ಡಾ॥ ಬಳ್ಳಾರಿಯವರು ಇದನ್ನೇ ಕೇಳುವವರಿದ್ದರು.

ಅದಕ್ಕಾಗಿ ಗೃಹಮಂತ್ರಿ ಯಶವಂತ ಚವ್ಹಾಣ ಅವರು ಇಳಿದುಕೊಂಡ ಸರಕಾರಿ ವಸತಿಗೃಹದಲ್ಲಿ ಡಾ॥ ಸಿದ್ದನಾಥ ಬಳ್ಳಾರಿ ಅವರು ತಮ್ಮ ಶಿಷ್ಟ ಮಂಡಳಿಯೊಂದಿಗೆ ಬೆಟ್ಟಿಯಾದರು.

ಪ್ರಾರಂಭದಲ್ಲಿ ಕನ್ನಡ ಅಲ್ಪ ಭಾಷಿಕ ಅಡಚಣೆಗಳನ್ನು ಕುರಿತು ತಾಸುಗಟ್ಟಲೆ ಚರ್ಚೆ ನಡೆಯಿತು. ಅದಕ್ಕೆ ಜಿಲ್ಲಾಧಿಕಾರಿಗಳು ಹಾರಿಕೆಯ ಉತ್ತರಗಳನು. ಕೊಡುತ್ತಿದ್ದರು. ಶ್ರೀ ಚವ್ಹಾಣರ ಮಗ್ಗುಲಲ್ಲಿಯೇ ಕುಳಿತಿದ್ದ ಡಾ॥ ಸಿದ್ಧನಾಥರು ಚರ್ಚೆಯ ಮಧ್ಯದಲ್ಲಿ ಬೆಳಗಾವಿ ನಗರವನ್ನು ಎರಡು ತುಂಡು ಮಾಡಿ ಒಂದನ್ನು ಮಹಾರಾಷ್ಟ್ರಕ್ಕೆ ಇನ್ನೊಂದನ್ನು ಕರ್ನಾಟಕಕ್ಕೆ ಹಂಚುವ ಯೋಜನೆ ಕೇಂದ್ರದ ಗೃಹಖಾತೆಯಿಂದಲೇ ಶಿಫಾರಸು ಪಡೆದಿದೆಯೆಂದು ವರದಿಯಾಗಿದೆ. ಅದಕ್ಕೆ ನಿಮ್ಮ ಅಭಿಪ್ರಾಯವೇನು? ಎಂದು ಕೇಳಿಯೇ ಬಿಟ್ಟರು. ಅದಕ್ಕೆ ಅವರು ಚೇಳು ಕಡಿದವರಂತೆ ಬೆಚ್ಚಿ ಬಿದ್ದು “ಅದು ನನಗೇನೂ ತಿಳಿಯದು” ಎಂದರು. ಅದಕ್ಕೆ ಡಾ॥ ಸಿದ್ಧನಾಥ ಅವರು “ಹಾಗಾದರೆ ಮಹಾಜನ ವರದಿ ಕಾರ್ಯಾಚರಣೆಗೆ ವಿಳಂಬವೇಕೆ?” ಎಂದು ಪ್ರಶ್ನೆ ಕೇಳಿದರೆ “ಅದು ನನಗೆ ತಿಳಿಯದು” ಎಂದು ಹಾರಿಕೆಯ ಉತ್ತರ ಕೊಟ್ಟರು.

ಇಡೀ ಭಾರತದಲ್ಲಿಯೇ ಉಗ್ರ ಸಮಸ್ಯೆಯೆನಿಸಿದ್ದ ಬೆಳಗಾವಿ ಪ್ರಶ್ನೆಯನ್ನು ಅಷ್ಟೇ ವಾದಗ್ರಸ್ಥವೆನಿಸಿದ್ದ ಸೋಲ್ಲಾಪುರದಲ್ಲಿ ಎತ್ತಬಹುದೆಂದು ಅವರು ಕನಸಿನಲ್ಲಿಯೂ ಕಲ್ಪಿಸಿರಲಿಕ್ಕಿಲ್ಲ. ಅಂದಿನ ಜ್ವಲಂತ ವಿಷಯವೆಂದು ಹೆಸರಾದ ಬೆಳಗಾವಿ ಪ್ರಶ್ನೆಯನ್ನು ಕುರಿತು ಸಾಮಾನ್ಯನೊಬ್ಬನ ಎದುರಿನಲ್ಲಿ ಎಲ್ಲಾ ತಿಳಿದು “ಏನೂ ನನಗೆ ತಿಳಿಯದು” ಎಂದು ನುಡಿದ ಗೃಹಮಂತ್ರಿಗಳಿಗೆ ತಾವು ಸುಳ್ಳು ಹೇಳುತ್ತಿದ್ದೇವೆ ಎಂಬ ವಿಚಾರವು ಕೂಡ ಇಲ್ಲದುದು ಅತ್ಯಂತ ವಿಷಾದದ ಸಂಗತಿ ಎಂದಿದ್ದಾರೆ ಸಿದ್ಧನಾಥ ಬಳ್ಳಾರಿಯವರು.

“ಬೆಳಗಾಂವ, ಕಾರವಾರ ಸಮೇತ ಮಹಾರಾಷ್ಟ್ರ ಝೂಲಾಚ ಪಾಯಿಜೆ” ಎಂದು ಕೂಗು ಹಾಕಿ ಮರಾಠಿಗರು ಹೋರಾಟ ನಡೆಸಿದರು. ಇತ್ತ ಸೊಲ್ಲಾಪುರ ಅಕ್ಕಲಕೋಟ ಮುಂತಾದ ಗಡಿಭಾಗಗಳ ಸಲುವಾಗಿ ಗಡಿನಾಡಿನವರು ಉಗ್ರ ಹೋರಾಟಗೈದರು ಇಂದಿರಾಗಾಂಧಿಯವರಾದರೂ ಬೆಳಗಾಂವನ್ನು ಒಡೆದು ಕೊಡುವ ವಿಚಾರ ಮಾಡಿದ್ದರು. ಅದಕ್ಕೆ “ಬೆಳಗಾವಿಯನ್ನು ಒಡೆಯುವದಾದರೆ ಸೊಲ್ಲಾಪುರವನ್ನು ಒಡೆಯಿರಿ” ಎಂದು ಜಯದೇವಿತಾಯಿಯವರು, ಸಿದ್ದನಾಥ ಬಳ್ಳಾರಿಯವರು ಮತ್ತು ಇತರರು ಸ್ಪಷ್ಟವಾಗಿ ಹೇಳಿದರು. ಧೋತರವೇ ಆಗಲಿ ಸೀರೆಯೇ ಆಗಲಿ ಧಡಿ ಗಟ್ಟಿಯಾಗಿದ್ದರೆ ಮಾತ್ರ ಅವು ಚೆನ್ನಾಗಿ ಉಳಿಯುತ್ತದೆ. ಹಾಗೆಯೇ ಗಡಿನಾಡು ಸೊಲ್ಲಾಪುರದ ಹೋರಾಟದಿಂದ ಸೊಲ್ಲಾಪುರ ಉಳಿಯದೇ ಹೋದರೂ ಬೆಳಗಾಂವ, ಕಾರವಾರಗಳು ಕರ್ನಾಟಕದಲ್ಲಿ ಉಳಿದವೆಂದು ಹೇಳಬಹುದು.

# ೯. ಕನ್ನಡ ಪತ್ರಿಕೆಗಳ ಸೇವೆ

ಸೋಲ್ಲಾಪುರ, ಅಕ್ಕಲಕೋಟ ಮುಂತಾದ ಗಡಿಭಾಗಗಳಲ್ಲಿ ಅಂದು ಕನ್ನಡ ಪತ್ರಿಕೆಗಳು ಓದಬೇಕೆಂದರೂ ಸಿಗುತ್ತಿರಲಿಲ್ಲ. ಪತ್ರಿಕೆಗಳ ಮೂಲಕ ಪ್ರಕಟವಾಗುವ ಕರ್ನಾಟಕ ಏಕೀಕರಣದ ಮಹತ್ವದ ಅಂಶಗಳನ್ನು ಅಲ್ಲಿಯ ಕನ್ನಡಿಗರಿಗೆ ತಿಳಿದುಕೊಳ್ಳಲಾಗುತ್ತಿರಲಿಲ್ಲ. ಕನ್ನಡ ಉಳಿದು, ಬೆಳೆದು ಬರಬೇಕಾದರೆ ಪತ್ರಿಕೆಗಳದ್ದು ಮಹಾನ್ ಪಾತ್ರವಿದೆಯೆಂಬುದನ್ನು ಡಾ|| ಸಿದ್ಧನಾಥ ಬಳ್ಳಾರಿಯವರು ಚೆನ್ನಾಗಿ ಅರಿತಿದ್ದರು. ಅದಕ್ಕಾಗಿ ಸೋಲ್ಲಾಪುರ ಕನ್ನಡಿಗರಿಗೆ ಪತ್ರಿಕೆಗಳನ್ನು ಹೇಗಾದರೂ ಮಾಡಿ ಪೂರೈಸಬೇಕೆಂದು ಅವರು ಸಂಕಲ ಮಾಡಿದರು. ಹಗಲು ಮಹಾನಗರಪಾಲಿಕೆಯಲ್ಲಿ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿದ ನಂತರ ರಾತ್ರಿ ಕನ್ನಡ ಪತ್ರಿಕೆಗಳನ್ನು ಕೈಯಲ್ಲಿ ಹಿಡಿದು ಕನ್ನಡಿಗರ ಮನೆಮನೆಗೆ ತಿರುಗಿ ಹಂಚುತ್ತಿದ್ದರು. ಅವರು ಸ್ವತಃ ಡಾಕ್ಟರರಾಗಿದ್ದರೂ ಪತ್ರಿಕೆ ಹಂಚುವ ಕೆಲಸ ಕಡಿಮೆಯೆಂದು ತಿಳಿದುಕೊಳ್ಳುತ್ತಿರಲಿಲ್ಲ. ಕನ್ನಡ ಸೇವೆಯೆಂದರೆ ಸಿದ್ಧರಾಮೇಶ್ವರನ ಪೂಜಾಸೇವೆಯೆಂದೇ ತಿಳಿದುಕೊಳ್ಳುತ್ತಿದ್ದರು. ಅನೇಕರು ಸಿದ್ಧನಾಥರ ಈ ಕಾವ್ಯವನ್ನು ಅವಹೇಳನ ಮಾಡಿದರೂ ಅವರು ಅದರ ಪರಿವೇ ಮಾಡಲಿಲ್ಲ, ಯಾರು ಏನೇ ಅಂದರೂ ಅವರು ತಮ್ಮ ಕಾಯಕ ಬಿಡಲಿಲ್ಲ. ಅದರಿಂದಾಗಿ ಸೊಲ್ಲಾಪುರ ಹಾಗು ಇತರ ಗಡಿಭಾಗಗಳಲ್ಲಿ ಕರ್ನಾಟಕದ ಎಲ್ಲ ಪ್ರಮುಖ ಪತ್ರಿಕೆಗಳು ದೊರೆಯುವಂತಾದವು.

ಹೀಗೆ ಕನ್ನಡಕ್ಕಾಗಿ ಅವರು ಹಗಲು-ರಾತ್ರಿ ಕೆಚ್ಚೆದೆಯಿಂದ ಹೋರಾಡಲು ಸಿದ್ಧವಾಗಿದ್ದರು. ಅಲ್ಲದೆ ಅವರು ಪ್ರಾರಂಭದಿಂದಲೂ ಕರ್ನಾಟಕದ ಹಲವು ಪ್ರಮುಖ ಕನ್ನಡ ಪತ್ರಿಕೆಗಳ ಸುದ್ದಿಗಾರರಾಗಿದ್ದರು. ಅಷ್ಟೇ ಅಲ್ಲ ಹಲವಾರು ವರ್ಷಗಳ ಹಿಂದೆಯೇ ಮಹಾರಾಷ್ಟ್ರದಲ್ಲಿ ಕನ್ನಡ ಪತ್ರಕಾರರ ಸಂಘದ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದರು.

**"ಕಾಯಕವೇ ಕೈಲಾಸ"** ಎಂಬ ಬಸವಣ್ಣನವರ ಹೇಳಿಕೆಯಂತೆ ಡಾ|| ಸಿದ್ದನಾಥ ಬಳ್ಳಾರಿ ನುಡಿದು ನಡೆದು ತೋರಿಸಿದರು. **'ಕರ್ನಾಟಕ ಏಕೀಕರಣ ಚಳುವಳಿ'ಯ** ಸುದ್ದಿಗಳು ಹೇಗೋ '**ಜಯನಿಕೇತನ**'ದಲ್ಲಿ ಕೆಲವರಿಗೆ ಮಾತ್ರ ತಿಳಿದು ಬರುತ್ತಿದ್ದವು. ಆದರೆ ಡಾ|| ಸಿದ್ದನಾಥ ಬಳ್ಳಾರಿಯವರ ಪತ್ರಿಕೆಗಳ ಸೇವೆಯಿಂದ ಗಡಿಕನ್ನಡಿಗರೆಲ್ಲರಿಗೂ ತಿಳಿದು ಬರುವಂತಾಯಿತು. ಇದು ಕೂಡ ಡಾ|| ಸಿದ್ದನಾಥರು ಮಾಡಿದ ಕನ್ನಡ ಸೇವೆಗಳಲ್ಲಿ ಒಂದಾಗಿದೆ. "ಎಲ್ಲ ಕನ್ನಡ ದಿನ ಪತ್ರಿಕೆಗಳ ವರದಿಗಾರರಾಗಿ ಗಡಿಭಾಗದಲ್ಲಿ ಕನ್ನಡ ವೃತ್ತ ಪತ್ರಿಕೆಗಳ ಪ್ರಸಾರ ಹೆಚ್ಚಿಸಿದ ಶ್ರೇಯಸ್ಸು ಡಾ|| ಸಿದ್ದನಾಥರಿಗೆ ಸಲ್ಲುತ್ತದೆ" ಎಂದು ಆರ್.ಟಿ. ಮಜ್ಜಿಗೆ ಅವರು ಹೇಳುತ್ತಾರೆ. ಇದರಿಂದ ಸಿದ್ದನಾಥರು ವೃತ್ತಿಯಿಂದ ವೈದ್ಯರಾಗಿದ್ದರೂ ಪ್ರವೃತ್ತಿಯಿಂದ ಕೆಚ್ಚೆದೆಯ ಕನ್ನಡ ಹೋರಾಟಗಾರರಾಗಿದ್ದರೆಂದು ತಿಳಿದು ಬರುತ್ತದೆ.

# ೧೦. ಸೊಲ್ಲಾಪುರ ಮಹಾನಗರ ಪಾಲಿಕೆಯಲ್ಲಿ ಬಸವೇಶ್ವರ ಭಾವಚಿತ್ರ

ಗಾಂಧೀ ತತ್ವಗಳೊಂದಿಗೆ ಶರಣ ತತ್ವಗಳನ್ನು ಅಳವಡಿಸಿಕೊಂಡು ಸಿದ್ದರಾಮೇಶ್ವರನ ಕರ್ಮಭೂಮಿ ಸೋಲ್ಲಾಪುರದಲ್ಲಿ ಬಾಳುತ್ತಿರುವ ಡಾ|| ಸಿದ್ಧನಾಥ ಬಳ್ಳಾರಿಯವರು ಅಪ್ಪಟ ಬಸವ ಭಕ್ತರೂ ಆಗಿದ್ದರು. ಅವರಿಗೆ ತಾವು ವೈದ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಮಹಾನಗರಪಾಲಿಕೆಯಲ್ಲಿ ಬಸವೇಶ್ವರರ ಭಾವಚಿತ್ರವನ್ನು ಹಾಕಬೇಕೆಂಬುದು ಅವರ ಬಹುದಿನದ ಇಚ್ಛೆಯಾಗಿತ್ತು.

ಕರ್ನಾಟಕ ಏಕೀಕರಣ ಸಮಿತಿಯ ಚಳುವಳಿಯು ಎಲ್ಲೆಡೆ ವ್ಯಾಪಿಸಿತ್ತು. ಸಂಯುಕ್ತ ಮಹಾರಾಷ್ಟ್ರ ಸಮಿತಿಯ ಚಳುವಳಿಯು ಅತ್ಯಂತ ಉಗ್ರರೂಪ ತಳೆದಿತ್ತು. ಅದರ ಪರಿಣಾಮವಾಗಿ ಅದೇ ವರ್ಷ ಅಧಿಕಾರರೂಢವಾಗಿದ್ದ ಕಾಂಗ್ರೆಸ್ ಸೋಲ್ಲಾಪುರ ಮಹಾನಗರ ಸಭೆಯಲ್ಲಿ ಅಧಿಕಾರದಿಂದ ಕೆಳಗಿಳಿದು ಸಂಯುಕ್ತ ಮಹಾರಾಷ್ಟ್ರ ಸಮಿತಿ ಅಧಿಕಾರಕ್ಕೆ ಬಂದಿತು. ಆ ಸನ್ನಿವೇಶವು ಬಹಳ ವಿಚಿತ್ರವಾಗಿತ್ತು.

ಆಗ ಡಾ|| ಬಳ್ಳಾರಿಯವರು ಅತ್ಯಂತ ಪರಿಚಯವುಳ್ಳ ತಮ್ಮ ಕಾರ್ಯಕ್ಷೇತ್ರದ ಪ್ರಮುಖರೊಬ್ಬರ ಕೈಯಲ್ಲಿ ಮಹಾತ್ಮಾ ಬಸವೇಶ್ವರರ ಭಾವಚಿತ್ರವನ್ನು ಮಹಾನಗರ ಸಭೆಯ ಮುಂದಿಡುವ ಒಂದು ನಿವೇದನೆಯನ್ನು ತಯಾರು ಮಾಡಿ ಕೊಟ್ಟರು. ಆ ಸದಸ್ಯರು ನಿವೇದನೆಯನ್ನು ಸಭೆಯ ಮುಂದೆ ಇಟ್ಟಾಗ ಸಂಯುಕ್ತ ಮಹಾರಾಷ್ಟ್ರ ಸಮಿತಿಯ ಕಾರ್ಯದರ್ಶಿಗಳೊಬ್ಬರು ಮಹಾತ್ಮಾ ಬಸವೇಶ್ವರರನ್ನು ಕುರಿತು ಅವಾಚ್ಯ ಶಬ್ದಗಳನ್ನು ಆಡಿದರೆಂದು ತಿಳಿದು ಬಂದಿತು. ಕೂಡಲೇ ಅದನ್ನು ಬಳ್ಳಾರಿಯವರು ಕನ್ನಡ ಪತ್ರಿಕೆಗಳಿಗೆ ವರದಿ ಮಾಡಿದರೆಂದು ಶ್ರೀ ಆರ್. ಟಿ. ಮಜ್ಜಿಗೆಯವರು ಹೇಳಿದ್ದಾರೆ. ಈ ಪ್ರಸಂಗವು ಬಸವಾಭಿಮಾನಿಗಳಿಗಂತೂ ಸಹಿಸಲಾರದಷ್ಟು ನೋವನ್ನುಂಟು ಮಾಡಿತು. ಸೊಲ್ಲಾಪುರದ ಅನೇಕ ನಾಗರಿಕರಿಗೆ ಇದು ತಿಳಿದ ಕೂಡಲೇ ಅವರು ಸಿಟ್ಟಿಗೆದ್ದರು. ಓಣಿ ಓಣಿಯಲ್ಲಿ ವಿರೋಧಿ ಸಭೆಗಳನ್ನು ಏರ್ಪಡಿಸಿದರು. ಅನೇಕರು ಕಾರ್ಯದರ್ಶಿಯಿಂದ ಮಾಫಿ ಬೇಡಿದರು. ಬಸವೇಶ್ವರರ ಭಾವಚಿತ್ರ ಮಹಾನಗರಸಭೆಯಲ್ಲಿ ಕೂಡಿಸುವವರೆಗೆ ಅನ್ನ ಮುಟ್ಟುವುದಿಲ್ಲವೆಂದು ಸಿದ್ದನಾಥ ಬಳ್ಳಾರಿಯವರ ಜೊತೆ ಅನೇಕರು ಸತ್ಯಾಗ್ರಹ ಕೈಕೊಂಡರು. ಇನ್ನು ಗಣಾಚಾರಿಗಳ ವರ್ಗಕ್ಕೆ ಸೇರಿದ ಕೆಲವರು ಮಹಾನಗರಪಾಲಿಕೆಗೆ ಬೆಂಕಿ ಹಚ್ಚುವದಾಗಿ ಘಂಟಾಘೋಷವಾಗಿ ಸಾರ್ವಜನಿಕ ಸಭೆಯಲ್ಲಿ ಕೂಗಹತ್ತಿದರು. ಮಹಾನಗರಪಾಲಿಕೆಯ ಹಾಗೂ ಇವೆಲ್ಲವುಗಳ ಒತ್ತಡದಿಂದ ಕಾರ್ಯದರ್ಶಿಯು ಮಹಾತ್ಮ ಬಸವೇಶ್ವರನನ್ನು ಕುರಿತು ತಾನು ನುಡಿದದ್ದು ತಪ್ಪಾಯಿತೆಂದು ಒಪ್ಪಿಕೊಂಡು ಕ್ಷಮೆ ಬೇಡಿದನು.

ಮಹಾನಗರ ಸಭೆಯು ಬಸವೇಶ್ವರರ ಭಾವಚಿತ್ರ ಹಾಕಲು ಗೊತ್ತುವಳಿ ಸ್ವೀಕರಿಸಿತು. ಸೊಲ್ಲಾಪುರದ ತುಂಬೆಲ್ಲ ಬಸವೇಶ್ವರರ ಭಾವಚಿತ್ರದ ಭವ್ಯ ಮೆರವಣಿಗೆಯು ಅತ್ಯಂತ ವಿಜೃಂಭಣೆಯಿಂದ ಸಾಗಿ ಬಂದ ಮೇಲೆ ಅದನ್ನು ಮಹಾನಗರ ಸಭೆಯಲ್ಲಿ ಹಚ್ಚಲಾಯಿತು. ಈಗಲೂ ಅಲ್ಲಿ ಬಸವೇಶ್ವರರ ಭಾವಚಿತ್ರ ನೋಡಬಹುದು.

“ಈ ರೀತಿ ಹೋರಾಡಿ ಬಸವೇಶ್ವರರ ಭಾವಚಿತ್ರವನ್ನು ಸಾರ್ವಜನಿಕ ಕ್ಷೇತ್ರವಾದ ಮಹಾನಗರ ಸಭೆಯಂತಹ ಸಭಾಭವನದಲ್ಲಿ ಹಚ್ಚಿದ ಉದಾಹರಣೆ ಇಡೀ ಹಿಂದು ದೇಶದಲ್ಲಿ ಸೋಲ್ಲಾಪುರ ಪ್ರಕರಣವೆಂದು ಹೇಳಿದರೆ ಅತಿಶಯೋಕ್ತಿಯಾಗದು” ಎಂದು ಸಿದ್ದನಾಥ ಬಳ್ಳಾರಿಯವರೇ ಹೇಳಿದ್ದಾರೆ.

ಈ ಘಟನೆಯಾದ ಸ್ವಲ್ಪೇ ದಿನಗಳಲ್ಲಿ ಸೋಲ್ಲಾಪುರ ಮಹಾನಗರ ಪಾಲಿಕೆಯಲ್ಲಿಯ ಸಂಯುಕ್ತ ಮಹಾರಾಷ್ಟ್ರ ಸಮಿತಿಯ ಬಹುಮತ ಉರುಳಿತು. ಕಾರಣವೇನೆಂದರೆ, ಮಹಾತ್ಮಾ ಬಸವೇಶ್ವರರ ವಿಷಯಕ್ಕೆ ಹೀನಾಯವಾಗಿ ಮಾತನಾಡಿದುದರ ನಿಷೇದಾರ್ಥವಾಗಿ ಅನೇಕ ಸದಸ್ಯರು ಸಂಯುಕ್ತ ಮಹಾರಾಷ್ಟ್ರ ಸಮಿತಿ ತ್ಯಜಿಸಿ ಕಾಂಗ್ರೆಸ್ ಸೇರಿದರು. ಮಹಾನುಭಾವಿ ಬಸವೇಶ್ವರರ ಪ್ರಕರಣದಲ್ಲಿ ಮತ್ತೊಮ್ಮೆ ಅಧಿಕಾರಕ್ಕೆ ಬಂದು ಕಾಂಗ್ರೆಸ್ ತನ್ನ ಬಹುಮತವನ್ನು ಉಳಿಸಿಕೊಂಡಿತು.

# ೧೧. ಬಸವ ಜಯಂತಿ

ಬಸವೇಶ್ವರರ ಭಾವಚಿತ್ರವನ್ನು ಮಹಾನಗರಪಾಲಿಕೆಯ ಸಭಾಗೃಹದಲ್ಲಿ ಹಚ್ಚುವ ಕಾರ್ಯಕ್ರಮ ವೈಭವದಿಂದ ಜರುಗಿಸಿದರೂ ಡಾ|| ಸಿದ್ಧನಾಥ ಬಳ್ಳಾರಿಯವರ ಮನಸ್ಸಿನಲ್ಲಿ ಬಸವೇಶ್ವರ ಬಗೆಗೆ ಆಡಿದ ಮಾತು ಮನಸ್ಸಿನಿಂದ ಅಳುಕಲಿಲ್ಲ ಅದಕ್ಕಾಗಿ ಅವರು ಅದೇ ವರ್ಷದಿಂದ ಬಸವ ಜಯಂತಿ ಕಾರ್ಯಕ್ರಮಕ್ಕೆ ಹುಟು ಹಾಕಿದರು. ಓಣಿಓಣಿಯಲ್ಲಿ ಜಾತಿ-ಮತ-ಪಂಥವೆನ್ನದೆ ಗಣೇಶೋತ್ಸವದಂತೆ ಬಸವ ಜಯಂತಿ ಆಚರಣೆ ನಡೆಯಿತು. ಮಧ್ಯವರ್ತಿ ಸಮಿತಿಯ ವತಿಯಿಂದ ಪ್ರತಿವರ್ಷ ಸಾರ್ವಜನಿಕ ಬಸವ ಜಯಂತಿಯೂ ಆಚರಿಸಲ್ಪಡಹತ್ತಿತು. ಮುಂದೆ ಅದು ಸೊಲ್ಲಾಪುರಕ್ಕಷ್ಟೇ ಸೀಮಿತವಾಗದೆ, ಪುಣೆ, ಮುಂಬಯಿ, ನಾಂದೇಡ, ನಾಗಪುರ, ನಾಸಿಕ ಮುಂತಾದೆಡೆಗಳಲ್ಲಿ ಬಸವ ಜಯಂತಿ ಆಚರಿಸಲ್ಪಡುತ್ತಿದ್ದುದನ್ನು ಇಂದಿಗೂ ಕಾಣಬಹುದು.

ಸೊಲ್ಲಾಪುರದಲ್ಲಿ ವೈಭವದಿಂದ ಬಸವೇಶ್ವರರ ಭಾವಚಿತ್ರದ ಮೆರವಣಿಗೆ ಸುರು ಮಾಡಿದರು. ಆಗ ಪ್ರತಿ ವರ್ಷ ಬಸವ ಜಯಂತಿಯಂದು ತೋಟಪ್ಪ ಎಂಬ ಒಬ್ಬ ಹಮಾಲ 7-8 ಎತ್ತುಗಳನ್ನು ಹೂಡಿ, ಬಸವೇಶ್ವರನ ಭಾವಚಿತ್ರವನ್ನು ಇಟ್ಟು ಗಾಡಿಯನ್ನು ಎಳೆಯುತ್ತಿದ್ದುದು ಎಲ್ಲರೂ ನೋಡುವಂತಿರುತ್ತಿತ್ತು. ಆತನು ಬಡವನಾದುದರಿಂದ ಪ್ರತಿವರ್ಷ ಬಸವಜಯಂತಿಯಂದು ಅವನ ಖರ್ಚಿಗೆ ಹಣವನ್ನು ನೀಡಿ ಎಲ್ಲಿಯೇ ಇದ್ದರೂ ಕರೆ ತರುತ್ತಿದ್ದರು ಡಾ|| ಸಿದ್ಧನಾಥ ಅವರು ಅಷ್ಟೇ ಅಲ್ಲ, ಬಸವಜಯಂತಿ ನಿಮಿತ್ತ ಪುರಾಣ ಪ್ರವಚನಗಳನ್ನು ಹೇಳಿಸಿ, ಉತ್ತಮ ಕಲಾಕಾರರನ್ನು, ಭಾಷಣಕಾರರನ್ನು ಪ್ರಸಿದ್ಧ ಸಂಗೀತಗಾರರನ್ನು ಕರೆಯಿಸಿ ವಚನಸಂಗೀತ, ಹಾಡು, ನೃತ್ಯ, ಶರಣರ ನಾಟಕ, ಭಾಷಣ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅವರು ಏರ್ಪಡಿಸುತ್ತಿದ್ದರು ಸ್ವತಃ ಉತ್ತಮ ವಾಗ್ಮಿಗಳಾದ ಡಾ|| ಸಿದ್ದನಾಥರು ಬಸವಣ್ಣ ಹಾಗು ಅವರ ಸಮಕಾಲೀನರ ಚರಿತ್ರೆಯನ್ನು ತಾವು ಹೇಳಿ, ಸೊಲ್ಲಾಪುರದ ಜನರಿಗೆ ಶರಣರ ಹಾಗು ಅವರ ವಚನಗಳ ಬಗೆಗೆ ಪರಿಚಯ ಮಾಡಿಕೊಡುವ ಮಹತ್ತರ ಕಾರ್ಯ ಮಾಡಿದರು.

## ಬಸವಣ್ಣನವರ ಮೂರ್ತಿ ಪ್ರತಿಷ್ಠಾಪನೆ

**"ಕಂಡ ಭಕ್ತರಿಗೆ ಕೈ ಮುಗಿವಾತನೆ ಭಕ್ತ**
**ಮೃದು ವಚನವೆ ಸಕಲ ಜಪಂಗಳಯ್ಯಾ**
**ಸದುವಿನಯವೆ ಸದಾಶಿವನ ಒಲುಮೆಯಯ್ಯಾ**
**ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ**

ಎಂಬ ಬಸವಣ್ಣನವರ ವಚನದಂತೆ ಡಾ|| ಸಿದ್ದನಾಥ ಬಳ್ಳಾರಿಯವರ ದೊಡ್ಡಗುಣ ವಿನಯ ಬಸವೇಶ್ವರರ ಮೂರ್ತಿ ಪ್ರತಿಷ್ಠಾಪನೆಗಾಗಿ ಸೊಲ್ಲಾಪುರದಲ್ಲಿ ಎಷ್ಟೋ ಜನರಿಗೆ ಕೈ ಜೋಡಿಸಿದರು. ಎಷ್ಟೋ ಜನರಿಗೆ ವಿನಯದಿಂದ ಕೇಳಿ ಹಣ ಕೊಡಿಸಿದರು. ಅವರ ಈ ಕಾರ್ಯಕೆ ಸಹಕರಿಸಲು ನಗರಾಧ್ಯಕ್ಷರಾದ ಸಿದ್ದರಾಮಪ್ಪ ಪೂಜಾರಿ, ಚಾಕೊತೆ,

ಕೆ. ಮುಸ್ತಾನಿ ಮುಂತಾದವರಿಗೆ ಕೇಳಿಕೊಳ್ಳಲು ಅವರು ಸಲುಗೆಯಿಂದ “ಓ ಡಾಕ್ಟರೆ ಸುಮ್ಮ ಕೂಡಿರಿ ತೊಂದರೆ ತಗೊಳ್ಳಬೇಡಿರಿ ನಾವು ಮಾಡುತ್ತೇವೆ” ಎನ್ನುತ್ತಿದ್ದರು. ಅವರ ಮಾತಿಗೆ ಸೊಲ್ಲಾಪುರದಲ್ಲಿ ಬಹಳ ಬೆಲೆಯಿತ್ತೆನ್ನುವದು ಇದರಿಂದ ತಿಳಿದು ಬರುತ್ತದೆ. ಮೊದಲು ಕುಂಬಾರವೇಸದಲ್ಲಿ ಜಾಗ ತೆಗೆದುಕೊಂಡು ಬಸವೇಶ್ವರರ ಮೂರ್ತಿ ಕೂಡಿಸಿದರು. ನಂತರ 15 ಮೇ 1988 ರಂದು ಅದನ್ನು ಕೊಂತಂ ಚೌಕದಲ್ಲಿ ಕೂಡಿಸಿದರು.

ರಾಜಶೇಖರ ಮಡಕಿ, ನಾಗಪ್ಪಣ್ಣಾ ಕಾಡಾದಿ, ಜಯದೇವಿತಾಯಿ ಲಿಗಾಡೆ, ಷಡಕ್ಷರಿಸ್ವಾಮಿ, ಬಾಬಾಸಾಹೇಬ ವಾರದ ಮುಂತಾದವರು ಶ್ರೀ ಸಿದ್ಧನಾಥರೊಂದಿಗೆ ಕೂಡಿಕೊಂಡು **'ಬಸವ ಸಮಿತಿ'** ಸ್ಥಾಪಿಸಿದರು ಅದರ ಮೂಲಕ ಪ್ರತಿವರ್ಷ ಕಾರ್ಯಕ್ರಮಗಳು ನಡೆಯಲಾರಂಭಿಸಿದವು. ಪ್ರತಿವರ್ಷ ಬಸವಣ್ಣನ ತತ್ವದಂತೆ ನುಡಿ-ನಡೆ ಒಂದಾಗಿ, ಕಾಯಕವೇ ಕೈಲಾಸವೆಂದು ಬದುಕುವ ಶರಣನಿಗೆ **'ಬಸವ ಪುರಸ್ಕಾರ'** ದೊರಕುತ್ತಿತ್ತು. ಅಲ್ಲದೆ ಕನ್ನಡ ಪ್ರಾಥಮಿಕ ಮಾಧ್ಯಮಿಕ, ಮಹಾವಿದ್ಯಾಲಯ ಮಟ್ಟದಲ್ಲಿ ವಚನ ಸ್ಪರ್ಧೆ, ಬಸವಣ್ಣ ಮತ್ತು ಇನ್ನಿತರ ಶರಣರ ಕುರಿತು ಭಾಷಣ ಸ್ಪರ್ಧೆ ಏರ್ಪಡಿಸಿ, ಅದರಲ್ಲಿ ಪ್ರಥಮ ಬಂದ ವಿದ್ಯಾರ್ಥಿಗೆ ಬಸವ ಜಯಂತಿಯಂದು ಬಹುಮಾನ ದೊರೆಯುತ್ತಿತ್ತು. ಅಂದು ಸಾಗಿ ಬಂದ ಬಸವ ಸಮಿತಿಯ ಕಾರ್ಯಕ್ರಮಗಳು ಇಂದಿಗೂ ನಡೆಯುತ್ತಿವೆ. “ನಿಜವಾಗಿಯೂ ನುಡಿದಂತೆ ನಡೆದು ಬಸವತತ್ವ ಪಾಲಿಸಿದ ಶರಣ ಡಾ॥ ಸಿದ್ಧನಾಥ ಬಳ್ಳಾರಿಯವರು” ಎಂದಿದ್ದಾರೆ ಸೊಲ್ಲಾಪುರದ ವೇದಮೂರ್ತಿ ಶ್ರೀ ಬಸವರಾಜ ಶಾಸ್ತ್ರಿಗಳು.

## ೧೨. ಸೊಲ್ಲಾಪುರದಲ್ಲಿ ನಾಡಹಬ್ಬ ಮಹೋತ್ಸವ

ವಿಜಯದಶಮಿ, ದಸರಾ, ನವರಾತ್ರಿ ಮುಂತಾಗಿ ಕರೆಯಿಸಿಕೊಳ್ಳುವ ಈ ಹಬ್ಬ ಕನ್ನಡಿಗರ ಪಾಲಿಗಂತೂ ನಾಡಹಬ್ಬ ಸೊಲ್ಲಾಪುರದಲ್ಲಿ ನಾಡಹಬ್ಬ ಕಾರ್ಯಕ್ರಮ ಅತ್ಯಂತ ವಿಜೃಂಬಣೆಯಿಂದ ಪ್ರಾರಂಭವಾಯಿತು.

'ಈ ನಾಡಹಬ್ಬ ಕನ್ನಡ ಜಾಗೃತಿಗೆ ಶ್ರೀಕಾರ' ಎಂದು ತಿಳಿದು ಡಾ॥ ಸಿದ್ದನಾಥ ಬಳ್ಳಾರಿಯವರು ಬಸವಜಯಂತಿ ಕಾರ್ಯಕ್ರಮದೊಂದಿಗೆ ನಾಡಹಬ್ಬವನ್ನು ಪ್ರಾರಂಭಿಸಿದರು. ನಾಗಪ್ಪಣ್ಣಾ ಕಾಡಾದಿ, ಜಯದೇವಿ ತಾಯಿ ಲಿಗಾಡೆ, ರಾಜಶೇಖರ ಮಡಕಿ, ಬಾಬಾಸಾಹೇಬ ವಾರದ, ಷಡಕ್ಷರಿ ಸ್ವಾಮಿ, ಕೆ, ಮುಸ್ತಾನಿ, ಬಸವರಾಜ ಶಾಸ್ತ್ರಿ, ಕೆ.ಬಿ. ಪೂರ್ವಾಚಾರಿ, ಡಾ॥ ದ.ರಾ.ಬೇಂದ್ರೆ ಮುಂತಾದವರನ್ನೆಲ್ಲ ಒಂದುಗೂಡಿಸಿ, ಡಾ॥ ಸಿದ್ಧನಾಥ ಬಳ್ಳಾರಿಯವರು ನಾಡಹಬ್ಬದ ಸಮಿತಿಯನ್ನು ರಚಿಸಿದರು. ಕನ್ನಡಿಗರೆಲ್ಲರಿಗೂ ಅವರು ನಾಡಹಬ್ಬದ ವೃತ ದೀಕ್ಷೆಯನ್ನು ನೀಡಿದರು.

ಕರ್ನಾಟಕ ಏಕೀಕರಣ ಚಳುವಳಿಯಲ್ಲಿಯಂತೂ ಈ ನಾಡಹಬ್ಬಕ್ಕೆ ಇನ್ನಷ್ಟು ಚಾಲನೆ ದೊರೆಯಿತು. ನಾಡದೇವಿ ಭುವನೇಶ್ವರಿಯ ಭಾವಚಿತ್ರವನ್ನಿರಿಸಿ, ಮೆರವಣಿಗೆ ಏರ್ಪಡಿಸುವದು. ಶಾಲೆಗಳಲ್ಲಿ ಭಾಷಣ, ನಿಬಂಧ, ಚಿತ್ರಕಲೆ, ರಂಗೋಲಿ ಮುಂತಾದ ಸ್ಪರ್ಧೆಗಳನ್ನೇರ್ಪಡಿಸಿ, ಬಹುಮಾನವನ್ನೀಯುವದು.

ಈ ನಾಡಹಬ್ಬದ ನಿಮಿತ್ತ ಪ್ರಸಿದ್ಧ ರಾಜಕಾರಣಿಗಳು, ಮಂತ್ರಿ ಮಹೋದಯರು, ಸಾಹಿತಿಗಳು ಸೋಲ್ಲಾಪುರಕ್ಕೆ ಬಂದು ಹೋದರು. ಅಂದು ಕೇಂದ್ರ ಮಂತ್ರಿಯಾಗಿದ್ದ ಸರೋಜಿನಿ ಮಹಿಷಿ, ಮಂತ್ರಿಗಳಾದ ಕೋಲೂರು ಮಲ್ಲಪ್ಪ, ಸಾವುಕಾರ ಚನ್ನಯ್ಯ, ನಿವೃತ್ತ ನ್ಯಾಯಧೀಶ ಶ್ರೀ ಎಸ್. ಎಸ್. ಮಳೀಮಠ, ಕೆ. ಮುಸ್ತಾನಿಯಪ್ಪ, ಹನುಮಂತರಾವ್ ಮೋರೆ (ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕರು) ಮುಂತಾದವರು ಕರ್ನಾಟಕ ಏಕೀಕರಣ ಚಳುವಳಿಯನ್ನು ಕುರಿತು ಹೇಳುತ್ತ, ಕನ್ನಡದ ಉಳಿವಿಗಾಗಿ ಕನ್ನಡಿಗರು ಜಾಗೃತರಾಗಿರಬೇಕೆಂದು ಹೇಳಿದರು. ಬಿ.ಎಂ.ಶ್ರೀ.ಶ್ರೀರಂಗ, ಜೋಳದ ರಾಶಿ ದೊಡ್ಡನಗೌಡ, ಶಿವರಾಮ ಕಾರಂತ, ಸಿಂಪಿ ಲಿಂಗಣ್ಣ ಮುಂತಾದ ಸಾಹಿತಿಗಳು ಸೊಲ್ಲಾಪುರಕ್ಕೆ ಬಂದರು. ಕನ್ನಡ ನಾಡು-ನುಡಿಯ ಮಹತ್ವವನ್ನು ವಿವರಿಸಿದರು.

ಜ್ಞಾನಪೀಠ ಪ್ರಶಸ್ತಿ ವಿಜೇತ ದ.ರಾ.ಬೇಂದ್ರೆಯವರು ಸೊಲ್ಲಾಪುರದಲ್ಲಿದ್ದಾಗ ನಾಡಹಬ್ಬ ಮಹೋತ್ಸವವನ್ನು ಆಚರಿಸಲು ಕರೆ ಕೊಟ್ಟರು. ಅಲ್ಲದೆ ತಾವು ನಾಡದೇವಿಯನ್ನು ಪ್ರತಿಷ್ಠಾಪಿಸಿ, ನಾಡಹಬ್ಬವನ್ನು ಆಚರಿಸಿ ತೋರಿಸಿದರು. ಡಾ॥ ಸಿದ್ಧನಾಥ ಬಳ್ಳಾರಿಯವರು ನಾಡಹಬ್ಬ ಕಾರ್ಯಕ್ರಮವಿರಿಸಿದಾಗ ಅವರು ಬಂದು ಭಾಷಣ ಮಾಡುತ್ತಿದ್ದರು. ಅದರ ಮಹತ್ವ ವಿವರಿಸುತ್ತಿದ್ದರು.

ನಾಡಹಬ್ಬದ ಮೂಲಕ ಸಿದ್ದನಾಥ ಬಳ್ಳಾರಿ ಅವರು ಕನ್ನಡ ಸಾಹಿತ್ಯ ಸಂಸ್ಕೃತಿಯ ಬಗೆಗೆ ಅರಿವನ್ನು ಹುಟ್ಟಿಸಲು ಯತ್ನಿಸಿದರು. “ಎನಿತು ಇನಿದು ಈ ಕನ್ನಡ ನುಡಿಯು, ಮನವನು ತಣಿಸುವ ಮೋಹನ ಸುಧೆಯು” ಎಂದು ಹಾಡಿದಂತಿರುವ ಕನ್ನಡವನ್ನು ಗಡಿಭಾಗದ ಕನ್ನಡಿಗರಿಗೆ ಪರಿಚಯಿಸಲು ಕಲಾಕಾರರನ್ನು ಕರೆಯಿಸಿ, ಸಂಗೀತ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನಿರಿಸುತ್ತಿದ್ದರು. ಉದಯಕುಮಾರ, ಕಲ್ಯಾಣಕುಮಾರ,

ಸುದರ್ಶನ, ಸುಧೀರ, ಬಿ.ಸರೋಜ, ಚೆಂದೋಡಿ ಲೀಲಾ, ಶೈಲಶ್ರೀ ಮುಂತಾದ ನಟನಟಿಯರು ಬಂದು ತಮ್ಮ ಕಲೆಯನ್ನು ಪ್ರದರ್ಶಿಸಿದ್ದಾರೆ. ಗುಬ್ಬಿ ವೀರಣ್ಣ ಕಂಪನಿ, ಸುಳ್ಯದ ದೇಸಾಯಿ ಕಂಪನಿ, ಗದಗ ವೀರೇಶ್ವರ ಕಂಪನಿ, ಗುಡಗೇರಿ ಎಲ್. ಬಸವರಾಜ ಕಂಪನಿ, ಹುಚ್ಚೇಶ್ವರ ನಾಟ್ಯಸಂಘ, ಅಕ್ಕಲಕೋಟ ತಾಲ್ಲೂಕಿನ ಮೈಂದರಗಿಯ ರೇಣುಕಾಚಾರ್ಯ ನಾಟ್ಯಸಂಘ ಮುಂತಾದ ಕಂಪನಿಗಳನ್ನು ಕರೆಯಿಸಿ, ಕಿತ್ತೂರ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಬಸವೇಶ್ವರ ಮುಂತಾದ ನಾಟಕಗಳನ್ನಾಡಿಸಿ ಸೊಲ್ಲಾಪುರ ಕನ್ನಡಿಗರಿಗೆ ರಸದೂಟವನ್ನುಣ್ಣಿಸಿದ್ದಾರೆ.

ಪಂಚಪೀಠದ ಜಗದ್ಗುರುಗಳನ್ನಲ್ಲದೆ, ಚಿತ್ರದುರ್ಗ, ತುಮಕೂರು, ಸುತ್ತೂರ, ಹುಬ್ಬಳ್ಳಿ, ಬೆಳಗಾಂವ, ಗದಗ ಮುಂತಾದ ಕಡೆಗಳಿಂದ ಜಗದ್ಗುರುಗಳು, ಮಹಾಸ್ವಾಮಿಗಳು ಆಗಮಿಸಿ, ಆಧ್ಯಾತ್ಮಿಕ ಪ್ರವಚನ, ಆಶೀರ್ವಾದ ಮಾಡಿದಾಗ ಕನ್ನಡಿಗರು ಸಂತೋಷದಿಂದ ಭಕ್ತಿಯ ಸಮರ್ಪಣೆಗೈದರು. ಡಾ॥ ಸಿದ್ದನಾಥರಿದ್ದಾಗಿನ ನಾಡಹಬ್ಬದ ಆಚರಣೆಯನ್ನು ಇಂದಿಗೂ ಇಲ್ಲಿಯ ಹಿರಿಯರು ನೆನಪಿಸಿಕೊಳ್ಳುತ್ತಾರೆ. ದಿ. ಡಾ॥ ಬಬಲಾದಿ, ದಿ. ಡಾ॥ ಗಲಗಲಿ, ಕೆ.ಬ, ಪೂರ್ವಾಚಾರಿ ಮುಂತಾದವರು ಕೂಡಿ **"ಮಿತ್ರ ಸಮಾಜ"** ಎಂಬ ಸಂಘದ ಮೂಲಕ ನಾಡಹಬ್ಬವನ್ನು ವೈಭವದಿಂದ ಆಚರಿಸುತ್ತ ಬಂದಿದ್ದಾರೆ. ಕೆ.ಬಿ. ಪೂರ್ವಾಚಾರಿ ಅವರು ಅದರ ಅಧ್ಯಕ್ಷರಾಗಿ ಇಂದಿಗೂ ಕೂಡ ಅದನ್ನು ಆಚರಿಸುತ್ತಿರುವುದನ್ನು ಕಾಣಬಹುದು. ಅಂದು ಸಿದ್ದೇಶ್ವರ ಮುಂತಾದ ಕನ್ನಡ ಶಾಲೆಗಳಲ್ಲಿ ಮೂರು ದಿನ ನಾಡಹಬ್ಬ ಸಂಭ್ರಮ, ಉತ್ಸಾಹದಿಂದ, ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕಮಗಳಿಂದ ಆಚರಿಸುತ್ತಿದ್ದರು. ಊರ ತುಂಬೆಲ್ಲ ನಾಡದೇವಿಯ ಮೆರವಣಿಗೆ ವಿದ್ಯಾರ್ಥಿಗಳ ಮೂಲಕ ನಡೆಯುತ್ತಿತ್ತು. ಈಗ ಮೊದಲಿನ ಸಂಭ್ರಮ ಉಳಿದಿಲ್ಲ. ಮೂರು ದಿನಗಳ ಆಚರಣೆಯು ಒಂದು ದಿನಕ್ಕಿಳಿದಿದೆ" ಎಂದು ಅಂದಿನ ನಾಡಹಬ್ಬ ನೆನಪಿಸುತ್ತ ನಿವೃತ್ತ ಸಿದ್ದೇಶ್ವರ ಶಾಲೆಯು ಮುಖ್ಯೋಧ್ಯಾಪಕ ಶ್ರೀ.ಲ.ಸಿ.ಹನಗಂಡಿ ಅವರು ಹೇಳುತ್ತಾರೆ.

ಹೀಗೆ ಕನ್ನಡ ಪ್ರೇಮ ಹಾಗು ಪ್ರಜ್ಞೆ ತುಂಬಿಕೊಂಡು ಸಂಪೂರ್ಣ ಜಾಗೃತರಾದ ಡಾ॥ ಸಿದ್ಧನಾಥ ಬಳ್ಳಾರಿ ಅವರು ನಾಡಹಬ್ಬದ ಆಚರಣೆಯ ಮೂಲಕ ಕನ್ನಡ ಮಂತ್ರವನ್ನು ಸಾವಿರಗಟ್ಟಲೇ ಕಿವಿಗಳಲ್ಲಿ ಊದಿ ಜನತೆಯಲ್ಲಿ ಜಾಗೃತಿಯನ್ನು ಮೂಡಿಸಿ ಕನ್ನಡತನವನ್ನು ಮೈದುಂಬಿಸಿದ್ದಾರೆ.

ಡಾ॥ ಸಿದ್ಧನಾಥ ಅವರ ಈ ಪ್ರೇರಣೆ-ಪ್ರಭಾವದಿಂದ ಮೂವತ್ತು ವರ್ಷಗಳಿಂದಲೂ **'ಸುಯೋಧ ಕನ್ನಡ ಸಂಘ'**ವು ನಾಡಹಬ್ಬವನ್ನು ಆಚರಿಸುತ್ತ ಬಂದಿದೆ. ಇದರ ಅಧ್ಯಕ್ಷರಾಗಿ ಶ್ರೀ ಕೆ.ಎನ್. ಹೂಗಾರ, ಶ್ರೀ ಡಿ.ಬಿ. ಹೆಬ್ಬಾಳ, ಡಾ. ಬಿ.ಬಿ. ಪೂಜಾರಿ ಮುಂತಾದವರು ಕನ್ನಡ ನಾಡು-ನುಡಿಯ ಮೇಲಿನ ಪ್ರೀತಿ, ಅಭಿಮಾನದಿಂದ ಅದನ್ನು ಇದುವರೆಗೂ ಬೆಳೆಸಿಕೊಂಡು ಬಂದಿದ್ದಾರೆ.

ಇಲ್ಲಿ ಇನ್ನೊಂದು ಮಾತನ್ನು ಅಭಿಮಾನದಿಂದ ಹೇಳ ಬಯಸುತ್ತೇನೆ. - ಈ ಸುಯೋಧ ಕನ್ನಡ ಸಂಘಕ್ಕೆ ಕನ್ನಡದ ಕಟ್ಟಾ ಅಭಿಮಾನಿಗಳಾದ ಶ್ರೀಮತಿ ರೋಹಿಣಿತಾಯಿ ಜಾಮದಾರ ಅವರು ಸೊಲ್ಲಾಪುರ ಸಮೀಪದ ವಿಜಾಪುರ ರಸ್ತೆಯಲ್ಲಿಯ ತಮ್ಮ ಹೊಲವನ್ನು ಮನೆಕಟ್ಟುವ ಸ್ಥಳ (plot) ಮಾಡಿ ಅತಿ ಕಡಿಮೆ ದರದಲ್ಲಿ 100 ಜನ ಕನ್ನಡಿಗರಿಗೆ ಮಾತ್ರ ನೀಡಿ, ಮಧ್ಯದಲ್ಲಿಯ 10 ಗುಂಠೆ ಸ್ಥಳವನ್ನು ಪುಕ್ಕಟೆಯಾಗಿ ಸುಯೋಧ ಕನ್ನಡ ಸಂಘಕ್ಕೆ ನೀಡಿದ್ದಾರೆ. ಅದು

ಇಂದು **'ರೋಹಿಣಿ ನಗರ'** ಎಂಬ ಹೆಸರಿನಿಂದ ಕನ್ನಡಿಗರ ವಸತಿ ನಿಲಯವಾಗಿ ಮೆರೆಯುತ್ತಿದೆ. ಮಧ್ಯದ ಸ್ಥಳದಲ್ಲಿ ನಾಡದೇವಿಯನ್ನು ಪ್ರತಿಷ್ಠಾಪಿಸಿ, ವೇದಿಕೆಯನ್ನು ನಿರ್ಮಿಸಿ, ಪ್ರತಿವರ್ಷ ೨ ದಿನಗಳ ವರೆಗೆ ಪ್ರಸಿದ್ಧ ವಿದ್ವಾಂಸರು, ಕವಿಗಳು, ಸಂಗೀತಗಾರರು ನಾಟಕಕಾರರು ಮುಂತಾದವರನ್ನು ಕರೆಯಿಸಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾರೆ. ದತ್ತಕ ಯೋಜನೆ, ವಚನಸ್ಪರ್ಧೆ, ಭಾಷಣ ಸ್ಪರ್ಧೆಗಳು ಕೂಡ ನಡೆಯುತ್ತವೆ. “ಬೆಳಗಾಂವದಲ್ಲಿ ಕೂಡ ಕನ್ನಡಿಗರದ್ದೇ ವಸತಿ ನಿಲಯವಾದರೆ ಅವರಲ್ಲಿ ಪರಸ್ಪರ ಮಧುರ ಬಾಂಧವ್ಯ ಬೆಳೆಯಲು ಅನುಕೂಲವಾಗುತ್ತದೆ” ಎಂದು ಪಾಟೀಲ ಪುಟ್ಟಪ್ಪನವರು 'ನಾಡುನುಡಿ' ಗ್ರಂಥದಲ್ಲಿ ಹೇಳಿದ ಮಾತು ಇಲ್ಲಿ ನೆನಪಿಗೆ ಬರುತ್ತದೆ. ನಿಜವಾಗಿಯೂ ಕನ್ನಡಿಗರು ಒಂದೆಡೆ ಪರಸ್ಪರ ಸೇರಿ ನಾಡಹಬ ಆಚರಿಸಿ ಮಹಾರಾಷ್ಟ್ರದ ಗಡಿನಾಡಿನಲ್ಲಿ ಮಧುರ ಭಾಂದವ್ಯ ಬೆಳೆಯುವಂತೆ ಮಾಡಿದ ರೋಹಿಣಿ ಜಾಮದಾರ ಹಾಗು ಸುಯೋಧ ಕನ್ನಡ ಸಂಘದ ಈ ಕಾರ್ಯ ಶ್ಲಾಘಿಸುವಂತಹದು.

## ೧೩. ಆಯೋಗಗಳು: ಡಾ|| ಸಿದ್ದನಾಥ ಬಳ್ಳಾರಿ ಅವರ ಪಾತ್ರ

ಕರ್ನಾಟಕ ಏಕೀಕರಣ ಚಳುವಳಿಯ ಹೋರಾಟಗಾರರಾಗಿ ಡಾ|| ಸಿದ್ದನಾಥ ಬಳ್ಳಾರಿ ಅವರ ಪಾತ್ರವು ಅತ್ಯಂತ ಮಹತ್ವದ್ದಾಗಿದೆ. ಸ್ವಾತಂತ್ರ್ಯ ನಂತರ ಅಖಂಡ ಕರ್ನಾಟಕ ಉದಯವಾಗಬೇಕೆಂದು ಕನ್ನಡಿಗರೆಲ್ಲರೂ ಬಯಸಿದರು. ಇದಕ್ಕೆ ಕಾರಣವೆಂದರೆ ಒಂದು ಭಾಷೆಯನ್ನಾಡುವ ಜನರು ಒಂದೆಡೆಗೆ ಇರುವುದರಿಂದ ಸುಗಮ ಆಡಳಿತ ಸೌಲಭ್ಯ ದೊರೆಯುವದು. ಅಧಿಕ ಪ್ರಗತಿ ಸಾಧ್ಯವಾಗುವದು, ಅದಕ್ಕಾಗಿ ಭಾಷಾಪ್ರಾಂತ ರಚನೆಯಾಗಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯಿಸಿದರು. ಸ್ವಾತಂತ್ರ್ಯ ಪೂರ್ವದಲ್ಲಿ ಬಂದ ಸೈಮನ್ ಆಯೋಗವನ್ನು ಕನ್ನಡಿಗರು ಸ್ವೀಕರಿಸಲಿಲ್ಲ.

ಮುಂದೆ 1948ರಲ್ಲಿ ಎಸ್. ಕೆ. ಧಾರ್ ಆಯೋಗವು ಬಂದಿತಾದರೂ, ಅದು ಭಾಷಾ ಪ್ರಾಂತರಚನೆಯನ್ನು ಪುರಸ್ಕರಿಸಲಿಲ್ಲ. ಅದನ್ನು ಮುಂದೂಡಲು ಪ್ರಯತ್ನಿಸಿತು, ಗಡಿನಾಡು ಬಳ್ಳಾರಿಯಿಂದ ಹೊಸದಾಗಿ ಸೊಲ್ಲಾಪುರಕ್ಕೆ ಬಂದ ಡಾ|| ಸಿದ್ಧನಾಥರಿಗೂ ಧಾರಾ ಆಯೋಗವು ಸರಿಯೆನಿಸಲಿಲ್ಲ. ಬಳ್ಳಾರಿಯು ಆಂಧ್ರಕ್ಕೆ, ಸೋಲ್ಲಾಪುರವು ಮಹಾರಾಷ್ಟ್ರಕ್ಕೆ ಸೇರಬಾರದೆಂಬುದೇ ಡಾ|| ಸಿದ್ಧನಾಥರ ಆಂತರಿಕ ಇಚ್ಛೆಯಾಗಿತ್ತು. ಅದರ ನಂತರ ಬಂದ ಜೆ.ವಿ.ಪಿ ಸಮಿತಿ ವರದಿಯಿಂದಲೂ ಕರ್ನಾಟಕಕ್ಕೆ ನಿರಾಶೆಯಾಯಿತು. ಇದರಿಂದ ಕನ್ನಡಿಗರು ಮತ್ತಷ್ಟು ಜಾಗೃತರಾಗಿ, ಹೋರಾಟ ಮಾಡಬೇಕಾಯಿತು. ಮರಾಠಿಗರು ಕೂಡ ಬಿಡದೆ 'ಬೆಳಗಾಂವಿ ಸೊಲ್ಲಾಪುರ ಸಹಿತ ಮಹಾರಾಷ್ಟ ಝಾಲಾಚ ಪಾಯಿಜೆ' ಎಂಬ ಕೂಗನ್ನು ಕೇಂದ್ರ ಸರಕಾರದ ವರೆಗೆ ಮುಟ್ಟಿಸಿದರು.

ಅಷ್ಟೇ ಅಲ್ಲ, ಮರಾಠಿಗರು ಮುಂದಾಲೋಚನೆಯಿಂದ ಸೋಲ್ಲಾಪುರವನ್ನು ಎರಡು ಭಾಗಗಳನ್ನಾಗಿ ಮಾಡಿದರು. 1) ಉತ್ತರ ಸೋಲ್ಲಾಪುರ 2) ದಕ್ಷಿಣ ಸೊಲ್ಲಾಪುರ, ಮುಂದೆ ಸೋಲ್ಲಾಪುರ ಜಿಲ್ಲೆ ಕೈಬಿಡಲೇಬೇಕಾಗಿ ಬಂದಾಗ ಸೊಲ್ಲಾಪುರ ನಗರ ಹಾಗೂ ಕೆಲವು ಹಳ್ಳಿಗಳಿಂದ ಕೂಡಿದ ಉತ್ತರ ಸೊಲ್ಲಾಪುರವನ್ನು ಇಟ್ಟುಕೊಳ್ಳಬೇಕು ಎಂಬುದು ಅವರ ಧೂರ್ತ ವಿಚಾರ. ಇದು ಜಯದೇವಿತಾಯಿಯವರಿಗೆ, ಡಾ|| ಸಿದ್ದನಾಥರಿಗೆ ಹಾಗು ಅಭಿಮಾನಿ ಕನ್ನಡಿಗರಿಗೆ ನೋವನ್ನುಂಟು ಮಾಡಿತು.

ಅವರೆಲ್ಲರೂ ಕರ್ನಾಟಕದ ಗಣ್ಯರೊಂದಿಗೆ ಚರ್ಚೆಯನ್ನು ನಡೆಸಿದರು. ಕನ್ನಡಿಗರು ಎಷ್ಟೇ ಪ್ರಯತ್ನಪಟ್ಟರೂ ಗಡಿನಾಡಿನ ಕೆಲವು ಭಾಗಗಳು ಕೈಬಿಟ್ಟು ಹೋದವು.

1953 ರಂದು ಕೇಂದ್ರ ಸರಕಾರ ಶ್ರೀ ಸಯದ್ ಅಲಿ ಅಧ್ಯಕ್ಷರು, ಪಂಡಿತ ಹೃದಯನಾಥ ಕುಂಜರು ಮತ್ತು ಕೆ.ಎಂ.ಫಣಿಕ್ಕರ ಸದಸ್ಯರು ಆದ ರಾಜ್ಯ ಪುನರಚನಾ ಆಯೋಗವನ್ನು ನೇಮಿಸಲ್ಪಟ್ಟಿತು. ಈ ತ್ರಿಮೂರ್ತಿಗಳ ಆಯೋಗವು ಕೂಡ ಮಹಾರಾಷ್ಟ್ರ ಪರವೆಂಬಂತೆ ಕರ್ನಾಟಕದ ಮಹತ್ವದ ಮುಖ್ಯ ಭಾಗಗಳಾದ ಕಾಸರಗೋಡವು ಕೇರಳಕ್ಕೆ, ವಿವಾದಾಸ್ಪದ ಬಳ್ಳಾರಿ ಭಾಗವನ್ನು ಕರ್ನಾಟಕಕ್ಕೆ ಸೇರಿಸಿದ್ದರು. ಕೆ.ಎಂ. ಫಣಿಕ್ಕರ ಮಲೆಯಾಳಿಯಾದುದರಿಂದ ಕಾಸರಗೋಡನ್ನು ಕೇರಳಕ್ಕೆ ಮಾಡಿದ್ದರು. ಡಾ|| ಸಿದ್ಧನಾಥ ಬಳ್ಳಾರಿ ಅವರಿಗೆ

ಗಡಿನಾಡಿನ ಈ ಭಾಗಗಳು ಕಳೆದು ಹೋದದ್ದು ಕಳವಳವನ್ನುಂಟು ಮಾಡಿತು. ಅಖಂಡ ಕರ್ನಾಟಕದ ನಿರ್ಮಾಣಕ್ಕಾಗಿ ನಡೆದ ಎಲ್ಲ ಚಟುವಟಿಕೆಗಳಲ್ಲಿ ಅವರು ಭಾಗವಹಿಸುತ್ತಿದ್ದರು. ಗಡಿನಾಡಿನ ಅನೇಕ ಸಂಘಟನೆಗಳಲ್ಲಿ ಪಾಲ್ಗೊಂಡರು. ಅಖಂಡ ಕರ್ನಾಟಕ ಏಕೀಕರಣದ ಉಪಾಧ್ಯಕ್ಷಿಣಿಯಾದ ಜಯದೇವಿತಾಯಿ ಅವರೊಂದಿಗೆ ಸಭೆಗಳಲ್ಲಿ ಭಾಗವಹಿಸಿ, ಮನವಿಗಳನ್ನು ಸಲ್ಲಿಸುತ್ತಿದ್ದರು.

ತಮ್ಮ ಜನ್ಮಭೂಮಿ ಬಳ್ಳಾರಿಯ ಬಗೆಗೆ ಅವರಿಗೆ ಸಾಕಷ್ಟು ಕುತೂಹಲವಿದ್ದಿತು. ಆಗಾಗ ಅಲ್ಲಿಯ ರಾಜಕಾರಣಿಗಳು, ಹೋರಾಟಗಾರರೂ ಆದ ಸದ್ಯೋಜಾತರಿಗೆ ಹಾಗು ಕೊಟ್ಟೂರಿನಲ್ಲಿರುವ ಮಗ ಶಿವಾನಂದನಿಗೆ ಪತ್ರ ಬರೆದು ಬಳ್ಳಾರಿ ವಿಷಯವನ್ನು ತಿಳಿದುಕೊಳ್ಳುತ್ತಿದ್ದರು.

"ಆಂಧ್ರದ ದವಡೆಯಲ್ಲಿ ಸಿಕ್ಕಿದ್ದ ಬಳ್ಳಾರಿಯ ವಿಷಯದಲ್ಲಿ ಈಚೆಗೆ ನಡೆದ ಶ್ರೀ ವಾಂಛೂರವರ ಮತ್ತು ಶ್ರೀ ಮಿಶ್ರರವರ ಮತಭೇದವನ್ನು ಕುರಿತು. ಜನರು ಶ್ರೀ ಮಿಶ್ರರವರನ್ನು ತಮ್ಮ ನಿರ್ಣಯದ ನಿಲುವಿನ ಬಗೆಗೆ ಸಮರ್ಥಿಸಲು ಕೇಳಿದರು. ಆಗ ಅವರು ಬಳ್ಳಾರಿಯ ಪೂರ್ವೇತಿಹಾಸದ ಪರಂಪರೆಯ ಪ್ರಕಾರ ನೋಡಬೇಕಾದರೆ ಅದು ನಿಜವಾಗಿಯೂ ಕನ್ನಡಿಗರ ಸೊತ್ತಾಗಿದೆಯೇ ಹೊರತು ವ್ಯವಹಾರಿಕ ನಿಮಿತ್ತದಿಂದ ಇತ್ತೀಚೆಗೆ ಬಂದು ನೆಲಸಿರುವ ಆಂಧ್ರರಿಗೆ ಸಲ್ಲತಕ್ಕದ್ದಲ್ಲವೆಂದು ತಮ್ಮ ನಿರ್ದಾಕ್ಷಿಣ್ಯವಾದ ನ್ಯಾಯವನ್ನು ಕೊಟ್ಟಿರುವರು. ಆ ಪ್ರಕಾರ ಈ ನಮ್ಮ ಸೋಲ್ಲಾಪುರದ ಮೇಲೆ ಸಹ ಐತಿಹಾಸಿಕ ಪರಂಪರೆಯ ದೃಷ್ಟಿಯಿಂದ ಕನ್ನಡಿಗರಿಗೆ ಹಕ್ಕಿರುತ್ತದೆಂದು ಹೇಳಿದ್ದಾರೆ.

ನೂರು ವರ್ಷಗಳ ಹಿಂದಿನ ಎಲ್ಲ ಲೆಕ್ಕ ಪತ್ರಗಳು ಕನ್ನಡದಲ್ಲಿರುವುದನ್ನು. ನೋಡಿದರೆ ಅವರ ಮಾತು ಸತ್ಯವೆಂದು ತಿಳಿಯುತ್ತದೆ. ನಾಡ ಪ್ರೇಮ ಹಾಗೂ ಭಕ್ತಿಯ ಶಕ್ತಿಗಳನ್ನು ಅರಿತುಕೊಂಡು ಮುನ್ನುಗ್ಗುವ ಹಾಗು ಮರಾಠಿಗರಿಂದ ಪಾರಾಗಲು ಯತ್ನಿಸುತ್ತಿರುವ ನಮ್ಮ ಈ ಸಾಹಸದಲ್ಲಿ ಕನ್ನಡ ಸೋದರ ಸೋದರಿಯರು ಬೆನ್ನಿಗೆ ಭೀಮ ರಕ್ಷೆಯಾಗಿ ನಿಲ್ಲುವರೆಂದು ಭಾವಿಸುತ್ತೇನೆ ಎಂದು ಜಯದೇವಿತಾಯಿಯವರು ಅಂದು ಬಯಸಿ ಹೇಳಿದ್ದರು. ಇಲ್ಲಿ ಬಳಾರಿ ಹಾಗು ಸೊಲ್ಲಾಪುರ ಎರಡನ್ನು ಕುರಿತು ಅವರು ಹೇಳಿದ್ದು ಡಾ|| ಸಿದ್ದನಾಥ ಅವರಿಗೂ ಅನ್ವಯಿಸುತ್ತದೆ. ಬಳ್ಳಾರಿ, ಸೊಲ್ಲಾಪುರ - ಎರಡೂ ಕರ್ನಾಟಕದ ಅವಿಭಾಜ್ಯ ಅಂಗಗಳೇ ಕನ್ನಡದ ಕಟ್ಟಾ ಅಭಿಮಾನಿಗಳಾದ ಅವರು ಅಖಂಡ ಕರ್ನಾಟಕ ಒಂದಾಗಲೆಂದು ಸದಾ ಹಾರೈಸುತ್ತಿದ್ದರು. ಇಂದಿರಾಗಾಂಧಿಯವರು ಹುಬ್ಬಳ್ಳಿಗೆ ಬಂದಾಗ ಬಳ್ಳಾರಿ, ಅಕ್ಕಲಕೋಟ, ಸೋಲ್ಲಾಪುರ, ಬೀದರ್, ಜತ್ತ, ಗಡಹಿಂಗ್ಲಜ, ಮಡಕಶಿರಾ, ಕಾಸರಗೋಡು, ನೀಲಗಿರಿ ಮೊದಲಾದವು ಕನ್ನಡ ಪ್ರದೇಶಗಳಾಗಿದ್ದು, ಕರ್ನಾಟಕದಲ್ಲಿ ಸೇರಬೇಕೆಂದೂ ಅಂಕಿ, ಸಂಖ್ಯೆ, ನಕಾಶದೊಂದಿಗೆ ಡಾ|| ಸಿದ್ದನಾಥ ಬಳ್ಳಾರಿ ಅವರು ಜಯದೇವಿತಾಯಿ ಹಾಗು ನಿಯೋಗದೊಂದಿಗೆ ಬೆಟ್ಟಿಯಾಗಿ ಮನವಿಯನ್ನು ಸಲ್ಲಿಸಿದ್ದರು.

ಹಿಂದೊಮ್ಮೆ ಲಾಲಬಹದ್ದೂರ ಶಾಸ್ತ್ರೀ ಅವರು ನಾಗಪುರಕ್ಕೆ ಬಂದಾಗಲೂ ಸೊಲ್ಲಾಪುರವು ಕನ್ನಡಿಗರದೆಂಬ ಮನವಿಯನ್ನು ನೀಡಿ, ಅವರೊಂದಿಗೆ ಡಾ|| ಸಿದ್ಧನಾಥ ಬಳ್ಳಾರಿ ಅವರು ಚರ್ಚಿಸಿದ್ದರು. ಅವರು ಗಡಿನಾಡ

ಸಮಸ್ಯೆಯನ್ನು ಬಗೆಹರಿಸುವುದಾಗಿ ಆಶ್ವಾಸನೆ ಇತ್ತಿದ್ದರು. ರಾಜ್ಯ ಪುನರ್ ನಿರ್ಮಾಣ ಆಯೋಗದಿಂದಲೂ ನ್ಯಾಯ ದೊರೆಯದಿದ್ದಾಗ ಎಲ್ಲೆಡೆ ಪ್ರತಿಭಟನಾತ್ಮಕ ಚಳುವಳಿ ಪ್ರಾರಂಭವಾಯಿತು. ಆಗ ಬಾಬಾ ಸಾಹೇಬ ವಾರದ ಅವರ ನೇತೃತ್ವದಲ್ಲಿ ಜಯದೇವಿತಾಯಿಯವರು ಸಭೆಯನ್ನು ಕರೆದರು. ಆ ಸಭೆಯಲ್ಲಿ ಡಾ॥ ಸಿದ್ಧನಾಥ ಬಳ್ಳಾರಿ ಅವರು ಚೆನ್ನವೀರ ಕಲ್ಯಾಣಶೆಟ್ಟಿ, ಶಾಂತಪ್ಪಣ್ಣ ಯಳಮೇಲಿ, ನಾಗಪ್ಪಣ್ಣಾ ಕಾಡಾದಿ, ಶಂಕರ ಮೂಗಿ, ರಾಜಶೇಖರ ಮಡಕಿ ಮುಂತಾದವರೊಂದಿಗೆ ಗೊತ್ತುವಳಿ ಮಂಡಿಸಿ, ಮನವಿಯನ್ನು ಕಳುಹಿಸಿದರು.

"ಸೊಲ್ಲಾಪುರ, ಅಕ್ಕಲಕೋಟ, ದಕ್ಷಿಣ ಸೊಲ್ಲಾಪುರ, ಮಂಗಳವೇಡ, ಜತ್ತ, ಗಡಹಿಂಗ್ಲೆಜ, ಶಿರೋಳ, ಹತ್ತಕಣಗಿಲ, ಹೈದರಾಬಾದ ಪ್ರಾಂತದ ಉಸ್ಮಾನಾಬಾದ ಜಿಲ್ಲೆಯ ಉಮರ್ಗಾ, ನಳದುರ್ಗ ಮೊದಲಾದ ಪ್ರದೇಶಗಳು ಕರ್ನಾಟಕ್ಕೆ ಸೇರಬೇಕು ಎಂದು ಮನವಿಯನ್ನು ಸಿದ್ದಪಡಿಸಿ ಮೇಲಿಂದ ಮೇಲೆ ದಿಲ್ಲಿಗೆ ಹೋಗಿ ಅದನ್ನು ಕೊಡುವುದು ಅಲ್ಲದೆ ಡಾ॥ ಸಿದ್ಧನಾಥ ಬಳ್ಳಾರಿ ಅವರು ಹಾಗು ಶಿಷ್ಟ ಮಂಡಳವು ಅಲ್ಲಿಯ ಪ್ರಮುಖರಿಗೆ ಮಹಾರಾಷ್ಟ್ರ ನಾಯಕರಿಗೆ ಮನಮುಟ್ಟುವಂತೆ ತಿಳಿಸಿ ಹೇಳಿದರು. ಹೀಗೆ ಮೇಲಿಂದ ಮೇಲೆ ದಿಲ್ಲಿಗೆ ಈ ಮೇಲಿನ ವಿಷಯಕ್ಕಾಗಿ ಹೋಗುವದರಿಂದ ಆರ್ಥಿಕ ಬೆಂಬಲವು ಬೇಕಾಗುತ್ತಿತ್ತು.

- ಇಂತಹ ಸಮಯದಲ್ಲಿಯೂ ಹಿಂಜರಿಯದೆ, ಶಿಷ್ಟ ಮಂಡಳಗಳನ್ನು ಸಂಘಟಿಸಿ ದಿಲ್ಲಿಯ ವರಿಷ್ಠರಿಗೆ ಮನವಿಯನ್ನು ಸಮರ್ಪಿಸುವ ಭಗೀರಥ ಪ್ರಯತ್ನವನ್ನು ಕನ್ನಡ ನಾಡಿಗಾಗಿ ಸದಾ ಮಾಡುತ್ತಿರುವ ಡಾ॥ ಸಿದ್ಧನಾಥ ಬಳ್ಳಾರಿಯವರನ್ನು ಕಂಡು ಎಸ್. ನಿಜಲಿಂಗಪ್ಪ, ಎಸ್.ಆರ್. ಕಂಠಿ, ಹಳ್ಳಿಕೇರಿ ಗುದ್ದೆಪ್ಪ ಮುಂತಾದವರು ಬಹಳ ಪ್ರೀತಿ, ವಿಶ್ವಾಸದಿಂದ ಕಾಣುತ್ತಿದ್ದರು. ಎಸ್. ನಿಜಲಿಂಗಪ್ಪ ಅವರಂತೂ ಸೋಲ್ಲಾಪುರಕ್ಕೆ ಬಂದಿಳಿಯುವಾಗ ಸ್ವಾಗತಕ್ಕೆ ಹೋದ ಡಾ॥ ಸಿದ್ಧನಾಥ ಅವರನ್ನು ನೋಡಿದೊಡನೆ "ಓ ಡಾಕ್ಟರ್........." ಎಂದು ಸಲುಗೆಯಿಂದ ಕರೆದು ಕೈಕುಲುಕುತ್ತಿದ್ದರು.

1962ರಲ್ಲಿ ಕೇಂದ್ರವು ನಾಲ್ಕು ಜನರ ಸಮಿತಿಯೊಂದು ನೇಮಿಸಿತು. ಅದರಲ್ಲಿರುವ ಕರ್ನಾಟಕದ ಎಸ್. ಎಸ್. ಮಳಿಮಠ, ಎಚ್, ಚೆನ್ನಯ್ಯ ಅವರನ್ನು ಸೋಲ್ಲಾಪುರಕ್ಕೆ ಡಾ॥ ಸಿದ್ದನಾಥರು ಆಹ್ವಾನಿಸಿದರಲ್ಲದೆ ಗಡಿಭಾಗ ಸೊಲ್ಲಾಪುರದ ಸ್ಥಿತಿ - ಗತಿಯ ಪರಿಚಯ ಮಾಡಿಕೊಟ್ಟರು.

ಮಹಾರಾಷ್ಟ್ರ ಸರಕಾರವಾದರೂ ಸುಮ್ಮನೆ ಕುಳಿತಿರದೆ ಮರಾಠಿ ಚಳುವಳಿಗಾರರಿಗೆ ಪ್ರೋತ್ಸಾಹ ಕೊಡುತ್ತಿದ್ದೀತು. ಉಗ್ರ ಸ್ವರೂಪದ ಅವರ ಚಳುವಳಿಯು ಜನತೆಯ ಮೇಲೆ ಹೆಚ್ಚು ಪರಿಣಾಮವನ್ನುಂಟು ಮಾಡುತ್ತಿತ್ತು. ಅವರ ಬೇಡಿಕೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದವು. ಬರಬರುತ್ತ ಗಡಿನಾಡ ಕನ್ನಡಿಗರು ಮಹಾರಾಷ್ಟ್ರದವರ ದಬ್ಬಾಳಿಕೆಗೆ ತುತ್ತಾಗಿ ಬದುಕುವ ಸ್ಥಿತಿ ಬಂದಿತು. (ಕನ್ನಡ ಶಾಲೆಗಳು ಮಹಾರಾಷ್ಟ್ರದವರ ದಬ್ಬಾಳಿಕೆಗೆ ತುತ್ತಾಗಿ ಬದುಕುವ ಸ್ಥಿತಿ ಬಂದಿತು.) ಕನ್ನಡ ಶಾಲೆಗಳು ಒಂದೊಂದಾಗಿ ಮುಚ್ಚುತ್ತ ಬಂದವು. "ಬೆಳಗಾಂವಿ, ಬೀದರ, ಕಾರವಾರ, ಬಾಲ್ಕಿ, ನಿಪ್ಪಾಣಿ ಸಹಿತ ಮಹಾರಾಷ್ಟ್ರ ಝಾಲಚ ಪಾಯಿಜೆ" ಎಂಬ ಮರಾಠಿಗರ ಬೇಡಿಕೆಯ ಕೂಗು ಕೇಂದ್ರದ ವರೆಗೆ ಪ್ರತಿಧ್ವನಿಗೈಯುತ್ತಿತ್ತು.

ಕರ್ನಾಟಕ - ಮಹಾರಾಷ್ಟ್ರದ ಈ ಗಡಿ ಸಮಸ್ಯೆ ಕೊನೆಗೊಮ್ಮೆ ಬಗೆಹರಿಸಬೇಕೆಂದು 25 - 10 - 66 ರಂದು ಏಕ ಸದಸ್ಯ ಆಯೋಗ ಗೊತ್ತುಪಡಿಸಿ, ಮೆಹರಚಂದ ಮಹಾಜನ (ಉತ್ತರ ಪ್ರದೇಶದ ಪ್ರಸಿದ್ಧ ನ್ಯಾಯಾಧೀಶ) ಎಂಬವರನ್ನು ನೇಮಿಸಿತು.

ಕರ್ನಾಟಕ ಏಕೀಕರಣ ಚಳುವಳಿಯ ಮೊದಲ ಹಂತ ಕನ್ನಡ ಶಿಕ್ಷಣವಾದರೆ, ಎರಡನೆಯ ಹಂತ ಕನ್ನಡ ಜಾಗೃತಿಯಾಗಿದೆ. ಕನ್ನಡಿಗರು ಜಾಗೃತರಾಗದೆ ಸ್ವತಂತ್ರ ನಾಡನ್ನು ಕಟ್ಟಲು ಸಾಧ್ಯವಿಲ್ಲವೆಂಬುದು ಡಾ|| ಸಿದ್ಧನಾಥ ಅವರಿಗೆ ತಿಳಿದಿತ್ತು. ಸಾಮಾನ್ಯ ಜನರಿಗೆ ತಮ್ಮ ಭಾಷೆಯನ್ನು ನಮೂದಿಸುವುದರಿಂದ ಭಾಷಾವಾರು ರಾಜ್ಯಗಳ ರಚನೆಯಾಗುತ್ತದೆ ಎಂದಾಗಲಿ, ಸೊಲ್ಲಾಪುರವು ಕರ್ನಾಟಕಕ್ಕೆ ಸೇರುತ್ತದೆಯೆಂದಾಗಲಿ ತಿಳಿದಿರುವುದಿಲ್ಲ. ಅಂತಹ ಮುಗ್ಧ, ಅನಕ್ಷರಸ್ಥ ಜನತೆಯು ತಿಳಿಯದೆ ಮೋಸ ಹೋಗುವ ಸಂಭವವಿತ್ತು. ಜನಜಾಗೃತಿಗಾಗಿ ಡಾ|| ಸಿದ್ಧನಾಥ ಬಳ್ಳಾರಿಯವರು ಸಭೆಯನ್ನು ಏರ್ಪಡಿಸಿ ಜಯದೇವಿ ತಾಯಿಯವರೊಂದಿಗೆ ಚರ್ಚಿಸಿ, ನಿರ್ಣಯ ಕೈಕೊಂಡರು.

ಡಾ|| ಸಿದ್ಧನಾಥರು ಸೊಲ್ಲಾಪುರ ಜಿಲ್ಲೆಯಲ್ಲೆಲ್ಲ ಅಡ್ಡಾಡಿ ಕನ್ನಡ ಜಾಗೃತಿಯನ್ನು ಕೈಕೊಂಡರು. ಸ್ವಾತಂತ್ರ್ಯ ದೊರೆತ ನಂತರದ ಜನಗಣತಿಯಲ್ಲಿ ಕನ್ನಡಿಗರಿಗೆ ಸೋಲುಂಟಾಗಿದ್ದರಿಂದ ಜನರು ಎಚ್ಚರಿಕೆಯಿಂದಿದ್ದರೆಂದು ಕಾಣುತ್ತದೆ. ಡಾ|| ಸಿದ್ದನಾಥ ಬಳ್ಳಾರಿಯವರು ಹೋದಂತೆಲ್ಲ ಜನರು ಸ್ಪಂದಿಸಿದರು. ಅಂದು ಅವರೊಂದಿಗೆ ನಾಗಪ್ಪಣ್ಣ ಕಾಡಾದಿ, ಜಯದೇವಿಯಂತಹ ಹಿರಿಯ ಮುಂದಾಳುಗಳು ಕೂಡ ಹಳ್ಳಿ ಹಳ್ಳಿಗೆ ಬೆಟ್ಟಿ ಕೊಟ್ಟಿದ್ದು ಜನರ ನೆನಪಿನಲ್ಲಿತ್ತು. ಅಂತೆಯೇ ಅವರು ಸಿದ್ಧನಾಥ ಬಳ್ಳಾರಿಯವರ ಮಾತಿಗೆ ತಕ್ಷಣ ಒಪ್ಪಿದರು.

ಸೋಲ್ಲಾಪುರಕ್ಕೆ ಮೆಹರಚಂದ ಮಹಾಜನ ಅವರು ಬಂದಾಗ ಹಳ್ಳಿ ಹಳ್ಳಿಯ ಜನರು ಎತ್ತಿನ ಗಾಡಿಗಳ ಮೂಲಕ ಸಾಕಷ್ಟು ಸಂಖ್ಯೆಯಲ್ಲಿ ಬಂದರು. ಇದರಿಂದ ಅವರಲ್ಲಿಯೂ ಹೆಚ್ಚು ಜಾಗೃತಿಯುಂಟಾಗಿದೆಯೆಂದು ತಿಳಿದು ಬರುತ್ತದೆ. ಆಗ ಅವರೆಲ್ಲ ಮಹಾಜನ ಅವರ ಮುಂದೆ ಸಾಕ್ಷಿ ಹೇಳಿದರಲ್ಲದೆ, ಕನ್ನಡದ ಪರವಾಗಿ ಸಾಕಷ್ಟು ಮನವಿಗಳು ಬಂದವು. ಆಗ ಮಹಾಜನರೇ ಆಶ್ಚರ್ಯಚಕಿತರಾಗಿ “ಇಷ್ಟು ಜನ ಕನ್ನಡಿಗರಿದ್ದಾರೆಯೇ” ಎಂದು ಪ್ರಶ್ನಿಸಿದರು.

ಕರ್ನಾಟಕ ಏಕೀಕರಣ ಚಳುವಳಿಗಾರರೆನಿಸಿದ ಡಾ|| ಸಿದ್ಧನಾಥ ಬಳ್ಳಾರಿ ಅವರು ದಿಲ್ಲಿಯ ಪ್ರಮುಖರಿಗೆ ಸಮರ್ಪಿಸಿದ ಮನವಿಗಳನ್ನು ಮಹಾಜನರಿಗೆ ತೋರಿಸಿದಾಗ ಅವುಗಳನ್ನು ಕೂಲಂಕುಷವಾಗಿ ಅಧ್ಯಯನ ಮಾಡಿದರು. ಜನತೆಯ ಆಡುಭಾಷೆಯೊಂದಿಗೆ, ಪರಂಪರಾಗತವಾಗಿ ಹರಿದು ಬಂದ ಜನಪದ ಸಂಸ್ಕೃತಿಯ ಪ್ರತೀಕಗಳಾದ ಲಾವಣಿ, ಗೀಗೀ ಪದ, ಭಜನಾ ಮೇಳ ಹಂತಿಪದಗಳಲ್ಲದೆ ಕೀರ್ತನೆ, ಪುರಾಣಕಾರರನ್ನು ಕಂಡು ಪರೀಕ್ಷಿಸಿದರು. ಈ ಎಲ್ಲದರಲ್ಲಿಯೂ ಕಂಡು ಬರುವ ಕನ್ನಡ ಸಂಸ್ಕೃತಿಯ ಸ್ಪಷ್ಟ ಕುರುಹುಗಳನ್ನು ನೋಡಿ, ಸೋಲ್ಲಾಪುರವು ಕರ್ನಾಟಕದ್ದಾಗಿದೆ ಎಂದು ಸಾರಿದರು. ಅಲ್ಲದೆ ಸೋಲ್ಲಾಪುರವು ಕರ್ನಾಟಕಕ್ಕೆ ಸೇರಬೇಕೆಂದು ಮಹಾಜನವರದಿಯಲ್ಲಿ ಬರೆದರು.

ಈ ವರದಿಯು ಮಹಾರಾಷ್ಟ್ರಿಗರಿಗೆ ಸಮರ್ಪಕವೆನಿಸಲಿಲ್ಲ. ಚವ್ಹಾಣ ಮುಂತಾದ ನಾಯಕರ ಪ್ರಭಾವದಿಂದ ಮಹಾರಾಷ್ಟ್ರವು ಮಹಾಜನ ವರದಿಯ ನಿರ್ಣಯವನ್ನು ಕೈಬಿಡಲು ಸಾಧ್ಯವಾಯಿತು. ಮಹಾಜನ ವರದಿಯ ತೀರ್ಪು ಬದಲಾಗಬಾರದೆಂದು ಡಾ|| ಸಿದ್ದನಾಥ ಬಳ್ಳಾರಿ ಅವರು ಅನೇಕರಿಗೆ ಹೇಳಿ, ಮನವಿಯನ್ನು ಸಲ್ಲಿಸಿದರು.

ಇಂದಿರಾ ಗಾಂಧಿಯವರು ಬೆಂಗಳೂರಿಗೆ ಬಂದಾಗಲೂ ಕೂಡ ಮಹಾಜನ ವರದಿ ಜಾರಿಯಲ್ಲಿ ಬರಬೇಕೆಂದು ಡಾ|| ಸಿದ್ಧನಾಥ ಬಳ್ಳಾರಿ ಅವರು, ಜಯದೇವಿತಾಯಿಯವರು ಶಿಷ್ಟ ಮಂಡಳದೊಂದಿಗೆ ಮನವಿಯನ್ನು ಸಲ್ಲಿಸಿದರು. ಆಗ ಇಂದಿರಾ ಗಾಂಧೀಯವರು ಅದನ್ನು ಸಮಾಧಾನದಿಂದ ಪರಿಶೀಲಿಸುವುದಾಗಿ ಹೇಳಿದರು.

ಡಾ|| ಸಿದ್ದನಾಥ ಬಳ್ಳಾರಿ, ಚೆನ್ನವೀರ ಕಲ್ಯಾಣಶೆಟ್ಟಿ, ರಾಮಲಿಂಗಪ್ಪ ಶೀಲವಂತ, ಶಂಕರ ಮೂಗಿ ರಾಜಶೇಖರ ಮಡಕಿ ಮುಂತಾದ ಗಡಿಕನ್ನಡಿಗರ ಸಭೆಯು ಜಯದೇವಿತಾಯಿಯವರ ಅಧ್ಯಕ್ಷತೆಯಲ್ಲಿ ನಡೆದು, ಕೇಂದ್ರ ಸರಕಾರವು 'ಮಹಾಜನ ವರದಿ'ಯನ್ನು ವಿಳಂಬ ಮಾಡಿದ್ದಕ್ಕೆ ಖಂಡಿಸಿದರು. ಮರಾಠಿಗರಿಗೆ 'ಮಹಾಜನ ವರದಿ' ಬೇಡವಾಗಿತ್ತು. ಕನ್ನಡಿಗರಿಗೂ ಅದರಲ್ಲಿ ಆಸಕ್ತಿ ಉಳಿಯಲಿಲ್ಲ. ನಮ್ಮ ಕರ್ನಾಟಕದ ನಾಯಕರಂತೂ 'ಮಹಾರಾಷ್ಟ್ರಿಗರಿಗೆ ಮಹಾಜನ ವರದಿ ಬೇಡವಾದರೆ, ಅದು ನಮಗೂ ಬೇಡ' ಎಂದು ಹೇಳತೊಡಗಿದರು. ಆದರೆ ಎಷ್ಟೋ ವರ್ಷಗಳಿಂದ ಮರಾಠಿಗರ ತುಳಿತಕ್ಕೆ ಒಳಪಟ್ಟು ಬೇಸತ್ತು, ಸಿದ್ದರಾಮೇಶ್ವರನ ಪುಣ್ಯಭೂಮಿ ಸೊಲ್ಲಾಪುರ ಕರ್ನಾಟಕವನ್ನು ಸೇರಲಿ ಎಂದು ಹಂಬಲಿಸಿದ ಗಡಿನಾಡಿನ ಕನ್ನಡಾಭಿಮಾನಿಗಳಿಗೆ ನೋವನ್ನುಂಟುಮಾಡಿತು.

ಡಾ|| ಸಿದ್ಧನಾಥ ಬಳ್ಳಾರಿಯವರಿಗೆ ಸೋಲ್ಲಾಪುರವು ಕರ್ನಾಟಕದ ಕೈಬಿಟ್ಟ ನೋವು ಕೊರಗಾಗಿ ಕೊನೆತನಕ ಮನದಲ್ಲಿ ಉಳಿಯಿತು.

1956 ನವಂಬರ 1 ರಂದು ಮೈಸೂರು ರಾಜ್ಯವೆಂದು ಕರೆಯಿಸಿಕೊಂಡು ಮುಂದೆ 17 ವರ್ಷಗಳ ನಂತರ 1-11-1973 ರಂದು 'ಕರ್ನಾಟಕ' ವೆಂಬ ಹೆಸರನ್ನು ಪಡೆಯಿತು. ಇದು ಅವರಿಗೆ ಇದ್ದುದರಲ್ಲಿಯೇ ಸಂತೋಷವನ್ನು ತಂದು ಕೊಟ್ಟಿತೆಂದು ಹೇಳಬಹುದು.

"ಕರ್ನಾಟಕ ಏಕೀಕರಣ ಚಳುವಳಿ" ಎಂದೊಡನೆ ಜಯದೇವಿತಾಯಿ ಲಿಗಾಡೆಯವರ ಚಿತ್ರ ಕನ್ನಡಿಗರ ಮುಂದೆ ನಿಲ್ಲುತ್ತದೆ. ಆದರೆ ಅದರ ಹಿಂದೆ ಎಷ್ಟೋ ಜನರು ಎಲೆಮರೆಯ ಕಾಯಿಯಂತೆ ಜೀವದ ಪರಿವೇ ಇಲ್ಲದೆ ದುಡಿದಿರುತ್ತಾರೆ. ಅಂತಹವರಲ್ಲಿ ಡಾ|| ಸಿದ್ಧನಾಥ ಬಳ್ಳಾರಿ ಅವರು ಒಬ್ಬರಾಗಿದ್ದಾರೆಂದು ಹೇಳಬಹುದು.

## ೧ಳ. ಡಾ|| ಸಿದ್ಧನಾಥ ಬಳ್ಳಾರಿ ಅವರ ಕೌಟುಂಬಿಕ ಜೀವನ

ಡಾ|| ಸಿದ್ಧನಾಥ ಅವರು ರಾಷ್ಟ್ರ-ನಾಡ ಸೇವೆಯೊಂದಿಗೆ ಜನಸೇವೆಯನ್ನು ಮಾಡುವ ಡಾಕ್ಟರನಾದನೆಂದು ತಂದೆತಾಯಿಗೆ ಸಂತೋಷವಾದರೆ, ಇನ್ನೊಂದು ಕಡೆ ಸೊಸೆ ತೀರಿಕೊಂಡು ಮಗ ಒಂಟಿಯಾದನಲ್ಲ ಎಂಬ ದುಃಖ ಎರಡು ಉಂಟಾದವು. ಅನಿವಾರ್ಯವಾಗಿ ಮತ್ತೊಂದು ಮದುವೆಯಾಗುವಂತೆ ಅವರ ನೆಂಟರಿಷ್ಟರು, ಸ್ನೇಹಿತರು ಒತ್ತಾಯ ಮಾಡತೊಡಗಿದರು. ಅವರ ಒತ್ತಾಯಕ್ಕೆ ಮಣಿದು ಸು.1945 ರಲ್ಲಿ ಡಾ|| ಸಿದ್ಧನಾಥ ಅವರಿಗೆ ವಿಜಾಪುರದ ಮಲ್ಲಿಕಾರ್ಜುನ ಭತಗುಣಕಿ ಅವರ ಮಗಳು ಲಕ್ಷ್ಮೀದೇವಿ ಎಂಬ ಸುಗುಣಿ-ಸುಶೀಲೆ ಕನ್ಯೆಯೊಂದಿಗೆ ಎರಡನೆಯ ಮದುವೆಯಾಯಿತು.

ಡಾ|| ಸಿದ್ಧನಾಥ ಅವರು ಅವಳೊಂದಿಗೆ ಸೊಲ್ಲಾಪುರದ ನೀಲಾ ನಗರದಲ್ಲಿ (ಶ್ರೀಮಂತ ಅಬ್ದುಲಪುರಕರ ಅವರ ಚಾಳ. ಈಗ ಅದೆಲ್ಲ ಕೆಡವಿ ಭವ್ಯ ಕಟ್ಟಡವನ್ನು ಕಟ್ಟಿಸಿದ್ದಾರೆ) ವಾಸಿಸುತ್ತಿದ್ದರು. ಅಲ್ಲಿ ಸಮೀಪದಲ್ಲಿಯೇ ಆಗ ವರಕವಿ ಡಾ|| ದ.ರಾ.ಬೇಂದ್ರೆಯವರು ವಾಸಿಸುತ್ತಿದ್ದರು. ತಾಯಿ-ತಂದೆಯರಿಗೆ ತಮ್ಮ ಜೊತೆಯೇ ಇರಲು ಡಾ|| ಸಿದ್ಧನಾಥರು ಕೇಳಿಕೊಂಡರು ತಮ್ಮ ಮನೆ, ಹೊಲ, ಎತ್ತು, ಎಮ್ಮೆಗಳಿಂದ ಕೂಡಿದ ಬದುಕನ್ನು ತೊರೆದು ಸೋಲ್ಲಾಪುರದಲ್ಲಿ ಬಂದಿರಲು ಇಚ್ಛಿಸಲಿಲ್ಲ. ಅವರು ಆಗಾಗ ಬಂದು ಮಗನ ಸಂಸಾರ ಕಂಡು ಆನಂದಪಡುವದರೊಂದಿಗೆ ಸಿದ್ಧರಾಮೇಶ್ವರನ ದರ್ಶನ ಮಾಡದೇ ಮರಳಿ ಹೋಗುತ್ತಿರಲಿಲ್ಲ.

ಡಾ|| ಸಿದ್ಧನಾಥರ ಪತ್ನಿ ಲಕ್ಷ್ಮೀದೇವಿ ಅಲ್ಲಿಯೇ ಮಹಾನಗರಪಾಲಿಕೆಯಲ್ಲಿ ಮಿಡ್-ವಾಯಿಫ್ **(Staff-nurse)** ಆಗಿ ನೌಕರಿಗೆ ಸೇರಿಕೊಂಡರು. ಲಕ್ಷ್ಮೀ ದೇವಿಯ ತಂಗಿ ಅನ್ನಪೂರ್ಣಾ ಸೋಲ್ಲಾಪುರದಲ್ಲಿಯೇ ಟ್ರಾನ್ಸಪರ್ಟ್ ಡಿಪಾರ್ಟ್‌ಮೆಂಟದಲ್ಲಿ **(Transport Department)** ನೌಕರಿಗೆ ಸೇರಿಕೊಂಡಳು. ಇನ್ನು ಮದುವೆಯಾಗದುದರಿಂದ ಅವರೊಂದಿಗೆ ಇರಹತ್ತಿದಳು.

ಡಾ|| ಸಿದ್ಧನಾಥ ಅವರು ಕುಟುಂಬ ವತ್ಸಲರಾಗಿದ್ದರು. ಡಾ|| ಸಿದ್ಧನಾಥ - ಲಕ್ಷ್ಮೀದೇವಿಯರ ದಾಂಪತ್ಯದ ಫಲವಾಗಿ ಮೊದಲ ಮಗಳು ಸುಮನ ಹುಟ್ಟಿದಾಗ ಅವರಿಗೆ ಬಹಳ ಸಂತೋಷ. ಅವಳು ದಟ್ಟಡಿಯಿಡುತ್ತ 'ಅಪ್ಪಾ' ಎಂದು ಕರೆದಾಗಲಂತೂ ಅವರ ಸಂಭ್ರಮ ಹೇಳತೀರದು. ಮುಂದೆ ಮೋಹನ, ಲಲಿತಾ, ರಾಜೇಂದ್ರ, ಸುರೇಖಾ ಎಂಬ ನಾಲ್ಕು ಮಕ್ಕಳು ಹುಟ್ಟಿದವು. ಡಾಕ್ಟರರಾಗಿದ್ದ ಸಿದ್ಧನಾಥ ಅವರು ಹೆಂಡತಿ-ಮಕ್ಕಳೊಂದಿಗೆ ಸುಖ-ಸಂತೋಷಗಳಿಂದ ಜೀವನ ಮಾಡಬಹುದಾಗಿತ್ತು. ಆದರೆ ರಾಷ್ಟ್ರಸೇವೆ, ನಾಡಸೇವೆ, ಜನಸೇವೆಯಲ್ಲಿ ತೊಡಗಿದ ಅವರಿಗೆ ಮನೆಯಲ್ಲಿ ಹೆಂಡತಿ-ಮಕ್ಕಳೊಂದಿಗೆ ಆರಾಮವಾಗಿ ಕಾಲ ಕಳೆಯುವದೇ ದುಸ್ತರವಾಗಿತ್ತು. ಅದಕ್ಕಾಗಿ ಒಮ್ಮೊಮ್ಮೆ ಅವರು "ದೇಶ-ನಾಡ ಕಡೆ ಮುಖ ಮಾಡಿನಿ, ಮನಿಗೆ ಬೆನ್ನ ಮಾಡಿನಿ" ಎನ್ನುತ್ತಿದ್ದುದುಂಟು.

ಬಹುಭಾಷಾ ಬಲ್ಲಿದರಾದ ಡಾ|| ಸಿದ್ಧನಾಥ ಬಳ್ಳಾರಿ ಅವರಿಗೆ ಸ್ವತಃ ಕನ್ನಡದೊಂದಿಗೆ ತೆಲುಗು, ಮರಾಠಿ, ಇಂಗ್ಲೀಷ್, ಬಂಗಾಳಿ ಒಟ್ಟು 5 ಭಾಷೆಗಳು ಬರುತ್ತಿದ್ದವು. ಸೊಲ್ಲಾಪುರದಲ್ಲಿ ಕನ್ನಡ ಬಿಟ್ಟರೆ ಹೆಚ್ಚಿಗಿದ್ದ

ತೆಲುಗರಲ್ಲಿಯಾಗಲಿ, ಮರಾಠಿಗರಲ್ಲಿಯಾಗಲಿ ಡಾಕ್ಟರರಾಗಿದ್ದ ಸಿದ್ಧನಾಥ ಬಳ್ಳಾರಿ ಅವರಿಗೆ ದ್ವೇಷವಿರದೆ ಮಿತ್ರತ್ವವಿತ್ತು.

ಅಜಾತಶತ್ರುವಾದ ಅವರು ಅಂತ:ಕರಣದ ಸ್ನೇಹ-ಸಜ್ಜನಿಕೆಯ ಮೂರ್ತಿಯಾಗಿದ್ದರು. ಸ್ನೇಹಿತರೆಲ್ಲ ಸೇರಿದಾಗ ಟೋಸ್ಟ್ (ಬೇಕರಿಯ ತಿನಿಸು) ಕೊಂಡು, ಎಲ್ಲರಿಗೂ ಹಂಚಿ ತಾವು ತಿನ್ನುವದು ಅವರ ಹವ್ಯಾಸವಾಗಿತ್ತು. ಇಷ್ಟೆಲ್ಲ ಇದ್ದರೂ, ಕನ್ನಡದ ವಿಷಯಕ್ಕೆ ಅಪಸ್ವರ ಕೇಳಿ ಬಂದರೆ, ಕನ್ನಡಿಗರಿಗೆ ಅನ್ಯಾಯವಾದರೆ ಮಾತ್ರ ಅವರು ಕೆರಳಿ ಕೆಂಡವಾಗುತ್ತಿದ್ದರು.

ಹುಬ್ಬಳ್ಳಿಯ 'ಜಾಗೃತವಾಣಿ' ಪತ್ರಿಕೆಯ ಸಂಪಾದಕರಾದ ಶ್ರೀ ಆರ್.ಟಿ. ಮಜ್ಜಿಗೆಯವರು ಡಾ॥ ಸಿದ್ಧನಾಥರ ಕುರಿತು ಹೀಗೆ ಹೇಳುತ್ತಾರೆ "1974ರಲ್ಲಿ ರಾಷ್ಟ್ರೀಯ ಭಾವೈಕ್ಯ ಪರಿಷತ್ ಒಂಬತ್ತು ದಿನಗಳ ಕಾಲ ನಾನು ಏರ್ಪಡಿಸುವಂತಾಗಲು ಡಾ॥ ಬಳ್ಳಾರಿಯವರು ಸಕಲ ಸಹಾಯ ಸಂಪರ್ಕ ನೀಡಿದರು. ಸಿರಿಗೆರೆ ಲಿಂ. ಹಿರಿಯ ಗುರುಗಳಾದ ಶಿವಕುಮಾರ ಸ್ವಾಮೀಜೀಯವರ ನೇತೃತ್ವದಲ್ಲಿ ಕಾರ್ಯಕ್ರಮಗಳು ಜರುಗಿ ಸೊಲ್ಲಾಪುರದಲ್ಲಿ ಕನ್ನಡ ಡಿಂಡಿಮ ಬಾರಿಸಿತು. ಇದು ಸೊಲ್ಲಾಪುರ ನಗರದ ಚರಿತ್ರೆಯಲ್ಲಿ ಇಂದಿಗೂ ದಾಖಲೆಯಾಗಿ ಉಳಿದಿದೆ. ಇಂತಹ ಕನ್ನಡ ಕಾರ್ಯಗಳ ಯಶಸ್ಸಿಗೆ ಡಾ॥ ಸಿದ್ಧನಾಥ ಬಳ್ಳಾರಿಯವರೇ ಕಾರಣಕರ್ತರಾಗಿದ್ದರು. ತೇಜಸ್ಸಿನಿಂದ ಕೂಡಿದ ಕಪ್ಪು ಮುಖ, ಮಟ್ಟಸವಾದ ಎತ್ತರ, ಗಟ್ಟಿಮುಟ್ಟಾದ ದೇಹದಾರ್ಢ ಪಡೆದಿದ್ದ ಡಾ॥ ಸಿದ್ಧನಾಥರಿಗೆ ಯಾವಾಗಲೂ ಕೋಟು ಧರಿಸಿ, ವಿಶೇಷ ಸಂದರ್ಭಗಳಲ್ಲಿ ಟೋಪಿ ಹಾಕಿಕೊಳ್ಳುವುದು ಪ್ರಿಯವಾಗಿತ್ತು. ಕನ್ನಡ ಪ್ರೇಮಿಗಳಾದ ಅವರು ತಮ್ಮ ಮಕ್ಕಳಿಗೆಲ್ಲ ಕನ್ನಡ ಶಾಲೆಗೆ ಹಾಕಿದರು. ಅವರದು ಇನ್ನೊಂದು ವಿಶೇಷವೆಂದರೆ, ಅವರು ತಮ್ಮ ಹೆಣ್ಣು ಮಕ್ಕಳನ್ನು, ಸೊಸೆಂದಿರನ್ನು ಕೊಡು-ತಗೊಳ್ಳುವುದು ಕರ್ನಾಟಕದಿಂದಲೇ ಮಾಡಿದ್ದಾರೆ. ಅಲ್ಲಿಯೂ ಕೂಡ ಅವರ ಕನ್ನಡ ಪ್ರೇಮ ಎದ್ದು ಕಾಣುತ್ತದೆ. ಅಷ್ಟೇ ಅಲ್ಲದೆ, ಅಂದು ರೈಲ್ವೆ ಮಂತ್ರಿಯಾಗಿದ್ದ ಜಾಫರ ಷರಿಪರೊಂದಿಗೆ ಅನೇಕ ಪತ್ರವ್ಯವಹಾರ ಮಾಡಿ, ಸೊಲ್ಲಾಪುರದಿಂದ ಬೆಂಗಳೂರು, ಮೈಸೂರ ವರೆಗೆ ರೇಲ್ವೆ ಗೋಲಗುಮ್ಮಟ ಎಕ್ಸ್‌ಪ್ರೆಸ್ ಬಂದು ಹೋಗುವಂತೆ ಮಾಡುವಲ್ಲಿ ಯಶಸ್ವಿಯಾದರು. ಕನ್ನಡಿಗರಿಗೆ ರೈಲ್ವೆ ಪ್ರಯಾಣದ ಸುಖಸೌಲಭ್ಯ ಒದಗಿಸಿ ಅನುಕೂಲ ಮಾಡಿ ಕೊಟ್ಟರು. ಇದು ಕೂಡ ಅವರಲ್ಲಿಯ ಕನ್ನಡ ಹಿತಾಸಕ್ತಿ ಎತ್ತಿ ತೋರಿಸುತ್ತದೆ.

ಡಾ॥ ಸಿದ್ಧನಾಥ ಬಳ್ಳಾರಿ ಅವರ ಮೊದಲ ಮಗ ಮೋಹನ ಸೊಲ್ಲಾಪುರದ ಕಾರ್ಪೋರೇಶನ್ನಿನಲ್ಲಿ ಕಾಂಜರವನ್ಸಿ ಸುಪರಿಟೆಂಡೆಂಟನಾಗಿ ಸೇವೆ ಸಲ್ಲಿಸಿ, ನಿವೃತ್ತಿಯಾದ ಒಂದು ವರ್ಷದಲ್ಲಿಯೇ ತೀರಿಕೊಂಡರು. ಗದುಗಿನ ಶ್ರೀ ಕರಿಯಪ್ಪ ಅಂಬಲಝುರಿ ಅವರ ಮಗಳನ್ನು ಮೋಹನ ಅವರಿಗೆ ತಂದು ಕೊಂಡಿದ್ದರು. ಅಂಬಝುರಿ ಅವರು ಗದುಗಿನ ತೋಂಟದ ಸಿದ್ಧಲಿಂಗೇಶ್ವರ ಮಹಾಸ್ವಾಮಿಗಳ ಪರಮಭಕ್ತರು. ಅವರ ಮಗಳು ಲಲಿತಾಳೊಂದಿಗೆ ಮಹಾಸ್ವಾಮಿಗಳ ಬೆಟ್ಟಿಗೆ ಹೋದಾಗ ಅವರು "ಡಾ॥ ಸಿದ್ದನಾಥ ಬಳ್ಳಾರಿ ಅವರ ಮನಿ ಸೊಸಿಯಾಗಿರುವದು ನಿಮ್ಮ ಮಗಳ ಭಾಗ್ಯವಷ್ಟೇ ಅಲ್ಲ ಅಂತಹ ವ್ಯಕ್ತಿಯ ಮನಿಗೆ ಹೆಣ್ಣು ಕೊಟ್ಟಿರುವದು ನಮ ಗದುಗಿನ ಭಾಗ್ಯ" ಎಂದು ಹೇಳಿದರಂತೆ. ಈ ಮಾತನ್ನು ಸಿದ್ದನಾಥ ಅವರ ಹಿರಿಯ ಸೊಸೆ ಲಲಿತಾ ಅವರೇ ಹೇಳಿದ್ದಾರೆ. ಅವರಿಗೆ ಸುಮೇಶ,

ಸಂತೋಷ, ಶೈಲೇಶ ಎಂಬ ಮೂವರು ಗಂಡು ಮಕ್ಕಳಿದ್ದು, ಸೊಸೆಂದಿರು ಮೊಮ್ಮಕ್ಕಳಿಂದ ಕೂಡಿದ ತುಂಬು ಸಂಸಾರವಿದೆ.

ಡಾ॥ ಸಿದ್ದನಾಥರ ಎರಡನೆಯ ಮಗ ರಾಜೇಂದ್ರ ಸೊಲ್ಲಾಪುರದ ಕಾರ್ಪೋರೇಶನ್ನಿನಲ್ಲಿ ಚೀಫ್ ಸೆನೆಟರಿ ಇನಸ್ಪೆಕ್ಟರಾಗಿ ಸೇವೆ ಸಲ್ಲಿಸಿ, ಈಗ ನಿವೃತ್ತಿಯಾಗಿ ನೆಮ್ಮದಿಯಿಂದಿದ್ದಾರೆ. ಅವರ ಪತ್ನಿ ರತ್ನಾ ಅವರು ಹುಬ್ಬಳ್ಳಿ ಪಡೇಸೂರ ಮನೆತನದವರು. ಇವರಿಬ್ಬರು ಸೊಲ್ಲಾಪುರದಲ್ಲಿದ್ದರೂ ಕೂಡ ಕನ್ನಡದ ಮೇಲೆ ಅವರಿಗೆ ಪ್ರೀತ್ಯಾಭಿಮಾನ ಬಹಳ, ರಾಜೇಂದ್ರ ಅವರು ತಂದೆಯವರ ಜೀವನ ಚರಿತ್ರೆಯನ್ನು ಬರೆಯುವಲ್ಲಿ ಬಹಳ ಸಹಾಯ-ಸಹಕಾರ ನೀಡಿದ್ದಾರೆ. ಅವರಿಗೆ ರೂಪಲಕ್ಷ್ಮಿ, ದೀಪಲಕ್ಷ್ಮಿ, ವಿಶ್ವೇಶ್ವರ ಎಂಬ ಮೂರು ಮಕ್ಕಳಿದ್ದಾರೆ. ಅವರಲ್ಲಿ ರೂಪಲಕ್ಷ್ಮಿ ಸಾಫ್ಟ್‌ವೇರ್ ಇಂಜಿನಿಯರ್ ಶ್ರೀ ಅನಿಲಕುಮಾರ ಅವರನ್ನು ಮದುವೆಯಾಗಿ ಬೆಂಗಳೂರಿನಲ್ಲಿದ್ದಾಳೆ. ದೀಪಲಕ್ಷ್ಮಿ ಆ್ಯನಿಮೇಶನ್ ಕೋರ್ಸ್ ಮುಗಿಸಿ, ಸೋಲ್ಲಾಪುರದಲ್ಲಿ ನೌಕರಿ ಮಾಡುತ್ತಿದ್ದರೆ, ವಿಶ್ವೇಶ್ವರ ಎಂ.ಸಿ.ಎ (M.C.A) ಮಾಡಿ ನೌಕರಿ ಮಾಡುತ್ತಿದ್ದಾರೆ.

ಡಾ॥ ಸಿದ್ದನಾಥ ಬಳ್ಳಾರಿ ಅವರ ಆರ್ಥಿಕ ಸ್ಥಿತಿ ಸರಿಯಿಲ್ಲದ್ದರಿಂದ ಸೊಲ್ಲಾಪುರದಲ್ಲಿ ಸ್ವಂತ ಮನೆ ತೆಗೆದುಕೊಳ್ಳದೆ ನೀಲಾನಗರದ ಬಾಡಿಗೆ ಮನೆಯಲ್ಲಿಯೇ ಕೊನೆತನಕ ಇದ್ದರು. ಆದರೂ ಅತೃಪ್ತಿ ಅಸಮಾಧಾನ ಆಗಲಿ, ಸಿಟ್ಟಾಗಲಿ ಇರದೆ, ನಗುನಗುತ್ತ, ನಗಿಸುತ್ತ, ತೃಪ್ತಿಯಿಂದ ಇದ್ದ ಅಪರೂಪದ ವ್ಯಕ್ತಿತ್ವ ಅವರದು, ಕರ್ನಾಟಕದಿಂದ ಯಾರೇ ಇರಲಿ, ಅರ್ಧರಾತ್ರಿ ಅವರ ಮನೆಗೆ ಹೋದರೂ, ಅವರು ಎಂದೂ ಬೇಸರಿಸದೆ ಆದರಾತಿಥ್ಯ ಮಾಡುತ್ತಿದ್ದರು. ಅವರ ಧರ್ಮಪತ್ನಿ ಲಕ್ಷ್ಮೀಬಾಯಿಯಂತೂ ಅನ್ನಪೂರ್ಣೆಯಂತಿದ್ದು, ಹಸಿದು ಬಂದವರನ್ನೆಂದೂ ಉಪವಾಸ ಕಳುಹಿಸುತ್ತಿರಲಿಲ್ಲ.

'ಪ್ರತಿಯೊಬ್ಬ ಪ್ರಸಿದ್ಧ ವ್ಯಕ್ತಿಯ ಹಿಂದೆ ಸ್ತ್ರೀಯ ಕೈಯಿರುತ್ತದೆ' ಎಂಬ ಇಂಗ್ಲಿಷ್ ಗಾದೆಯಂತೆ ಡಾ॥ ಸಿದ್ದನಾಥರ ಎಲ್ಲ ಕೆಲಸ-ಕಾರ್ಯಗಳಿಗೂ ಅವರ ಪತ್ನಿಯ ಸಹಕಾರ-ತ್ಯಾಗ ಗುಣ ಅಡಗಿದೆ. ಲಕ್ಷ್ಮೀಬಾಯಿಯು ಶರಣ ಸಂಸ್ಕೃತಿಯನ್ನೊಳಗೊಂಡ ಶಾಂತ, ಸುಸ್ವಭಾವದ ಗೃಹಿಣಿ, ನೌಕರಿ, ಮನೆ-ಮಕ್ಕಳು ಅತಿಥಿ ಎಲ್ಲವನ್ನು ನೋಡಿಕೊಂಡು, ಸಹಿಸಿಕೊಂಡು ಪತಿಗೆ ಗಡಿ ಕನ್ನಡದ ಹೋರಾಟಕ್ಕೆ ಅವಕಾಶ ಮಾಡಿಕೊಟ್ಟು, ತನ್ನ ಜೀವನವನ್ನು ಚಂದನದಂತೆ ತೇದು ಸುವಾಸನೆ ಬೀರಿ ಮರೆಯಾದ ಅನುಪಮ ವ್ಯಕ್ತಿತ್ವ ಅವಳದು. ಇಂತಹ ಸತಿಯಿರದಿದ್ದರೆ ಡಾ॥ ಸಿದ್ಧನಾಥರಿಗೆ ಕನ್ನಡದ ಕೆಲಸ ಸಾಧ್ಯವಾಗುತ್ತಿತ್ತೋ ಇಲ್ಲವೋ? ನವಂಬರ 23, 1981 ರಂದು ಡಾಕ್ಟರರಿಗೆ ಪತ್ನಿ ವಿಯೋಗವಾಯಿತು.

## ಅನ್ನಪೂರ್ಣ ಭತಗುಣಕಿ

ಡಾ॥ ಸಿದ್ದನಾಥರ ಪತ್ನಿ ಲಕ್ಷ್ಮೀಬಾಯಿಯ ತಂಗಿ ಟ್ರಾನ್ಸ್‌ಪೋರ್ಟ್ ವಿಭಾಗದಲ್ಲಿ ಸೋಲ್ಲಾಪುರದ ಮಹಾನಗರಪಾಲಿಕೆಯಲ್ಲಿ ನೌಕರಿ ಮಾಡುತ್ತಿದ್ದಳು. ಅನ್ನಪೂರ್ಣಳ ತಂದೆ-ತಾಯಿಗಳು, ಮನೆಯ ಜನರೆಲ್ಲರೂ

ಅವಳಿಗೆ ಮದುವೆ ಮಾಡಿಕೊಳ್ಳಲು ಒತ್ತಾಯಿಸಿದರೂ ಮಣಿಯದೆ. ಬ್ರಹ್ಮಚಾರಿಯಾಗಿಯೇ ಕನ್ನಡದ ಸೇವೆ ಮಾಡುತ್ತ ಉಳಿದಳು. ಅವಳು ಗಡಿಕನ್ನಡ ಚಳುವಳಿಯ ಹೋರಾಟದಲ್ಲಿ ಭಾಗವಹಿಸಿದಳು. ಅವಳಿಗೂ ಸೋಲ್ಲಾಪುರವು ಕರ್ನಾಟಕದಲ್ಲಿ ಸೇರಿ ಅಖಂಡ ಕರ್ನಾಟಕವಾಗಬೇಕೆಂಬ ಇಚ್ಛೆ ಬಲವಾಗಿತ್ತು. ಹೀಗಾಗಿ ಅವಳು ಭಾವ ಸಿದ್ಧನಾಥ ಬಳ್ಳಾರಿಯವರ ಹೋರಾಟಕ್ಕೆ ಬೆಂಬಲವಿತ್ತಿದ್ದಾಳೆ. ಸಭೆ-ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾಳೆ. ಪ್ರಧಾನಮಂತ್ರಿ ಇಂದಿರಾ ಗಾಂಧಿ, ಎಸ್.ನಿಜಲಿಂಗಪ್ಪ ಮುಂತಾದವರ ಬೆಟ್ಟಿಗೆ ಹೋದಾಗಲೆಲ್ಲ ಡಾ|| ಸಿದ್ಧನಾಥರೊಂದಿಗೆ ನಾದಿನಿ ಅನ್ನಪೂರ್ಣಳು ಹೋಗಿ ಮನವಿ ಸಲ್ಲಿಸಿದ್ದಾಳೆ.

ಸೊಲ್ಲಾಪುರದ ಕನ್ನಡಿಗರಿಗೆ ಅನ್ನಪೂರ್ಣ ಭತಗುಣಕಿ ಎಂದರೆ ಚಿರಪರಿಚಿತ. ಅವಳು ನಿವೃತ್ತಿ ನಂತರ, ಹೆಚ್ಚಾಗಿ ಸಿದ್ದರಾಮೇಶ್ವರನ ಸಾನಿಧ್ಯದಲ್ಲಿದ್ದು ಸೇವೆಗೈಯುತ್ತ ಇರುತ್ತಿದ್ದಳು. ಅವಳು ಮಾಡಿದ್ದೊಂದು ನೆನಪಿನಲ್ಲಿಡುವಂತಹ ಕಾರ್ಯವೆಂದರೆ ಬಸವೇಶ್ವರರ ದೊಡ್ಡ ಭಾವಚಿತ್ರವನ್ನು ಸಿದ್ದರಾಮೇಶ್ವರರ ಗುಡಿಯಲ್ಲಿ ಹಾಕಿದ್ದು, ಅದುವರೆಗೂ ಬಸವಣ್ಣನವರ ಬಗೆಗೆ ಆಸ್ಥೆಯಿರದ ಟ್ರಸ್ಟಿಗಳು ಅದಕ್ಕೆ ಅವಕಾಶವನ್ನೇ ಕೊಟ್ಟಿರಲಿಲ್ಲ. ಬಸವಭಕ್ತಳಾದ ಅನ್ನಪೂರ್ಣಾಬಾಯಿ ಬಸವೇಶ್ವರರ ಭಾವಚಿತ್ರ ಹಚ್ಚಲು ಹೋರಾಟವನ್ನೇ ಮಾಡಬೇಕಾಯಿತು. ಕೊನೆಗೆ ಎಲ್ಲರಿಂದ ಒಪ್ಪಿತವಾಗಿ ಸಿದ್ದರಾಮೇಶ್ವರರ ಸನ್ನಿಧಿಯಲ್ಲಿ ಅನ್ನಪೂರ್ಣಾಬಾಯಿಯು ಹಾಕಿದ ಬಸವೇಶ್ವರರ ಭಾವಚಿತ್ರ ರಾರಾಜಿಸುತ್ತಿದೆ, ಅದನ್ನು ಈಗಲೂ ನೋಡಬಹುದು.

ಕನ್ನಡವನ್ನೇ ಬಾಳ ಮಂತ್ರವನ್ನಾಗಿಸಿಕೊಂಡು, ಗಡಿಕನ್ನಡ ಚಳುವಳಿಯಲ್ಲಿ ಭಾಗವಹಿಸಿ, ಕನ್ನಡದ ಕೈಂಕರ್ಯ ಮಾಡಿ, ಸದ್ದು ಗದ್ದಲವಿಲ್ಲದೆ ನಿಶ್ಯಬ್ಧವಾಗಿ ಸುವಾಸನೆ ಬೀರಿ, ಮರೆಯಾಗಿ ಹೋಗುವ ಸುಮದಂತೆ ಅನ್ನಪೂರ್ಣಳ ಬದುಕಾಗಿದೆ.

ಇಂತಹ ಅಪ್ರತ್ಯಕ್ಷವಾಗಿ ಕನ್ನಡಕ್ಕಾಗಿ ಹೋರಾಡಿದ ಎಷ್ಟು ವನಿತೆಯರಿದ್ದಾರೋ? ಅವರನ್ನು ನೆನಪಿಸಿಕೊಳ್ಳುವುದೇ ಅವರಿಗೆ ನಾವು ಸಲ್ಲಿಸುವ ಕೃತಜ್ಞತೆಯಾಗಿದೆ.

ಡಾ|| ಸಿದ್ಧನಾಥರು ಒಬ್ಬ ಕನಸಿನ ಜೀವಿಯಾಗಿದ್ದರು. ವಯಸ್ಸಾಗಿದ್ದರೂ ಅವರು ಸುಮ್ಮನೆ ಕುಳಿತುಕೊಳ್ಳದೆ, ಏನಾದರೂ ಯೋಜನೆ ಹಾಕುತ್ತ ಅದನ್ನು ಕಾರ್ಯಗತಗೊಳಿಸುವುದರಲ್ಲಿ ತನ್ನಯರಾಗಿರುತ್ತಿದ್ದರು. “ಕಾವೇರಿಯಿಂದಮಾ ಗೋದಾವರಿವರಮಿರ್ಪ ಕನ್ನಡನಾಡು” ಎಂದು ಶ್ರೀವಿಜಯನು 'ಕವಿರಾಜಮಾರ್ಗ' ದಲ್ಲಿ ಹೇಳಿದ್ದಾನೆ ಎಂದು ಅವರು ಮೈಸೂರಿನಿಂದ ಹಿಡಿದು ನಾಂದೇಡ, ನಾಸಿಕದವರೆಗೂ ಪ್ರವಾಸ ಮಾಡಿ, ಆ ಎಲ್ಲ ಪ್ರದೇಶವು ಒಟ್ಟಾಗಿ ಸೇರಿ ಸಮಗ್ರ ಕರ್ನಾಟಕವಾಗಲೆಂದು ಆಶಿಸಿದ ಕನಸುಗಾರರು ಅವರಾಗಿದ್ದರು.

ಕುವೆಂಪು ಅವರು ಹೇಳಿದಂತೆ “ಕನ್ನಡವೇ ಮಂತ್ರ ಕಣಾ, ಕನ್ನಡವೇ ಶಕ್ತಿಕಣಾ” ಎಂಬಂತೆ ಅವರ ಜೀವನವಾಗಿತ್ತು. ಮಹಾಜನ ವರದಿ ಜಾರಿಗೆ ಬರಲಿ, ಕನ್ನಡದ ಯೋಗಿ ಪುರುಷ ಸಿದ್ದರಾಮೇಶ್ವರನ ಸೊಲ್ಲಾಪುರವು ಕರ್ನಾಟಕಕ್ಕೆ

ಸೇರಲಿ ಎಂಬ ಅವರ ಹಂಬಲ - ಹಾರೈಕೆಗಳು ಈಡೇರಲೇ ಇಲ್ಲ. ಕನ್ನಡ-ಕರ್ನಾಟಕ ಎನ್ನುತ್ತ ಅದೇ ಕನಸನ್ನು ಕಾಣುತ್ತ 16 ಮಾರ್ಚ್ 1991 ರಂದು ಕೊನೆಯುಸಿರೆಳೆದರು.

ಡಾ|| ಸಿದ್ಧನಾಥರಂತಹ ನಾಯಕನನ್ನು ಕಳೆದುಕೊಂಡದ್ದು ಸೋಲ್ಲಾಪುರದ ಕನ್ನಡ ಬಾಂಧವರಿಗೆ ತುಂಬಲಾರದ ಹಾನಿಯಾಯಿತು. ಅವರು ವಾಸವಾಗಿದ್ದ ನೀಲಾ ನಗರದ ಕನ್ನಡಿಗರು ಕಣ್ಣೀರುಗರೆದರು. ಸೋಲ್ಲಾಪುರ ಜಿಲ್ಲೆಯಲ್ಲಿಯ ಊರೂರುಗಳಲ್ಲಿ ಅವರ ಭಾವಚಿತ್ರವಿರಿಸಿ ಶ್ರದ್ಧಾಂಜಲಿ ಸಲ್ಲಿಸಿದರು. "ಕನ್ನಡಚ ಏಕ ಮೊಠ ಮಾನುಸ ಗೇಲ" ಎಂದು 'ಸಂಚಾರ' ಪತ್ರಿಕೆಯು ವರದಿ ಮಾಡಿತು (ಸೋಲ್ಲಾಪುರದ ಪ್ರಹ್ಲಾದ ಜೋಶಿ ಗುರುಗಳು ಹೇಳಿದ್ದು)

ಅವರ ನಂತರ ಗಡಿಕನ್ನಡ ಚಳುವಳಿಯ ಹೋರಾಟ ಅಕ್ಷರಶಃ ನಿಂತು ಹೋಗಿದೆಯೆಂದರೆ ಅಡ್ಡಿಯಿಲ್ಲ. ಇಂದಿನವರೆಗೆ ಮಹಾಜನ ವರದಿಯಂತೂ ಜಾರಿಗೆ ಬರಲಿಲ್ಲ. ಬಹುಶಃ ಅದು ಬರುವಂತೆಯೂ ಇಲ್ಲ. ಇಂತಹ ವಾತಾವರಣವನ್ನು ವೀಕ್ಷಿಸಿ, 'ಜಾಗೃತವಾಣಿ' ಪತ್ರಿಕೆಯ ಸಂಪಾದಕರಾದ ಶ್ರೀ ಆರ್.ಟಿ. ಮಜ್ಜಿಗೆ ಅವರು (ಗಡಿನಾಡು ಕನ್ನಡ ಹೋರಾಟಗಾರ ಡಾ|| ಸಿದ್ಧನಾಥ ಬಳ್ಳಾರಿ - ಲೇಖನ) ಹೀಗೆ ಹೇಳುತ್ತಾರೆ.

"ಡಾ|| ಸಿದ್ಧನಾಥರು ಗತಿಸಿದ ಮೇಲೆ ಸೊಲ್ಲಾಪುರ ಕರ್ನಾಟಕಕ್ಕೆ ಸೇರ್ಪಡೆ ಹೋರಾಟ ಸ್ತಬ್ಧಗೊಂಡಿದೆ. ಆದರೆ ಡಾ|| ಸಿದ್ಧನಾಥರ ಹೋರಾಟದ ಧ್ವನಿ ಅಶರೀರವಾಗಿ ಸೊಲ್ಲಾಪುರ, ಕರ್ನಾಟಕ ಎಂದು ಮಾರ್ದನಿಗೊಳ್ಳುತ್ತಲೇ ಇದೆ."
ಇಂತಹ ಗಡಿಭಾಗದ ಅಪ್ಪಟ ಕನ್ನಡಿಗ ಕರ್ನಾಟಕ ಪರ ಹೋರಾಟಗಾರನನ್ನು ಕನ್ನಡ ನಾಡಿನ ಎಲ್ಲ ಸರಕಾರಗಳು ಹಾಗು ಕನ್ನಡಾಭಿಮಾನಿ ಮುಖಂಡರು ಮರೆತು ಬಿಟ್ಟಿದ್ದಾರೆ. ಈಗಲಾದರೂ ಕರ್ನಾಟಕ ಸರಕಾರ ದಿ. ಡಾ|| ಸಿದ್ಧನಾಥ ಬಳ್ಳಾರಿಯವರ ಜೀವನ ಪರ್ಯಂತದ ಕನ್ನಡ; ಕರ್ನಾಟಕ ಹೋರಾಟದ ಶಾಶ್ವತ ಸ್ಮರಣೆ ಉಳಿಯುವ ರೀತಿಯಲ್ಲಿ ಸೋಲ್ಲಾಪುರ ಕನ್ನಡ ಗಡಿಭಾಗದಲ್ಲಿ ಶಾಶ್ವತ ಕಾರ್ಯ ಮಾಡಬೇಕು.

"ಡಾ|| ಸಿದ್ಧನಾಥ ಬಳ್ಳಾರಿ ಅವರು ನಿಸ್ವಾರ್ಥ ಮನೋಭಾವನೆಯಿಂದ ಕನ್ನಡದ ಸೇವೆಯನ್ನು ಮಾಡಿದರು. ಭ್ರಷ್ಟಾಚಾರ ಅವರ ಹತಿರ ಎಂದೂ ಸುಳಿಯಲಿಲ್ಲ. ಅವರೊಬ್ಬ ಉತ್ತಮ ವಾಗ್ಮಿ, ಲೇಖಕ ಆಗಿದ್ದರು. ಅಖಂಡ ಕರ್ನಾಟಕ ಚಳುವಳಿಯ ಹೋರಾಟ ಕಾಲದಲ್ಲಿ 'ಪ್ರಪಂಚ' ಪತ್ರಿಕೆಯಲಿ ಸಾಕಷ್ಟು ಅವರ ಲೇಖನಗಳು ಬಂದು ಜನರನ್ನು ಪ್ರಚೋದಿಸಿದವು. ಅವರ ನೆನಪುಳಿಯುವಂತಹ ಏನಾದರೂ ಶಾಶ್ವತ ಕಾವ್ಯವಾಗಬೇಕು" ಎಂದು ಪಾಟೀಲ ಪುಟ್ಟಪ್ಪನವರನ್ನು ರಾಜೇಂದ್ರ ಬಳ್ಳಾರಿಯವರು ಸಂದರ್ಶಿಸಿದಾಗ ಈ ಮಾತನು. ಹೇಳಿದ್ದಾರೆ. "ಜಯದೇವಿತಾಯಿ ಲಿಗಾಡೆ ಅವರು ಕೈಕೊಂಡ ಗಡಿನಾಡ ಕನ್ನಡ ಚಳುವಳಿಯ ಸುದೀರ್ಘ ಹೋರಾಟದಲ್ಲಿ ಪಾಲ್ಗೊಂಡು ನಿಸ್ವಾರ್ಥಭಾವದಿಂದ ದುಡಿದಂತಹ ಡಾ|| ಸಿದ್ಧನಾಥ ಬಳ್ಳಾರಿ ಅವರನ್ನು ಕನ್ನಡಿಗರು ಎಂದೂ ಮರೆಯಬಾರದು" ಎಂದು ಡಾ|| ಸರೋಜಿನಿ ಚವಲಾರ ಅವರು ಹೇಳಿದ್ದಾರೆ.

ಹೀಗೆ ಸಿದ್ದನಾಥ ಬಳ್ಳಾರಿ ಅವರ ನಾಡಿ ಬಡಿತ ನಿಂತು ಹೋಗಿ ಮರೆಯಾದರೂ, ಪ್ರತಿಯೊಬ್ಬ ಕನ್ನಡಿಗನ ಹೃದಯ ಮಿಡಿತದಲ್ಲಿ ಅವರು ಜೀವಂತವಾಗಿದ್ದಾರೆ. ಅದಕ್ಕಾಗಿ ಸೋಲ್ಲಾಪುರದಲ್ಲಿ ಡಾ॥ ಸಿದ್ಧನಾಥ ಬಳ್ಳಾರಿ ಅವರ ನೆನಪು ಶಾಶ್ವತವಾಗಿ ಜನಮನದಲ್ಲಿ ಉಳಿಯುವಂತಹ ಕಾವ್ಯವನ್ನು ಕರ್ನಾಟಕ ಸರಕಾರವು ಆದಷ್ಟು ಬೇಗ ಕೈಗೆತ್ತಿಕೊಂಡು ಪೂರೈಸಲಿ ಎಂಬುದೇ ಗಡಿಕನ್ನಡಿಗರ ಆಶಯವಾಗಿದೆ. ಹಾರೈಕೆಯಾಗಿದೆ.

# ೧೫. ಡಾ|| ಸಿದ್ದನಾಥ ಬಳ್ಳಾರಿ ಹಾಗು ಇತರ ಚಳುವಳಿಗಾರರು

ಸೊಲ್ಲಾಪುರ ಜಿಲ್ಲೆಯ ಸುತ್ತುಮುತ್ತಲಿನ ಅಕ್ಕಲಕೋಟ, ದುಧನಿ, ನಾಗಣಸೂರ, ತೋಳನೂರ, ಒಳಸಂಗ, ಮೈಂದರಗಿ, ಕರಜಗಿ, ಶಿರವಳವಾಡಿ ಮುಂತಾದ ಊರುಗಳಲ್ಲಿಯೂ ಅಡ್ಡಾಡಿ ಡಾ|| ಸಿದ್ಧನಾಥ ಬಳ್ಳಾರಿ ಅವರು ಅಂದು ತಮ್ಮ ಲೋಹಚುಂಬಕ ವ್ಯಕ್ತಿತ್ವದಿಂದ ಕನ್ನಡಿಗರೆಲ್ಲರ ಗಮನ ಸೆಳೆಯುತ್ತಿದ್ದರು. ಪ್ರಭಾವಯುತವಾದ ಭಾಷಣ ಮಾಡಿ ಮಾತುಕತೆ ನಡೆಸಿ ಕನ್ನಡಿಗರ ಕಷ್ಟ-ಸುಖಗಳನ್ನು ತಿಳಿದುಕೊಳ್ಳುತ್ತಿದ್ದರು. ಹೀಗಾಗಿ ಅವರು ಮನಮುಟ್ಟಿ ಹೇಳುವ ಮಾತಿಗೆ ಎಲ್ಲರೂ ಸೈ ಎನ್ನುತ್ತಿದ್ದರು. ಪ್ರತಿಯೊಂದು ಹಳ್ಳಿಗಳಲ್ಲಿಯೂ ಕನ್ನಡ ಚಳುವಳಿಗಾರರನ್ನು ಗುರುತಿಸಿ, ಅವರನ್ನು ಸಂಘಟಿಸುವ ಕೆಲಸ ಮಾಡಿದರು. ಒಂದು ಛತ್ರದಡಿಯಲ್ಲಿ ಕನ್ನಡಿಗರನ್ನೆಲ್ಲ ತರಲು ಪ್ರಯತ್ನಿಸಿದರೆ, ಅವರ ಅನೇಕ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುತ್ತದೆ ಎಂದುಕೊಂಡು ಅವರನ್ನೆಲ ಒಂದೆಡೆ ತಂದು, ಕನ್ನಡದ ಶಕ್ತಿಯನ್ನು ಬಲಪಡಿಸಲು ಪ್ರಯತ್ನಿಸಿದರು. ಅವರ ಜೊತೆಯಲ್ಲಿ ಅನೇಕ ಕಾರ್ಯಕರ್ತರು ತಯಾರಾಗಿದ್ದೊಂದು ವಿಶೇಷ. ಗಡಿಕನ್ನಡ ಹೋರಾಟಗಾರರಲ್ಲಿ ಅವರ ಹೆಸರು ಮಹತ್ವದ್ದಾಗಿದೆ.

ಸೊಲ್ಲಾಪುರದ ಎಂ.ಎಸ್.ಸರ್ದಾರ, ಜಯದೇವಿತಾಯಿ ಲಿಗಾಡೆ, ನಾಗಪ್ಪಣ್ಣಾ ಕಾಡಾದಿ, ನಾಗಪ್ಪಣ್ಣಾ ಅಬ್ದುಲಪುರಕರ, ಚೆನ್ನವೀರ ಕಲ್ಯಾಣಶೆಟ್ಟಿ, ಶಿರವಳವಾಡಿಯ ಶರಣಪ್ಪ ತಾನವಡೆ, ಅಕ್ಕಲಕೋಟದ ಅಣ್ಣಾರಾವ ಮೋದಿ, ದುಧನಿಯ ಮಹಾಲಿಂಗಸ್ವಾಮಿ, ಮುಂತಾದವರು ಗಡಿನಾಡಿನಲ್ಲಿ ಹೋರಾಟಗೈದ ಮಹನೀಯರಾಗಿದ್ದಾರೆ. ಅವರ ಬಗೆಗೂ ಇಲ್ಲಿ ನೋಡೋಣ.

## ದಿ.ಬ್ಯಾರಿಸ್ಟರ ಎಂ.ಎಸ್ ಸರ್ದಾರ

ಇವರು ಕನ್ನಡದ ಮೇಲಿರಿಸಿದ ಪ್ರೇಮಾಭಿಮಾನ ಉಜ್ವಲವಾದುದು. ಇವರು ಸೋಲ್ಲಾಪುರಕ್ಕೆ ಆಗಮಿಸಿದಾಗ, ಅಲ್ಲಿ ಮರಾಠಿಯ ಪ್ರಭಾವದಿಂದ ಕನ್ನಡ ಹೀನಾಯಮಾನವಾದದ್ದನ್ನು ಕಂಡು ತುಂಬ ನೊಂದುಕೊಂಡರು. ಕನ್ನಡಿಗರೇ ಪರಭಾಷೆ, ಪರಸಂಸ್ಕೃತಿಯ ಆರಾಧಕರಾದದ್ದು ಅವರಿಗೆ ನೋವನ್ನುಂಟು ಮಾಡಿತು. ಅದಕ್ಕಾಗಿ ಅವರು 1927ರಲ್ಲಿ ಮೊದಲು ಕೈಕೊಂಡ ಕಾರ್ಯವೆಂದರೆ "ಕರ್ನಾಟಕ ಯುನಿಫಿಕೇಶನ್ ಅಸೋಸಿಯೇಶನ್' ಎಂಬ ಸಂಸ್ಥೆ ಸ್ಥಾಪಿಸಿ, ಅದರ ಮುಖಾಂತರ ಕನ್ನಡ ಶಾಲೆಗಳನ್ನು ಮೊಟ್ಟಮೊದಲು ಪ್ರಾರಂಭಿಸಿದರು. ಅವುಗಳಲ್ಲಿ ಒಳಸಂಗದ ಕನ್ನಡ ಶಾಲೆಯೇ ಸೋಲ್ಲಾಪುರ ಜಿಲ್ಲೆಯಲ್ಲಿಯೇ ಪ್ರಪ್ರಥಮ ಶಾಲೆಯೆಂದು ದಾಖಲೆಗಳಿಂದ ತಿಳಿದು ಬರುತ್ತದೆ. ಅವರು ಸೋಲ್ಲಾಪುರವನ್ನು ಕರ್ನಾಟಕದಲ್ಲಿ ಸೇರಿಸಬೇಕೆಂದು ಚಳುವಳಿ ಹೂಡಿದರು. ಸಭೆ-ಸಮ್ಮೇಳನಗಳನ್ನು ಕರೆದು ಹಿರಿಯ ಮುಂದಾಳುಗಳನ್ನು ಕರೆಯಿಸಿ ಕನ್ನಡದ ಪ್ರಚಾರ ಕಾರ್ಯ ಪ್ರಾರಂಭಿಸಿದರು. ಪ್ರಾಂತಪುನರ್ ರಚನೆಗಾಗಿ

ಆಗಾಗ ನೇಮಕಗೊಂಡ ಸಮಿತಿಗಳಲ್ಲೆಲ್ಲ ಕನ್ನಡ ಪರವಾಗಿ ವಾದಿಸಿದರು. ಅಭ್ಯಾಸಪೂರ್ಣ ಲೇಖನಗಳನ್ನು ಪತ್ರಿಕೆಗಾಗಿ ಬರೆದು, ಕನ್ನಡ ಭಾಷೆ, ಸಂಸ್ಕೃತಿಯ ಬಗೆಗೆ ಜನರಿಗೆ ಅರಿವನ್ನು ಮಾಡಿಕೊಟ್ಟರು.

ಕರ್ನಾಟಕದ ಐತಿಹಾಸಿಕ ಸಂಶೋಧನಾ ಕೇಂದ್ರದ ವ್ಯವಸ್ಥಾಪಕ ಸಮಿತಿಯ ಸದಸ್ಯರು, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಮುಖ ಕಾರ್ಯಕರ್ತರು, 1937 ರಲ್ಲಿಯ ವಿಜಯನಗರ ಸಾಮ್ರಾಜ್ಯ ಸಂಸ್ಥಾಪನಾ 6ನೇ ಶತಸಾಂವತ್ಸರಿಕ ಮಹೋತ್ಸವ ಸಮಿತಿಯ ಆಧಾರಸ್ತಂಬರಾಗಿದ್ದರು. ಕರ್ನಾಟಕ ರಾಜಕೀಯ ಪರಿಷತ್ತು, ಕರ್ನಾಟಕ ಮಹಿಳೆಯರ ರಾಜಕೀಯ ಪರಿಷತ್ತು, 1940, 1950ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನಗಳು ಅವರ ವಿಶೇಷ ಪರಿಶ್ರಮದ ಫಲವಾಗಿ ಸೊಲ್ಲಾಪುರದಲ್ಲಿ ನಡೆದವು. ಇನ್ನು ಎಷ್ಟೋ ಸಂಸ್ಥೆ, ಸಮಿತಿಗಳ ಅಧ್ಯಕ್ಷರು, ಕಾರ್ಯದರ್ಶಿಗಳು, ಸಲಹೆಗಾರರು ಆಗಿದ್ದರು.

ಅದರಂತೆ ಕನ್ನಡ ಓದುಗರಿಗಾಗಿ ಒಂದು ಕನ್ನಡ ವಾಚನಾಲಯವನ್ನು ತೆರೆದಿದ್ದಾರೆಂದರೆ ಅವರಿಗೆ ಕನ್ನಡ, ಕನ್ನಡಿಗರ ಮೇಲೆ ಎಷ್ಟೊಂದು ಕಾಳಜೀ ಪ್ರೇಮವಿರಬೇಡ? ಅವರ ಬಗೆಗೆ ಇನ್ನಷ್ಟು ಅಧ್ಯಯನ ನಡೆಯಬೇಕಾಗಿದೆ. ಡಾ॥ ಸಿದ್ಧನಾಥರ ಹಿರಿಯ ಸಮಕಾಲೀನರಾದ ಬ್ಯಾರಿಸ್ಟರರು ಸೊಲ್ಲಾಪುರದಲ್ಲಿ ಕನ್ನಡ ಉಳಿಸಿ ಬೆಳೆಸಲು ಬಹಳ ಶ್ರಮವಹಿಸಿದರು.

ಇಂತಹ ಪತಿಗೆ ತಕ್ಕ ಸತಿಯಾಗಿ ಪಂಚವ್ವತಾಯಿ ಸರ್ದಾರ ಕೂಡ ಸದಾ ಕಾರ್ಯನಿರತರು. 'ಮಹಿಳಾ ವೀರಶೈವ ಜ್ಞಾನಮಂದಿರ', 'ಅಕ್ಕನ ಬಳಗ' ಮುಂತಾದೆಡೆಗಳಲ್ಲಿ ಕನ್ನಡ ಸೇವೆಗೈದಿದ್ದಾರೆ. ಸಭೆ ಸಮಾರಂಭಗಳಲ್ಲಿ ಕನ್ನಡವನ್ನು ರೂಢಿಸಿಕೊಂಡು ನಿರರ್ಗಳವಾಗಿ ಮಾತನಾಡುತ್ತಿದ್ದರು. ಇಂತಹ ಶ್ರೇಷ್ಠ ಮಹಿಳೆಗೆ "ಕೈಸರಹಿಂದ" ಪದವಿ ಸಿಕ್ಕಿದ್ದರಲ್ಲೇನು ಆಶ್ಚರ್ಯವಿಲ್ಲ" ಎಂದು ಕನ್ನಡ ಹೋರಾಟಗಾರ ಶ್ರೀ ಕೆ.ಬಿ. ಪೂರ್ವಾಚಾರಿ ಅವರು ಹೇಳುತ್ತಾರೆ.

ಅಂದಿನ ಆ ಕಾಲದಲ್ಲಿ ಅವರ ಮನೆಯೊಂದು ಕನ್ನಡ ಹೋರಾಟಗಾರರ ಬೀಡಾಗಿತ್ತು. ಸತಿ-ಪತಿಗಳೊಂದಾಗಿ ಗಡಿನಾಡಿನಲ್ಲಿ ಮಾಡಿದ ಸರ್ದಾರ ದಂಪತಿಗಳ ಕನ್ನಡ ಸೇವೆ ಅನನ್ಯವಾದುದು. ಅಪೂರ್ವವಾದುದು.

## ಜಯದೇವಿತಾಯಿ ಲಿಗಾಡೆ

> **"ಗಡಿಭಾಗವೆಂದರೂ ಕಡಿಮಿಲ್ಲ ಕನ್ನಡಕ**
> **ಉಡಿಯ ತುಂಬುವೆ ಕನ್ನಡ | ತಾಯಿಗೆ**
> **ಕನ್ನಡ ಪದಗಳ ಒಡವೆಯ"**

ಎಂದು ನುಡಿದು ಗಡಿನಾಡಿನಲ್ಲಿ ಕನ್ನಡ-ಕರ್ನಾಟಕಕ್ಕಾಗಿ ಜೀವವನ್ನೇ ಮುಡುಪಾಗಿರಿಸಿ ದುಡಿದ ಒಬ್ಬಳೇ ಒಬ್ಬ ಧೀಮಂತ ಮಹಿಳಯೆಂದರೆ ಜಯದೇವಿತಾಯಿ ಲಿಗಾಡೆ ಆಗಿದ್ದಾರೆ.

"ರಾವಬಹದ್ದೂರ" ಎಂದು ಹೆಸರು ಪಡೆದ ಶ್ರೀಮಂತ ವಾರದ ಮಲ್ಲಪ್ಪನವರ ಮೊಮ್ಮಗಳಾಗಿ ಮಡಕಿ ಮನೆತನದ ಚನ್ನಬಸಪ-ಸಂಗಮ್ಮರ ಮಗಳಾಗಿ, ಲಿಗಾಡೆ ಚನ್ನಮಲ್ಲಪ್ಪನವರ ಮಡದಿಯಾಗಿ, ಐದು ಜನ ಮಕ್ಕಳ ತಾಯಿಯಾಗಿ ಸುಖಸಂಸಾರದಲ್ಲಿ ಹಾಯಾಗಿ ಇರಬಹುದಾಗಿತ್ತು. ಆದರೆ ಕನ್ನಡಮ್ಮನ ಕರೆಯನ್ನು ಮನ್ನಿಸಿ, ಕರ್ನಾಟಕ ಏಕೀಕರಣ ಚಳುವಳಿಯಲಿ ಭಾಗವಹಿಸಿದರು. ತಮ್ಮ ಜಯನಿಕೇತನ ಮನೆಯನ್ನೇ "ಕನ್ನಡಕೋಟೆ" ಯನಾಗಿಸಿ, ಕನ್ನಡಕ್ಕೆ ಅನ್ಯಾಯವಾಗಬಾರದೆಂದು, ನಿಷ್ಠಾವಂತ ಕನ್ನಡ ಯೋಧರ ಪಡೆಯನ್ನು ಸಿದ್ಧಗೊಳಿಸಿ ತಾವು ಮುಂಚೂಣಿಯಲ್ಲಿ ನಿಂತ ಅವರು ಎದುರಿಸಿದ ಕಷ್ಟನಷ್ಟಗಳಿಗೆ ಲೆಕ್ಕವಿಲ್ಲ. ಆದರೆ ಅವರ ಮುಖ್ಯ ಗುರಿ ಸಿದ್ದರಾಮೇಶ್ವರರ ಪುಣ್ಯಭೂಮಿ ಸೊಲ್ಲಾಪುರಕ್ಕೆ ಸೇರಬೇಕೆನ್ನುವುದೇ ಆಗಿತ್ತು.

ಬಾಲ್ಯದಲ್ಲಿ ಕಲಿತದ್ದು ಮರಾಠಿಯಾದರೂ ಮುಂದೆ ಕನ್ನಡ ಕಲಿತು ಎರಡು ಭಾಷೆಗಳಲ್ಲಿ ಪ್ರಭುತ್ವ ಸಂಪಾದಿಸಿ ನೀಡಿದ ಸಾಹಿತ್ಯ ಕೃತಿಗಳು ಅನನ್ಯವಾದವುಗಳು. ಜಯದೇವಿಯವರ ತಾಯಿ ಸಂಗವ್ವ ಮಡಕಿ, ಗೌರವ್ವ. ಬಸಮ ವಾರದ, ಪಂಚವ್ವ ಸರ್ದಾರ ಮುಂತಾದವರು ಹುಟ್ಟು ಹಾಕಿದ "ಮಹಿಳಾ ವೀರಶೈವ ಜ್ಞಾನಮಂದಿರವನ್ನು ಅವರು ಮುನ್ನಡೆಸಿಕೊಂಡು ಬಂದು 1937ರಲ್ಲಿ ಜಯದೇವಿತಾಯಿ ಕನ್ಯಾಶಾಲೆಯಾಗಿ ಹೊಸ ಕಟಡದೊಂದಿಗೆ ಬೆಳೆದು ನಿಂತಿತು. ಅಂದಿನ ಕಾಲದಲ್ಲಿ ಅವರು ಸ್ತ್ರೀಯರ ಏಳ್ಗೆಗಾಗಿ ದುಡಿದರು ಗಡಿಭಾಗದಲ್ಲಿ ಮಾಡಿದ ಕನ್ನಡ ಚಳುವಳಿಗಳಲ್ಲಿ ಮೊದಲನೆಯದು ಪ್ರಾಥಮಿಕ ಶಾಲೆಗಳನ್ನು ತೆರೆಯುವದು, ಅದಕ್ಕಾಗಿ ಅವರು ಅಗತ್ಯವಿದ್ದಾಗ ತಮ್ಮ ಕೈಯಿಂದ ಹಣ ಖರ್ಚು ಮಾಡಿ ಶಾಲೆಗಳನ್ನು ನಡೆಸಿದ್ದು ಕೂಡ ಅವರ ಕನ್ನಡ ಅಭಿಮಾನ, ಪ್ರೇಮದ ಸಾಕ್ಷಿಯಾಗಿದೆ.

ಮುಂಬೈಯಲ್ಲಿ, ಬೀದರದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಮಹಿಳಾ ಗೋಷ್ಠಿಯ ಅಧ್ಯಕ್ಷರಾಗಿ, ಅಖಿಲ ಕರ್ನಾಟಕ ಏಕೀಕರಣ ಸಮಿತಿಗೆ ಉಪಾಧ್ಯಕ್ಷಿಣಿಯಾಗಿಯೂ ಸ್ತ್ರೀಯರಿಗೆ ಅಖಂಡ ಕರ್ನಾಟಕ ಉದಯಕ್ಕಾಗಿ ಹೋರಾಡಲು ಕರೆ ಕೊಟ್ಟರು ರಜಾಕಾರ ಹಾವಳಿಯಲ್ಲಿಯೂ ಕೂಡ ನಿರಾಶ್ರಿತರಿಗೆ ಆಶ್ರಯ ನೀಡಿದ ಮಹಾತಾಯಿ ಅವರಾಗಿದ್ದಾರೆ.

ಸಮಗ್ರ ಕರ್ನಾಟಕ ಒಂದಾಗಬೇಕೆಂದು ಒತ್ತಾಯಿಸಿ, ಅದರಗುಂಚಿ ಶಂಕರಗೌಡ ಪಾಟೀಲರು ಆಮರಣ ಉಪವಾಸ ಸತ್ಯಾಗ್ರಹ ಮಾಡುವ ಸುದ್ದಿ ಕಿವಿಗೆ ಬಿದ್ದೊಡನೆ, ಅದಕ್ಕೆ ತಮ್ಮ ಒಪ್ಪಿಗೆ ಸೂಚಿಸಿ ರಕ್ತದಲ್ಲಿ ಸಹಿ ಮಾಡಿ, ಪತ್ರ ಕಳುಹಿಸಿದರು. ಅವರೇ ಮತ್ತೊಮ್ಮೆ ಹಂಪಿಯಲ್ಲಿ ಉಪವಾಸ ಕುಳಿತು ನಿಶ್ಯಕ್ತರಾದಾಗ, ಮನೆಯಲ್ಲಿ ಮಗಳು ಪ್ರಸವವೇದನೆಯನ್ನು ಅನುಭವಿಸುತ್ತಿದ್ದರೂ, ಆ ನಿಷ್ಠಾವಂತ ಚಳುವಳಿಗಾರನ ಕರೆಗಾಗಿ ಮಿಡಿದು ಅಲ್ಲಿಗೆ ಹೋಗಿ ಅವರ ಪ್ರಾಣ ಉಳಿಸಿದರು.

ಜಯದೇವಿತಾಯಿಯವರ ಎಲ್ಲ ಕೆಲಸಗಳಿಗೆ ಬೆಂಬಲವಾಗಿ ನಿಂತವರಲ್ಲಿ ಪ್ರಮುಖರೆಂದರೆ ಡಾ॥ ಸಿದ್ದನಾಥ ಬಳ್ಳಾರಿ, ಚೆನ್ನವೀರ ಕಲ್ಯಾಣಶೆಟ್ಟಿ, ಶಂಕರ ಮೂಗಿ ಮುಂತಾದವರು ಅವರೊಂದಿಗೆ ಗಡಿಭಾಗಗಳಲ್ಲಿ ಸಂಚರಿಸಿ, ಕನ್ನಡ ಜಾಗೃತಿಯನ್ನುಂಟು ಮಾಡುವುದು ಕೂಡ ಅವರ ಚಳುವಳಿಯ ಎರಡನೆಯ ಭಾಗವಾಗಿತ್ತು. ಸೊಲ್ಲಾಪುರದಿಂದ ಹಂಪಿ, ಹಂಪಿಯಿಂದ ಬೆಂಗಳೂರ. ಬೆಂಗಳೂರದಿಂದ ಬೇಲೂರು, ಬೇಲೂರಿನಿಂದ ಬಾಲ್ಕಿ, ಉದಗೀರಗಳವರೆಗೂ ಹೋಗಿ ಕನ್ನಡ ಪ್ರಚಾರ ಕಾರ್ಯ ಕೈಕೊಂಡರು. ಎಸ್.ನಿಜಲಿಂಗಪ್ಪ, ಹಳ್ಳಿಕೇರಿ ಗುದ್ದೆಪ್ಪ ಮುಂತಾದ ಒಳ-ಹೊರಗಿನ ನಾಡಿನ ಗಣ್ಯರಿಂದ ಮೊದಲುಗೊಂಡು ಸಾಮಾನ್ಯ ಜನರ ವರೆಗೆ ಅವರ ಕಾರ್ಯಗಳನ್ನು ಮೆಚ್ಚಿ ಶ್ಲಾಘಿಸಿದ್ದಾರೆ.

1954 ರಲ್ಲಿ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ (ಅ.ಕ.ರಾ.ನಿ.ಪ) ಸದಸ್ಯರಾಗಿದ್ದಾಗ ದಾವಣಗೇರಿಯಲ್ಲಿ ರಾಜ್ಯ ಪುನರ್ ನಿರ್ಮಾಣ ಆಯೋಗಕ್ಕೆ ಸಲ್ಲಿಸಬೇಕಾದ ಮನವಿಯಲ್ಲಿ ಸೋಲ್ಲಾಪುರದ ಹೆಸರನ್ನು ಬಿಟ್ಟುಬಿಟ್ಟಿದ್ದರು. ಆಗ ಜಯದೇವಿತಾಯಿಯವರು ನೇರವಾಗಿ ಸಭೆಯಲ್ಲಿ ಕುಳಿತ ಮುಖ್ಯ ಮುಖ್ಯ ವ್ಯಕ್ತಿಗಳಿಗೆ ಪ್ರಶ್ನಿಸಿದಾಗ ಅವರಿಗೆ ಉತ್ತರಿಸಲಾಗಲಿಲ್ಲ. ಅವರಿಗೆಲ್ಲ ಉತ್ಸ್ಫೂರ್ತವಾಗುವಂತಹ ಭಾಷಣ ಮಾಡಿ ಸೋಲ್ಲಾಪುರದ ಅವಶ್ಯಕತೆಯನ್ನು ಮನಗಾಣಿಸಿಕೊಟ್ಟರು.

ಇದಕ್ಕಿಂತ ಹಿಂದೆ 1952ರಲ್ಲಿ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ ಬೇಲೂರಿನಲ್ಲಿ ನಡೆಯಿತು. “ನಮಗೆ ಬೇರೆ ಯಾವುದು ಬೇಡ, ನಮಗೆ ಬರಬೇಕಾಗಿದ್ದುದನ್ನು ಉಳಿಸಿಕೊಳ್ಳೋಣ ಮೈಸೂರಿನವರು ಎಚ್ಚರದಿಂದ ಇರಲಿ, ಮರಾಠಿಗರಿಗೆ ಇರುವ ತಾಯಿಯ ನುಡಿಯ ನಿಷ್ಠೆ ನಮ್ಮಲ್ಲಿ ಬರಲಿ” ಎಂದು ಜನತೆಯನ್ನು ಎಚ್ಚರಿಸಿದ್ದರು. “ಜಯದೇವಿಯವರಂಥ ನಿಷ್ಕಪಟಿ, ಉದಾರಿ, ನಿಸ್ವಾರ್ಥಿ, ಅಧಿಕಾರದ ವ್ಯಾಮೋಹವಿಲ್ಲದ ಮಹಿಳೆಯ ಮುಂದೆ ಒತ್ತಾಯಕ್ಕಾಗಿಯಾದರೂ ಮೈಸೂರಿನವರು ಅಖಂಡ ಕರ್ನಾಟಕ ನಿರ್ಮಾಣಕ್ಕೆ ಒಪ್ಪಿದರು” ಎಂದು ಡಾ॥ ಸರೋಜನಿ ಚವಲಾರ ಅವರು ಹೇಳಿದ್ದಾರೆ. ಧಾರ್ ಆಯೋಗದ ವರದಿಯು ಬಂದಾಗ ಸೋಲ್ಲಾಪುರವು ಕರ್ನಾಟಕಕ್ಕೆ ಸೇರಬೇಕೆಂಬ ಸ್ಪಷ್ಟ ನಿಲುವನ್ನು ವ್ಯಕ್ತಪಡಿಸಿದರು.

ಸೋಲ್ಲಾಪುರ ಜಿಲ್ಲೆಯಲ್ಲಿ ಬಸವಜಯಂತಿ, ಅಕ್ಕನ ಜಯಂತಿ, ನಾಡಹಬ್ಬ ಮಹೋತ್ಸವಗಳನ್ನು ಆಚರಿಸುತ್ತ 'ಕನ್ನಡತನವನ್ನು, ಅವರಲ್ಲಿ ಅಡಗಿರುವ ಕನ್ನಡಾಂತಕರಣಶಕ್ತಿಯನ್ನು ಹೆಚ್ಚಿಸಿದರು. ಮರಾಠಿಗರ ಒಂದೊಂದೇ ಬೇಡಿಕೆಗಳು ದಿನದಿನಕ್ಕೆ ಹೆಚ್ಚುತ್ತಲೇ ನಡೆದವು. “ಬೆಳಗಾಂವಿ, ಬೀದರ. ಕಾರವಾರ, ಭಾಲ್ಕಿ, ನಿಪ್ಪಾಣಿ ಸಹಿತ ಮಹಾರಾಷ್ಟ್ರ ಝೂಲಾಚ ಪಾಯಿಜೆ” ಎಂಬ ಘೋಷಣೆಯೊಂದಿಗೆ ಅವರ ಹೋರಾಟ ಉಗ್ರವಾಯಿತು. ಆಗ ಕೇಂದ್ರ

ಸರಕಾರವು 1966ರಲ್ಲಿ ಏಕಸದಸ್ಯ ಆಯೋಗ ನೇಮಿಸಿ, ಮೆಹರಚಂದ ಮಹಾಜನ ಅವರನ್ನು ಕಳುಹಿಸಿ ಕೊಟ್ಟಾಗ, ಅವರು ಗಡಿಭಾಗಕ್ಕೆ ಬೆಟ್ಟಿಕೊಟು. ಪರಿಶೀಲಿಸಿ, ಸೋಲ್ಲಾಪುರವು ಕರ್ನಾಟಕಕ್ಕೆ ಸೇರಬೇಕೆಂದು ಹೇಳಿದರು, ಇದನು. ಮರಾಠಿಗರು ಒಪ್ಪಿಕೊಳ್ಳಲಿಲ್ಲ. ಕೆಲವು ಮಹಾರಾಷ್ಟ್ರ ನಾಯಕರ ಪ್ರಭಾವವು ಉಂಟಾಗಿ, ಕೇಂದ್ರಸರಕಾರವು ವಿಳಂಬ ನೀತಿಯನ್ನು ಅನುಸರಿಸಿತು. ಆಗ ಮಹಾಜನವರದಿ ಜಾರಿಗೆ ಬರುವಂತೆ ಅನೇಕರು ಮನವಿಯನು, ಸಲಿಸಿ ಒತ್ತಾಯಿಸಿದರು. ಆದರೂ ಏನೂ ಪ್ರಯೋಜನವಾಗಲಿಲ್ಲ. ಇದರಿಂದ ಜಯದೇವಿಯವರು ನೊಂದುಕೊಂಡರು. ಅವರ ಆ ನೋವು ಕೊನೆ ತನಕ ಉಳಿದುಕೊಂಡು ಬಂದಿತು.

ಇಂದಿಗೂ ಕೂಡ ಮಹಾಜನ ವರದಿ ಜಾರಿಗೆ ಬಂದಿಲ್ಲ. ಅದಕ್ಕಾಗಿ ಪಾಟೀಲ ಪುಟ್ಟಪ್ಪನವರು "ಮಹಾಜನ ವರದಿ" ಜಾರಿಗೆ ಬರುತ್ತದೆಯೋ ಇಲ್ಲವೋ ಆದರೆ ಅದು ಡೆಮಾಕ್ಸಸ್‌ನ ಖಡ್ಗದಂತೆ ನಮ್ಮ ತಲೆಯ ಮೇಲೆ ತೂಗುತ್ತಲೇ ಇದೆ" ಎಂದಿದ್ದಾರೆ.

1973ರಲ್ಲಿ ಮೈಸೂರು ರಾಜ್ಯ 'ಕರ್ನಾಟಕ'ವೆಂಬ ಹೆಸರು ಪಡೆದಾಗ ಮಾತ್ರ ಸ್ವಲ್ಪ ಮಟ್ಟಿಗಾದರೂ ಶಾಂತಿ ಸಮಾಧಾನ ಜಯದೇವಿಯವರಿಗೆ ಉಂಟಾಯಿತು. "ಕನ್ನಡ ನಾಡು ಚೆಲುವಾಗಲೆಂದು ಬರಿದೇ ಹಾಡುವುದೇಕೆ? ಚೆಲುವು ಮಾಡಿರಿ" ಎಂದು ಆಗಾಗ ಅವರು ಹೇಳುತ್ತಿದ್ದರು.

ಹೀಗೆ ಗಡಿನಾಡಿನಲ್ಲಿ ಸರ್ವಾರ್ಪಣ ಭಾವದಿಂದ ಕನ್ನಡ ಸೇವೆಗೈದು ಅದರ ಉಳಿವಿಗಾಗಿ ಹೋರಾಡಿದ ಜಯದೇವಿ ತಾಯಿಯವರ ಜೀವನವೊಂದು ಯಶೋಗಾಥೆಯಾಗಿದೆ.

## ಚೆನ್ನವೀರ ಕಲ್ಯಾಣಶೆಟ್ಟಿ

ಇವರು ಅಕ್ಕಲಕೋಟದ ಸಮೀಪವಿರುವ ದುಧನಿಯಲ್ಲಿ ಶಿಕ್ಷಕರಾಗಿದ್ದರು. ಇವರು ಕನ್ನಡ ಪರ ಚಟುವಟಿಕೆಗಳನ್ನು ನಡೆಸುವದು ಮಹಾರಾಷ್ಟ್ರ ಸರಕಾರಕ್ಕೆ ಸರಿ ಬರಲಿಲ್ಲ. ಅದಕ್ಕಾಗಿ ನೌಕರಿಯಲ್ಲಿ ಬಹಳ ಕಿರುಕುಳ ಕೊಡಲಾರಂಭಿಸಿದರು. ಇದರಿಂದ ಅವರು ತಕ್ಷಣ ರಾಜೀನಾಮೆ ನೀಡಿ ಹೊರಬರುವ ಪ್ರಸಂಗ ಎದುರಾಯಿತು. ಆಗ ಅವರು ಕುಟುಂಬಸಮೇತ ಸೊಲ್ಲಾಪುರಕ್ಕೆ ಬಂದು ಉಪಜೀವನಕ್ಕಾಗಿ ಹೊಲಿಗೆ ಉದ್ಯೋಗವನ್ನು ಅವಲಂಬಿಸಬೇಕಾಯಿತು. ಈ ಸ್ವತಂತ್ರ ಉದ್ಯೋಗದಿಂದ ಅವರಿಗೆ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಅನುವಾಯಿತು.

ಜಯದೇವಿತಾಯಿಯವರ ಮಾರ್ಗದರ್ಶನದಲ್ಲಿ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಭಾಗವಹಿಸಿ ದುಡಿದಿದ್ದಾರೆ. ಸೊಲ್ಲಾಪುರವು ಕರ್ನಾಟಕದಲ್ಲಿ ಸೇರಬೇಕೆಂಬುದೇ ಅವರ ಬಲವಾದ ಇಚ್ಚೆಯಾಗಿತ್ತು. ಮಹಾಜನ ವರದಿ ಜಾರಿಗೆ ಬರಬೇಕೆಂಬುದೇ ಅವರ ಕೂಗಾಗಿತ್ತು. ಅವರು ಹಿಡಿದ ಕನ್ನಡ ವೃತವಾಗಿತ್ತು.

ಅವರು ಕನ್ನಡ ನಾಡಿನ ಒಳ-ಹೊರಗೆ ನಡೆಯುವ ಕನ್ನಡ ಕಾರ್ಯಕ್ರಮಗಳಲ್ಲೆಲ್ಲ ಭಾಗವಹಿಸಿ ಮಹಾಜನ ವರದಿ ಜಾರಿಗೆ ಬರಲೆಂದು ಘೋಷಣೆ ಮಾಡುತ್ತಿದ್ದರು. 'ಎದ್ದರೆ ಕನ್ನಡ, ಕುಳಿತರೆ ಕನ್ನಡ' ಎನ್ನುವ, "ಎಲ್ಲಾದರೂ ಇರು, ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು' ಎಂಬ ದಿವ್ಯಮಂತ್ರವನ್ನು ಸದಾ ಪಠಿಸುವ ಕಲ್ಯಾಣಶೆಟ್ಟಿಯವರು ಅಕ್ಕಲಕೋಟದಲ್ಲಿ ಕುವೆಂಪು ಜನ್ಮನಿಮಿತ್ತ ನಡೆದ ಕಾರ್ಯಕ್ರಮದಲ್ಲಿ, ಕನ್ನಡಿಗರನ್ನು ಸನ್ಮಾನಿಸಿ, ಅವರ ಬೆನ್ನು ಚಪ್ಪರಿಸುತ್ತಲೇ ಕಣ್ಣು ಮುಚ್ಚಿದರು. ಹೀಗೆ ಅವರೊಬ್ಬ ಶ್ರೇಷ್ಠ ಕನ್ನಡ ಕಾರ್ಯಕರ್ತರಾಗಿದ್ದರು.

ನಾಗಪ್ಪಣ್ಣಾ ಕಾಡಾದಿ

ಶ್ರೀಮಂತ ಕುಟುಂಬಕ್ಕೆ ಸೇರಿದ ದಿ. ನಾಗಪ್ಪಣ್ಣಾ ಕಾಡಾದಿ ಅವರು ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ ಕಾರ್ಯಚಟುವಟಿಕೆಗಳಲ್ಲಿ ಸದಾ ತೊಡಗಿರುತ್ತಿದ್ದರು. ವಚನಗಳನ್ನು ಓದುವುದಕ್ಕಾಗಿಯೇ ಕನ್ನಡ ಕಲಿತರಲ್ಲದೆ ಅವುಗಳ ಪ್ರಸಾರ ಮಾಡಿದರು. ಕನ್ನಡ ಶಾಲೆಗಳ ಸ್ಥಾಪನೆಗೆ ತನುಮನಧನ ನೀಡಿ ಸಹಾಯ ಮಾಡಿದ್ದಾರೆ. ಕನ್ನಡ ವಿದ್ಯಾರ್ಥಿಗಳಿಗಾಗಿ ಹೈಸ್ಕೂಲ ಶಿಕ್ಷಣ ಪ್ರಾರಂಭ ಮಾಡಿದರು. ಅದೇ ಕೆ.ಎಲ್.ಇ. ಸಂಸ್ಥೆಯ "ಅಣ್ಣಪ್ಪ ಕಾಡಾದಿ' ಹೈಸ್ಕೂಲ್ ಆಗಿ ಈಗ ಬೆಳೆದು ನಿಂತಿದೆ.

ಸು. 1950ರಲ್ಲಿ ಸೋದರರೊಂದಿಗೆ ಸಂಗಮೇಶ್ವರ ಮಹಾವಿದ್ಯಾಲಯದ ಸ್ಥಾಪನೆ ಮಾಡಿ, ಅದರ ಕಾರ್ಯಾಧ್ಯಕ್ಷರಾದರು. ಅಲ್ಲಿ ಕನ್ನಡ-ಮರಾಠಿ ಎರಡೂ ಕಲಿಯುವ ವ್ಯವಸ್ಥೆಯಿದೆ. 1950ರಲ್ಲಿಯ ಕನ್ನಡ ಸಾಹಿತ್ಯ ಸಮ್ಮೇಳನದ ಯಶಸ್ಸಿಗೆ ಇವರು ಕಾರಣರಾಗಿದ್ದಾರೆ. ಮಹಾಜನವರದಿಯಲ್ಲಿ ಕನ್ನಡ ಜಾಗೃತಿಗಾಗಿ ಊರೂರು ಅಡ್ಡಾಡಿದ ಧೀಮಂತ ವ್ಯಕ್ತಿ ಇವರಾಗಿದ್ದಾರೆ. ಡಾ॥ ಸಿದ್ದನಾಥ ಬಳ್ಳಾರಿ ಅವರ ಕನ್ನಡ ಕಾರ್ಯಗಳಿಗೆ ತಮ್ಮ ಬೆಂಬಲ ನೀಡಿದ್ದಾರೆ.

## ನಾಗಪ್ಪಣ್ಣ ಅಬ್ದುಲ್ಪುರಕರ

ಶ್ರೀ ಸಿದ್ದೇಶ್ವರ ದೇವಸ್ಥಾನದ ಪಂಚಕಮಿಟಿಯ ಅಧ್ಯಕ್ಷರು, 'ಪ್ರಮುಖ ಲೋಕ ಪ್ರತಿನಿಧಿ' ಎಂಬ ಬಿರುದನ್ನು ಪಡೆದ ನಗರಾಧ್ಯಕ್ಷರು (1935 ರಿಂದ 1958) ಆಗಿ ಕನ್ನಡ ಶಿಕ್ಷಣ ಪ್ರಸಾರ ಕಾರ್ಯ ಕೈಕೊಂಡರು. ಸೊಲ್ಲಾಪುರ ಕನ್ನಡ ನಾಡಿಗೆ ಸೇರಬೇಕೆಂಬ ಚಳುವಳಿಗೆ ಪ್ರೋತ್ಸಾಹ ನೀಡಿದರು.

ಮಠಗಳ, ವಿದ್ಯಾಸಂಸ್ಥೆಗಳ, ಕೃಷಿ ಮಾರುಕಟ್ಟೆಗಳ ಬೋರ್ಡುಗಳನ್ನು ಕನ್ನಡದಲ್ಲಿ ಬರೆಸುವ ಮಹತ್ವದ ಕೆಲಸವನ್ನು ಅವರು ಮಾಡಿದ್ದಾರೆ. ಡಾ॥ ಸಿದ್ಧನಾಥ ಬಳ್ಳಾರಿ, ಬ್ಯಾರಿಸ್ಟರ. ಎಂ.ಎಸ್. ಸರ್ದಾರ, ಬಾಬಾಸಾಹೇಬ ವಾರದ, ನಾಗಪ್ಪಣ್ಣಾ ಕಾಡಾದಿ ಮುಂತಾದವರೊಂದಿಗೆ ಕೂಡಿಕೊಂಡು ಗಡಿ ಚಳುವಳಿಯನ್ನು ತೀವ್ರಗೊಳಿಸಿದ್ದಾರೆ. ಇವರು ಸಿದ್ಧನಾಥ ಬಳ್ಳಾರಿಯವರ ಹಿರಿಯ ಸಮಕಾಲೀನರಾಗಿದ್ದಾರೆ.

## ದುಧನಿಯ ಮಹಾಲಿಂಗಸ್ವಾಮಿಗಳು

ಅಕ್ಕಲಕೋಟ ತಾಲೂಕಿನಲ್ಲಿ ಬರುವ ದುಧನಿಯ ವಿರಕ್ತ ಮಠಕ್ಕೊಂದು ಐತಿಹಾಸಿಕ ಪರಂಪರೆಯಿದೆ. ಅಲ್ಲಿಯ ಮಠಾಧೀಶ ಮ.ನಿ.ಪ್ರ. ಮಹಾಲಿಂಗಸ್ವಾಮಿಗಳಿಗೆ ಕನ್ನಡದ ಮೇಲೆ ತುಂಬ ಪ್ರೀತಿ ಅಭಿಮಾನಗಳಿದ್ದವು. ಕನ್ನಡದ ಏಳ್ಗೆಗಾಗಿ ಸದಾ ಸೇವೆಗೈಯುವ ಮಹನೀಯರು ಸಿದ್ದರಾಮೇಶ್ವರನ ಸೊಲ್ಲಾಪುರವು ಕರ್ನಾಟಕಕ್ಕೆ ಸೇರಲೆಂಬುದು ಅವರ ಆಶೆಯಾಗಿತ್ತು. ಮೆಹರಚಂದ ಮಹಾಜನ ವರದಿಯನ್ನು ಕೇಂದ್ರ ಸರಕಾರಕ್ಕೆ ಸಲ್ಲಿಸುವದಕ್ಕಾಗಿ ಗಡಿಭಾಗಕ್ಕೆ ಬಂದಿದ್ದರು.

ದುಧನಿಯ ಮಹಾಸ್ವಾಮಿಗಳು ಹಿಂದಿ ಭಾಷೆಯನ್ನು ಚೆನ್ನಾಗಿ ಬಲ್ಲವರಾಗಿದ್ದರು. ಇದು ಹೇಗೋ ಗೊತ್ತಾಗಿ ಮಹಾಜನ ಅವರು ಯಾರೊಂದಿಗೆ ಹೇಳಿ ಕಳುಹಿಸಿದರು. ಇದನ್ನು ತಿಳಿದ ಕೆಲವು ಕುಹಕಿಗಳು ದುರುದ್ದೇಶದಿಂದ ಮಹಾರಾಷ್ಟ್ರ ಸರಕಾರಕ್ಕೆ ತಿಳಿಸಲು ಅವರು ಯಾವುದೋ ಒಂದು ನಿಮಿತ್ತದಿಂದ ಅವರನ್ನು ಒಮ್ಮಿಂದೊಮ್ಮೆಲೆ ಹಿಡಿದು ಬೇಡಿ ಹಾಕಿ ಜೈಲಿಗೊಯ್ದು ಹಾಕಿದರು.

ನಿಷ್ಕಪಟಿ, ನಿರಪರಾಧಿ ಸ್ವಾಮಿಗಳು ಸಂತೋಷದಿಂದ ಜೈಲು ವಾಸ ಅನುಭವಿಸಿದರು. ಇದು ನಡೆದ ಸ್ವಲ್ಪ ಹೊತ್ತಿನಲ್ಲಿಯೇ ದುಧನಿಯ ಭಕ್ತಮಂಡಳಿಗೆ ಗೊತ್ತಾಯಿತು. ಅವರೆಲ್ಲರೂ ಬಂದು ಗದ್ದಲವೆಬ್ಬಿಸಲು ಅವರಿಗೆ ತಕ್ಷಣ ಬಿಡುಗಡೆ ಮಾಡಬೇಕಾಯಿತು. ದುದನಿಯ ಹಿರಿಯರು ಇಂದಿಗೂ ಇದನ್ನು ನೆನಪಿಸಿಕೊಂಡು ಹೇಳುತ್ತಾರೆ.

## ಅಕ್ಕಲಕೋಟದ ಶ್ರೀಮಂತ ಅಣ್ಣಾರಾವ ಮೋದಿ

ಅಣ್ಣಾರಾವ ಮೋದಿ ಅವರು ಮೂಲತಃ ಕರ್ನಾಟಕದವರಾಗಿದರೂ ಮಕ್ಕಳಿರಲಾರದ ಆಗರ್ಭ ಶ್ರೀಮಂತ ವೀರಭದ್ರಪ್ಪನವರಲ್ಲಿಗೆ ದತ್ತಕ ಬಂದಿದ್ದರು. ಅವರಿಗೆ ಕನ್ನಡದ ಬಗೆಗೆ ಪ್ರೀತಿ, ಕಳಕಳಿ ಬಹಳ, ಕನ್ನಡ ಶಾಲೆಗೆ ಮಕ್ಕಳು ಹೆಚ್ಚಿಗೆ ಬರಲೆಂದು ತಮ್ಮ ಮನೆಯಿಂದ ಪಾಟಿ, ಪೆನ್ಸಿಲು, ಬಟ್ಟೆಬರೆಗಳನ್ನಲ್ಲದೆ ಪೇಪರಮೆಂಟು, ಬಿಸ್ಕಿಟ್, ಬೆಂಡು-ಬತ್ತಾಸು ಮುಂತಾದವುಗಳನ್ನು ಕೊಟ್ಟು, ಮಕ್ಕಳು ಶಾಲೆಗೆ ಬರುವಂತೆ ಮಾಡಿದ್ದೊಂದು ದೊಡ್ಡ ಸಾಹಸವೆಂದೇ ಹೇಳಬೇಕು.

ಇದರಿಂದ ಕನ್ನಡ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಿತು. ದುರ್ದೆಶೆಯಲ್ಲಿದ್ದ ಕನ್ನಡ ಶಾಲೆಗಳು ಸುಸ್ಥಿತಿಗೆ ಮರಳಿದವು. ಆದರೆ ಅವರು ಮರಾಠಿಗರ ಕೆಂಗಣ್ಣಿಗೆ ಗುರಿಯಾಗಬೇಕಾಯಿತು. ಮಹಾಜನವರದಿಯ ಸಂದರ್ಭದಲ್ಲಿ, ಕನ್ನಡಿಗರಲ್ಲಿ ಜಾಗೃತಿಯನ್ನುಂಟು ಮಾಡುವ ಸಂದರ್ಭದಲ್ಲಿ, ಅವರಿಗೆ ಅನೇಕ ಅಡಚಣೆಗಳು ಬಂದವು. ಕನ್ನಡಕ್ಕಾಗಿ ಅವರು ಅದನ್ನು ಸಂತೋಷದಿಂದ ಅನುಭವಿಸಿದರು. ಅಷ್ಟೇ ಅಲ್ಲ ಜೈಲಿಗೆ ಹೋಗುವ ಪ್ರಸಂಗವು ಬಂದಿತು. “ಕನ್ನಡಕ್ಕಾಗಿ ಹೋರಾಡುವುದರಲ್ಲಿ ನಾನು ಸಾಕಷ್ಟು ಲುಕ್ಸಾನ್ ಆಗೀನಿ” ಎಂದು ಅವರು ಆಗಾಗ ಹಿಂದಿನದೆಲ್ಲ ಜ್ಞಾಪಿಸಿಕೊಂಡು ನಮ್ಮೊಂದಿಗೆ ಹೇಳುತ್ತಿದ್ದುದು ಉಂಟು. ಇಂದಿಗೂ ಅಕ್ಕಲಕೋಟದಲ್ಲಿ ಕನ್ನಡಿಗರು ಹೆಚ್ಚಿರುವ ಸ್ಥಳ


ಬುಧವಾರ ಪೇಠ. ಅಂದು ಅವರು ಮಾಡಿದ ಪ್ರಯತ್ನ ವ್ಯರ್ಥವಾಗದೆ ಈಗಲೂ ಆ ಕನ್ನಡ ಶಾಲೆಗಳು ಸುಸ್ಥಿತಿಯಲ್ಲಿವೆ. ಅಂದು ಕೂಡ ಅಕ್ಕಲಕೋಟದಲ್ಲಿ 'ಗಡಿನಾಡ ಕನ್ನಡ ಸಂಘ'ವನ್ನು ಸ್ಥಾಪಿಸಿ, ಅದರ ಅಧ್ಯಕ್ಷರಾಗಿ, ಕನ್ನಡ ಚಟುವಟಿಕೆಗಳು ನಡೆಯುವಂತೆ ಮಾಡಿದರು.

ಒಮ್ಮೆ ಮುಂಬೈ ಶಿಕ್ಷಣ ಇಲಾಖೆಯ ನಿರ್ದೇಶಕರಾದ ರ್‍ಯಾಂಗ್ಲರ್ ಡಿ.ಸಿ.ಪಾವಟೆಯವರು ಮೈಂದರಗಿಯಲ್ಲಿ ನೇಕಾರ ಸಮಾಜದ ಕಾರ್ಯಕ್ರಮಕ್ಕೆ ಬಂದಿದ್ದರು. ಆಗ ಅವರು ಅಕ್ಕಲಕೋಟದಿಂದ ಹಾಯ್ದು ಅಲ್ಲಿಗೆ ಹೋಗುವಾಗ ಅವರನ್ನು ಸತ್ಕರಿಸಿ, ಅಲ್ಲಿಯ ಕನ್ನಡ ಶಾಲೆಗಳ ಪರಿಸ್ಥಿತಿಯನ್ನು ವಿವರಿಸಿದರು. ಇಲ್ಲಿ ಕನ್ನಡ ಶಾಲೆಗಳನ್ನು ತೆರೆಯಲು ಅವರಿಂದ ಅನುಮತಿಯನ್ನು ಪಡೆದರು. ಸ್ವತಃ ಡಿಸ್ಟ್ರಿಕ್ ಸ್ಕೂಲ್ ಬೋರ್ಡ್ ಚೆಯರ್‌ಮೆನ್‌ರಾಗಿದ್ದ ಶ್ರೀ ಅಣ್ಣಾರಾವ್ ಮೋದಿಯವರು ಅಕ್ಕಲಕೋಟ ತಾಲೂಕದಲ್ಲಿ 70-75 ಮಂದಿ `ಕನ್ನಡ ಶಿಕ್ಷಕರನ್ನು ನೇಮಿಸಿದರು. ಇದು ಅವರ ಘನವಾದ ಕಾರ್ಯವಾಗಿದೆ.

ಶ್ರೀಮಂತ ಅಣ್ಣಾರಾವ್ ಮೋದಿ ಅವರು ಅಕ್ಕಲಕೋಟ ಮಾರ್ಕೆಟಿಂಗ್ ಕಮೀಟಿ ಅಧ್ಯಕ್ಷರಾಗಿ, ಮಹಾನಗರಪಾಲಿಕೆಯ ಉಪಾಧ್ಯಕ್ಷರಾಗಿ, ಕನ್ನಡಿಗರ ಹಿತಚಿಂತಕರಾಗಿ ಒಳ್ಳೆಯ ಕಾರ್ಯಗಳನ್ನು ಮಾಡಿದರು. ಇಂದು ಅವರು ಇಲ್ಲವಾಗಿದ್ದರೂ, ಅಕ್ಕಲಕೋಟದ ಕನ್ನಡಿಗರಿಗೆ ಮಾತ್ರ ಅವರ ನೆನಪು ಚಿರಂತನವಾಗಿದೆ

ಹೀಗೆ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಮಹಾಸ್ವಾಮಿಗಳು, ಶ್ರೀಮಂತರು, ಬಡವರು, ರಾಜಕಾರಣಿಗಳು ಎಲ್ಲರೂ ಒಂದಾಗಿ ಹೋರಾಡಿದರು. ಡಾ|| ಸಿದ್ಧನಾಥ ಬಳ್ಳಾರಿ ಅವರಂತೂ ಇದಕ್ಕೆ ಪ್ರೇರಕ ಶಕ್ತಿಯಾದರು. 'ನಾಡೋಜ' ಎಂದೆನಿಸಿಕೊಂಡ ಪಾಟೀಲ ಪುಟ್ಟಪ್ಪನವರು ಕನ್ನಡ ನಾಡುನುಡಿಗಾಗಿ ಸರ್ವತೋಮುಖವಾಗಿ ಹೋರಾಡಿದಂತೆ, ಗಡಿನಾಡಿನಲಿ ಸಿದ್ದನಾಥ ಡಾಕ್ಟರರು ಅಹರ್ನಿಶ ಹೋರಾಡಿದ್ದರಿಂದ ಅವರು ತೀರಿಕೊಂಡರೂ ಇನ್ನು ಅಲ್ಲಿ ಕನ್ನಡ ಉಳಿದಿದೆ. ಉಸಿರಾಡುತ್ತಿದೆ. ಗಡಿ ಕನ್ನಡ ಚಳುವಳಿಯ ಹೋರಾಟಗಾರರೆಲ್ಲರೊಂದಿಗೆ ಕೂಡಿಕೊಂಡು "ಸೋಲ್ಲಾಪುರವು ಕರ್ನಾಟಕಕ್ಕೆ ಸೇರಲಿ' ಎಂಬ ಅವರ ಆ ಕೂಗು ಇನ್ನು ಅಲ್ಲಿ ಮಾರ್ದನಿಗೊಡುತ್ತಿದೆ. ಅದು ಆದಷ್ಟು ಬೇಗ ಈಡೇರಲಿ ಎಂದು ನಾವು ನೀವು ಹಾರೈಸೋಣವೇ.

ಡಾ॥ ಸಿದ್ಧನಾಥ ಬಳ್ಳಾರಿ ಅವರ ವಂಶಾವಳಿ



# ಗ್ರಂಥಋಣ

೧. ಕರ್ನಾಟಕ ಏಕೀಕರಣಕ್ಕೆ ದುಡಿದ ಮಹನೀಯರು - ಸಂ.ಡಾ.ಎಚ್. ಗೋಪಾಲರಾವ್: ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ೨೦೦೮

೨. ಕರ್ನಾಟಕ ಏಕೀಕರಣದ ಅನುಭವಗಳು - ಸಂ.ಪ್ರೊ.ಜಿ. ವೆಂಕಟಸುಬ್ಬಯ್ಯ, ಸಪ್ನ ಬುಕ್ ಹೌಸ್, ಬೆಂಗಳೂರು.

೩. ನಾಡು-ನುಡಿ-ನಾಡೋಜ ಪಾಟೀಲ ಪುಟ್ಟಪ್ಪ: ಹೊನ್ನಾರು ಮಾಲೆ: - ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಜಯದೇವಿತಾಯಿ ಲಿಗಾಡೆ-ಲೇಖಕಿ ಡಾ.ಸರೋಜನಿ ಚವಲಾರ, ಕನ್ನಡ - ಸಾಹಿತ್ಯ ಪರಿಷತ್ತು, ಬೆಂಗಳೂರು - ೧೯೯೨

೫. ಗಂಡಸಾದರೆ - ? ನಾಟಕಕಾರರು: ಶ್ರೀ.ಕೆ.ಬಿ. ಪೂರ್ವಾಚಾರಿ ಹುತಾತ್ಮ ಪ್ರಕಾಶನ: ನವೀಪೇಠ, ಸೋಲ್ಲಾಪುರ - ೧೯೯೮

೬. ಗರತಿಯ ಹಾಡು - ಸಂ. ಹಲಸಂಗಿ ಗೆಳೆಯರ ಬಳಗ

೭. ಕರ್ನಾಟಕ ಗಾಂಧೀ - ಮಲ್ಲಿಕಾರ್ಜುನ ಮೇತ್ರೆ

೮. ಸಿದ್ಧರಾಮೇಶ್ವರ (ತ್ರಿಪದಿಗಳು) - ಜಯದೇವಿತಾಯಿ ಲಿಗಾಡೆ

೯. ಬಸವಣ್ಣನವರ ವಚನಗಳು - ಸಂ.ವೀರಣ್ಣ ರಾಜೂರ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೧೦. ಕನ್ನಡ ಕೆಚ್ಚೆದೆಯ ಹೋರಾಟಗಾರ ಡಾ॥ ಸಿದ್ದನಾಥ ಬಳ್ಳಾರಿ - ಲೇಖಕರು, ಶ್ರೀ ಆರ್.ಟಿ. ಮಜ್ಜಿಗಿ (ಹಸ್ತಪ್ರತಿ ದೊರಕಿದ್ದು ಶ್ರೀ ರಾಜೇಂದ್ರ ಬಳ್ಳಾರಿಯವರಿಂದ)

೧೧. ಮಹಾದೇವಪ್ಪ ರಾಂಪುರೆ - ಡಾ॥ ಬಸವರಾಜ - ಪೋಲಿಸ್ ಪಾಟೀಲ - ಗುಲಬರ್ಗಾ

೧೨. ಗಡಿನುಡಿಯಬೆಡಗು - ಡಾ॥ ಗುರುಲಿಂಗಪ್ಪ ಧಬಾಲೆ ಪ್ರ: ಬಸವಧರ್ಮ ಪ್ರಸಾರ ಸಂಸ್ಥೆ, ಹಿರೇಮಠ ಸಂಸ್ಥಾನ, ಬಾಲ್ಕಿ: ಬೀದರ ಜಿಲ್ಲೆ

# ಲೇಖನಗಳು


೧. ಲೇಖನ: ಡಾ|| ಸಿದ್ಧನಾಥ ಬಳ್ಳಾರಿ - ಲೇಖಕ: ಡಾ|| ಸಿದ್ದನಾಥ ಬಳ್ಳಾರಿ

೨. ಗಡಿನಾಡ ಕನ್ನಡ ಚಳುವಳಿಯ ಹೋರಾಟಗಾರರು - ಲೇಖಕರು: ಶ್ರೀ ಧರೇಂದ್ರನಾಥ ಬಿದರಕೋಟಿ: ಸಿದ್ಧಚೇತನ (ಸ್ಮರಣ ಸಂಚಿಕೆ) ಪ್ರ.ಸಂ. ಶಕುಂತಲಾ ಹೆಗಡೆ (ಪಾಟೀಲ): ಗಡಿನಾಡ ಸಾಹಿತ್ಯ ಸಮ್ಮೇಳನ: ೨೦೦೭

೩. ಹೆತ್ತವಳ ನೆನೆದು-ಶಶಿಕಲಾತಾಯಿ ಮಡಕಿ: ಶರಣ ಸಂಪದ (ಸ್ಮರಣ ಸಂಚಿಕೆ) ಕನ್ನಡ ವಿಭಾಗ ಸಂ: ಶಕುಂತಲಾ ಹೆಗಡೆ (ಪಾಟೀಲ): ಕಲ್ಯಾಣ ಶರಣ ಸಾಹಿತ್ಯ ಪರಿಷತ್ತು ಮತ್ತು ೨೧ನೆಯ ಶರಣ ಸಾಹಿತ್ಯ ಸಮ್ಮೇಳನ ಸೊಲ್ಲಾಪುರ: ೨೦೦೧

೪. ಗಡಿನಾಡು ಕನ್ನಡ ಹೋರಾಟಗಾರ ಡಾ|| ಸಿದ್ದನಾಥ ಬಳ್ಳಾರಿ - ಲೇಖಕ: ಸಂ: ಶ್ರೀ ಆರ್.ಟಿ. ಮಜ್ಜಿಗಿ - ಜಾಗೃತವಾಣಿ ಪತ್ರಿಕೆ - ೧-೪-೨೦೧೧ - ೧೫-೪-೨೦೧೧ ಪು. ೧೦

೫. ಬ್ಯಾರಿಸ್ಟರ್.ಎಂ.ಎಸ್.ಸರ್ದಾರ - ಲೇಖಕರು: ಶ್ರೀ.ಕೆ.ಬಿ.ಪೂರ್ವಾಚಾರಿ - ಸಂಪಾದಕರು: ಸಿರಿಸೊನ್ನಲಿಗೆ ಸ್ಮರಣ ಸಂಚಿಕೆ: ಹೊರನಾಡ ಕನ್ನಡ ಸಾಹಿತ್ಯ ಸಮ್ಮೇಳನ: ಸೋಲ್ಲಾಪುರ: ೧೯೭೦

೬. ಶ್ರೀಮಂತ: ವಾರದ ಮಲ್ಲಪ: ಲೇಖಕರು: ಧರೇಂದ್ರನಾಥ ಬಿದರಕೋಟಿ
- 'ಕಪಿಲಸಿದ್ಧ' ಸ್ಮರಣ - ಸಂಚಿಕೆ - ಗಡಿನಾಡ ಸಾಹಿತ್ಯ ಸಮ್ಮೇಳನ: ಸೊಲ್ಲಾಪುರ, ೧೯೮೮.

# ಸಂದರ್ಶನ

೧. ಸೋಲ್ಲಾಪುರದ ೮೦ ವರ್ಷದ ಪ್ರಹ್ಲಾದ ಜೋಶಿ ಗುರುಗಳನ್ನು ಸಂದರ್ಶಿಸಿದಾಗ ಡಾ|| ಸಿದ್ದನಾಥ ಬಳ್ಳಾರಿಯವರನ್ನು ಕುರಿತು ಹೇಳಿದ್ದು.

೨. ಸೊಲ್ಲಾಪುರದ 'ಸುಯೋಧ ಕನ್ನಡ ಸಂಘದ ಪ್ರಥಮ ಅಧ್ಯಕ್ಷ ಕೆ.ಎನ್ ಹೂಗಾರ ಅವರು ಡಾ|| ಸಿದ್ಧನಾಥರನ್ನು ಕುರಿತು ಹೇಳಿದ್ದು.

೩. ವೇದಮೂರ್ತಿ ಬಸವರಾಜ ಶಾಸ್ತ್ರೀಯವರು ಡಾ|| ಸಿದ್ಧನಾಥರನ್ನು ಕುರಿತು ಹೇಳಿದ್ದು

೪. ಶಶಿಕಲಾತಾಯಿ ಮಡರೆ, ಲಲಿತಾತಾಯಿ ಮಡರೆ ಅವರನ್ನು ಬೆಟ್ಟಿಯಾದಾಗ ಡಾ|| ಸಿದ್ಧನಾಥರನ್ನು ಕುರಿತು ಹೇಳಿದ್ದು.

೫. ಡಾ|| ಸರೋಜಿನಿ ಚವಲಾರ, ನಾಡೋಜ ಪಾಟೀಲ ಪುಟ್ಟಪ್ಪ, ಶ್ರೀ ಆರ್.ಟಿ. ಮಜ್ಜಿಗೆ ಅವರನ್ನು ದೂರಧ್ವನಿ (ಫೋನ) ಮೂಲಕ ಸಂಪರ್ಕಿಸಿದಾಗ ಡಾ|| ಸಿದ್ಧನಾಥರನ್ನು ಕುರಿತು ಹೇಳಿದ್ದು,

೬. ಡಾ|| ಸಿದ್ದನಾಥ ಬಳ್ಳಾರಿಯವರ ಹಿರಿಯ ಸೊಸೆ ಲಲಿತಾರನ್ನು ಅವರ ಮನೆಯಲ್ಲಿ ಸಂದರ್ಶಿಸಿದಾಗ - ಅವರ ಬಗೆಗೆ ಹೇಳಿದ್ದು,

೭. ರಾಜೇಂದ್ರ ಬಳ್ಳಾರಿ ಹಾಗು ಅವರ ಪತ್ನಿ ರತ್ನಾ ಬಳ್ಳಾರಿ (ಡಾ|| ಸಿದ್ದನಾಥ ಬಳ್ಳಾರಿ ಅವರ ಕಿರಿಯ ಮಗ, ಸೊಸೆ), ಅವರನ್ನು ಸಂದರ್ಶಿಸಿದಾಗ - ಡಾ|| ಸಿದ್ಧನಾಥರನ್ನು ಕುರಿತು ಹೇಳಿದ್ದು.

೮. ಅಕ್ಕಲಕೋಟದ ಪ್ರೊ.ವ್ಹಿ.ಎ. ಮೋದಿಯವರನ್ನು ಸಂದರ್ಶಿಸಿದಾಗ ಗಡಿನಾಡಿನಲ್ಲಿ ಹೋರಾಟಗೈದ ಅಣ್ಣಾರಾವ ಮೋದಿಯವರನ್ನು ಕುರಿತು ಹೇಳಿದ್ದು.

೯. ಸೊಲ್ಲಾಪುರದ ಅಣ್ಣಪ್ಪ ಕಾಡಾದಿ ಹೈಸ್ಕೂಲದ ಅಧ್ಯಕ್ಷರಾದ ಸಿಂಧುತಾಯಿ ಕಾಡಾದಿಯವರನ್ನು ಸಂದರ್ಶಿಸಿದಾಗ ನಾಗಪ್ಪಣ್ಣ ಕಾಡಾದಿ ಅವರನ್ನು ಕುರಿತು ಹೇಳಿದ್ದು.